
ಲಂಕೇಶ್

ಮಾರ್ಚ್ 24, 2010 ರೂ. 12/-

ಲಂಕೇಶ್-75
ಹೊಸತು
ಹೊಸತು
ತರುತಿದೆ

ಬಲೆ ಬೀಸಿದ್ದು ಹೇಗೆ ಗೊತ್ತಾ?



ಬೆಂಗಳೂರು ಪಾಲಿಕೆ ಚುನಾವಣೆ ಭರಾಟೆ



ಗಣೇಶ್ ಮಂದಿರ ಬಸವರಾಜನ ದರೋಡೆ ಎಷ್ಟು?

ಕಾಂಗ್ರೆಸ್ ಟಿಕೆಟ್ ಮಾರಾಟಕ್ಕೆ

ಬಸವನಗುಡಿ ಕಟ್ಟೆ ಸತ್ಯನ ಬೀದಿ ಡ್ರಾಮಾ!



ಮಂಗಳೂರು: ಅತ್ತಾವರನ ಅಂಡರ್‌ವರ್ಲ್ಡ್ ದಂಧೆ!



ಗೋಹತ್ಯಾ ನಿಷೇಧ ಕಾಯಿದೆ-2010

ಕರ್ನಾಟಕವನ್ನು ಗುಜರಾತ್ ಮಾಡಲಿರುವ ಹೊಸ ಕಾಯಿದೆ!


ಹಿಂದೆಂದೂ ಕಂಡರಿಯದ ರೀತಿಯಲ್ಲಿ ಪ್ರಕಟವಾದ ಕರ್ನಾಟಕದ ದಮನಿತ ಜನರ ಒಕ್ಕೊರಲ ಪ್ರತಿಭಟನೆಗೆ ಮಣಿದಂತೆ ನಾಟಕವಾಡಿದ ಬಿಜೆಪಿ ಸರ್ಕಾರ ಗೋಹತ್ಯಾ ನಿಷೇಧ ತಿದ್ದುಪಡಿ ಕಾಯಿದೆ-2009ಅನ್ನು ಮಾರ್ಚ್ 3ರಂದು ಹಿಂತೆಗೆದುಕೊಂಡಿತ್ತು. ಇನ್ನೊಮ್ಮೆ ಈ ಮಸೂದೆಯನ್ನು ಮಂಡಿಸುವುದಿಲ್ಲ ಎಂಬ ಭರವಸೆಯನ್ನು ಕೊಡಿ ಎಂದು ಆಗ್ರಹಿಸಿದ ವಿರೋಧ ಪಕ್ಷಗಳಿಗೆ ಒಬ್ಬೊಬ್ಬ ಮಂತ್ರಿ ಒಂದೊಂದು ರೀತಿ ಉತ್ತರ ಕೊಟ್ಟು ವಾಪಸ್ ತೆಗೆದುಕೊಂಡಿದ್ದರ ಹುನ್ನಾರ ಬಯಲಿಗೆ ಬರದಂತೆ ನೋಡಿಕೊಂಡಿದ್ದವು.

ಆದರೆ ಗೋಹತ್ಯಾ ಮಸೂದೆ ಆರೆಸ್ಸೆಸ್‌ನ ಕಾರ್ಯಸೂಚಿಯಾದ್ದರಿಂದ ಮಸೂದೆಯನ್ನು ಅಷ್ಟು ಸುಲಭವಾಗಿ ಬಿಜೆಪಿ ಸರ್ಕಾರ ವಾಪಸ್ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ಎಲ್ಲರಿಗೂ ಗೊತ್ತಿತ್ತು. ದಿಢೀರನೆ ಎದುರಾದ ಬಿಬಿಎಂಪಿ ಚುನಾವಣೆ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಸರ್ಕಾರ ತಾತ್ಕಾಲಿಕವಾಗಿ ಮಸೂದೆಯನ್ನು ಹಿಂತೆಗೆದುಕೊಂಡಿರಬಹುದು ಮತ್ತು ಜನತೆಯ ಪ್ರತಿಭಟನೆಯನ್ನು ಕಂಡು ಮಸೂದೆಯಲ್ಲಿರುವ ಕೆಲವು ಕರಾಳ ಅಂಶಗಳಿಗೆ ಮುಖವಾಡ ತೊಡಿಸಿ ಮತ್ತೆ ಮುಂದಿನ ಅಧಿವೇಶನದಲ್ಲಿ ಮಸೂದೆಯನ್ನು ಖಂಡಿತಾ ಮಂಡಿಸಬಹುದೆಂಬುದನ್ನು ನಿರೀಕ್ಷಿಸಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಎಲ್ಲರ ಈ ನಾಗರಿಕ ನಿರೀಕ್ಷೆಯನ್ನು ಹುಸಿಗೊಳಿಸಿ ಮಾರ್ಚ್ 9ರಂದು **The Karnataka Prevention Of Slaughter And Preservation Of Cattle Bill, 2010** ಎಂಬ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದೆ.



ಈ ಮಸೂದೆಯು ಎಷ್ಟು ಕರಾಳವಾಗಿದೆ ಮತ್ತು ಕ್ರೂರವಾಗಿದೆಯೆಂದರೆ ಮುಖ್ಯಮಂತ್ರಿ ಯಡಿಯೂರಪ್ಪನವರು ನರಹಂತಕ ಮೋದಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಈ ಕಾಯಿದೆ ಜಾರಿಗೆ ಬಂದಿದ್ದೇ ಆದರೆ ಕರ್ನಾಟಕ ಆದಷ್ಟು ಬೇಗ ಗುಜರಾತ್ ಆಗುವುದರಲ್ಲಿ ಏನೂ ಸಂಶಯವಿಲ್ಲ. ಈ ಕಾಯಿದೆಯ ಕ್ರೂರ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬೇಕೆಂದರೆ ಅದರಲ್ಲಿ ಬಿಜೆಪಿ ಸರ್ಕಾರ ಅಡಕ ಮಾಡಿರುವ ಕೆಲವು ಪ್ರಮುಖ ಅಂಶಗಳನ್ನು ಗಮನಿಸಬೇಕು.

-ಮೊದಲನೆಯದಾಗಿ **The Karnataka Prevention Of Cow Slaughter And Cattle Preservation Act-1964** ಕಾಯಿದೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಂಡು ಅದರ ಬದಲಿಗೆ **The Karnataka Prevention Of Slaughter And Preservation Of Cattle Bill, 2010** ಅನ್ನು ಜಾರಿಗೆ ತರುತ್ತದೆ. ಇದರ ಹಿಂದೆ ಸರ್ಕಾರಕ್ಕೆ ಒಂದು ಸ್ಪಷ್ಟ ಉದ್ದೇಶವಿದೆ. 1964ರ ಕಾಯಿದೆ ಗೋಹತ್ಯೆಯನ್ನು ನಿಷೇಧ ಮಾಡಿದ್ದರೂ 12 ವರ್ಷಕ್ಕೆ ಮೇಲ್ಪಟ್ಟ ಹಸುಗಳನ್ನು ಕೊಲ್ಲಬಹುದಾದ ಅವಕಾಶವನ್ನು ಕಲ್ಪಿಸಿದೆಯೆಂದು ವ್ಯಾಖ್ಯಾನ ಮಾಡಬಹುದಾದ ರೀತಿಯಲ್ಲಿತ್ತು. ಆದ್ದರಿಂದಲೇ ಈವರೆಗೆ 12 ವರ್ಷ ಮೇಲ್ಪಟ್ಟ ಹಸುಗಳನ್ನೂ ಒಳಗೊಂಡಂತೆ ಇತರ ಜಾನುವಾರುಗಳನ್ನು ರೈತ ಕಸಾಯಿಖಾನೆಗೆ ಮಾರುವುದಾಗಲೀ ಅಥವಾ ವ್ಯಾಪಾರಸ್ಥರು ಮಾಂಸ ಮಾರಾಟದ ಉದ್ದೇಶದಿಂದ ಅದನ್ನು ಕೊಳ್ಳುವುದಾಗಲೀ ಅಪರಾಧವಾಗಿರಲಿಲ್ಲ. ಅಲ್ಲದೆ 1964ರ ಕಾಯಿದೆಯಲ್ಲಿ ಹಸುಗಳನ್ನು ಕೊಲ್ಲಬಾರದೆಂಬುದಾಗಿ ವ್ಯಾಖ್ಯಾನ ಮಾಡುವ ಅವಕಾಶವಿದ್ದರೂ 12 ವರ್ಷ ಮೇಲ್ಪಟ್ಟ ಎಮ್ಮೆ, ದನ, ಕೋಣ ಇನ್ನಿತರ ಜಾನುವಾರುಗಳನ್ನು ಕೊಲ್ಲಲು ಸ್ಪಷ್ಟ ಅವಕಾಶವನ್ನು ನೀಡಲಾಗಿತ್ತು.



ಆದರೆ **The Karnataka Prevention Of Slaughter And Preservation Of Cattle Bill, 2010** ಈ ಬಗೆಯ ಯಾವುದೇ ವ್ಯಾಖ್ಯಾನಗಳಿಗೆ ಅವಕಾಶವಿಲ್ಲದಂತೆ ಹಸುಗಳನ್ನೂ ಒಳಗೊಂಡಂತೆ ಕರು, ಎತ್ತು, ಕೋಣ, ಎಮ್ಮೆ ಮತ್ತದರ ಕರು ಎಲ್ಲವನ್ನೂ Cattle-ಜಾನುವಾರು ಎಂದೇ ನಿರ್ವಚನ ಮಾಡುತ್ತದೆ ಮತ್ತು ಈ ಪ್ರಸ್ತಾಪಿತ ಕಾಯಿದೆಯ ಸೆಕ್ಷನ್ (4) ರ ಪ್ರಕಾರ ಈ Cattle-ಜಾನುವಾರುಗಳನ್ನು ಕೊಲ್ಲುವುದು ಅಥವಾ ಕೊಲ್ಲುವ ಉದ್ದೇಶದಿಂದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಲಿದೆ.

- ಎರಡನೆಯದು (ಪ್ರಾಯಶಃ ಇದು ಯಡಿಯೂರಪ್ಪನ ಗುರು ಮೋದಿ ರಾಜ್ಯದಲ್ಲೂ ಇರಲಿಕ್ಕಿಲ್ಲ) ಈ ಕಾಯಿದೆಯ ಸೆಕ್ಷನ್ (5) ದನದ ಮಾಂಸವನ್ನು ಮಾರುವುದು, ಬಳಸುವುದು ಮತ್ತು ಹೊಂದುವುದನ್ನೂ ಸಹ ನಿಷೇಧಿಸುತ್ತದೆ. ಇದೇ ಈ ಕಾಯಿದೆಯ ನಿಜವಾದ ಅಂತರಂಗವನ್ನು ಬಯಲುಗೊಳಿಸುತ್ತದೆ. ಇದು ನಿಜಕ್ಕೂ ಗೋಹತ್ಯೆಯ ನಿಷೇಧದ ಉದ್ದೇಶವನ್ನು ಹೊಂದಿಲ್ಲ, ಬದಲಿಗೆ ಅದನ್ನು ತಿನ್ನುವುದನ್ನೇ ಕರ್ನಾಟಕದಲ್ಲಿ ನಿಷೇಧ ಮಾಡುತ್ತದೆ.

ಇದರ ಪರಿಣಾಮವೇನಾಗಬಹುದೆಂದು ಅರ್ಥಮಾಡಿಕೊಳ್ಳಲು ಇದನ್ನು ಈ ಕಾಯಿದೆಯ ಸೆಕ್ಷನ್ (9)ರ ಜೊತೆಗೂಡಿಸಿ ಓದಬೇಕು. ಸೆಕ್ಷನ್ 9(1)ರ ಪ್ರಕಾರ "ಈ ಕಾಯಿದೆಯ ರೀತ್ಯ ಅಪರಾಧ ಸಂಭವಿಸಿದೆ ಎಂದು ಕಂಡುಬಂದಲ್ಲಿ ಸಬ್ ಇನ್‌ಸ್ಪೆಕ್ಟರ್ ಅಥವಾ ಅದಕ್ಕೆ ಮೇಲ್ಪಟ್ಟ ಅಧಿಕಾರಿ ಅಥವಾ ಈ ಕಾಯಿದೆಯನ್ವಯ ನೇಮಕವಾದ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳು ಅಪರಾಧ ಸಂಭವಿಸಿದ ಪ್ರದೇಶವನ್ನು ಪ್ರವೇಶಿಸಿ ಆ ಅಪರಾಧವನ್ನು ಮಾಡಲು ಬಳಸಿದ ಸಾಮಗ್ರಿಗಳನ್ನು ವಶಪಡಿಸಿಕೊಂಡು" ಪ್ರಕರಣ ದಾಖಲಿಸಿಕೊಳ್ಳಬಹುದು.

ಅಂದರೆ ದನದ ಮಾಂಸವನ್ನು ತಿನ್ನುವುದನ್ನೇ ಅಪರಾಧ ಮಾಡುತ್ತಿದೆಯಲ್ಲದೆ ಎಲ್ಲಾ ಬಗೆಯ ಮಾಂಸಾಹಾರಿ



ಜನರ ಆಹಾರ ಸಂಸ್ಕೃತಿಯ ಮೇಲೆ ನಡೆಸುತ್ತಿರುವ ದಾಳಿ ಇದಾಗಿದೆ. ಈವರೆಗೆ ಈ ದೇಶದ ಬಡ ಮತ್ತು ದಲಿತ ವರ್ಗಕ್ಕೆ ಅಗ್ಗದ ದರದಲ್ಲಿ ಕನಿಷ್ಠ ಪೋಷಕಾಂಶಗಳನ್ನಾದರೂ ಒದಗಿಸುತ್ತಿದ್ದ ದನದ ಮಾಂಸವನ್ನು ತಿನ್ನುವುದೂ ಅಪರಾಧವಾಗಲಿದೆ. ಸತ್ತ ದನವನ್ನು ತಿನ್ನುವುದೂ ಸಹ ಈ ಕಾಯಿದೆ ಅಪರಾಧವನ್ನಾಗಿಸುತ್ತದೆ. ಆದ್ದರಿಂದ ದಲಿತ ಸಮುದಾಯ ಮತ್ತು ಸಂಘಟನೆಗಳು ಇನ್ನೂ ಹೆಚ್ಚಿನ ತೀವ್ರತೆಯಿಂದ ಈ ಕಾಯಿದೆಯನ್ನು ವಿರೋಧಿಸಬೇಕಾಗಿದೆ.

ಪೊಲೀಸರ ಮತ್ತು ಸರ್ಕಾರದ ದ್ವೇಷ ರಾಜಕಾರಣ ಮತ್ತು ಆಡಳಿತವನ್ನು ನೋಡಿದವರಿಗೆ ಕಾಯಿದೆಯ ಈ ಅಂಶ ತಳಮಟ್ಟದಲ್ಲಿ ಪೊಲೀಸರಿಗೆ ಎಂಥಾ ಸರ್ವಾಧಿಕಾರವನ್ನು ಕೊಡುತ್ತದೆ ಎಂಬುದು ಸರಳವಾಗಿಯೇ ಗೊತ್ತಾಗುತ್ತದೆ. ಉದಾಹರಣೆಗೆ "ಅಪರಾಧ" ಸಂಭವಿಸಿದೆಯೆಂದು ತನಿಖೆ ಮಾಡುವ ಅಧಿಕಾರಿಗೆ ಅಲ್ಲಿ ದನದ ಮಾಂಸದ ಬದಲಿಗೆ ಕೋಳಿ ಅಥವಾ ಕುರಿ ಮಾಂಸ ಸಿಕ್ಕರೂ ಅದು ದನದ ಮಾಂಸವೆಂಬ "ಅನುಮಾನ"ದ ಮೇಲೆ ಬಂಧಿಸಬಹುದು. ಏಕೆಂದರೆ ಅದು ದನದ ಮಾಂಸವಲ್ಲ ಎಂದು ಸಾಬೀತಾಗಬೇಕಿರುವುದು ಕೋರ್ಟಿನಲ್ಲಿ! ಅಲ್ಲಿಯತನಕ ಯಾವುದೇ ಬಗೆಯ ಮಾಂಸಾಹಾರಿಯೂ ಸಂಭವನೀಯ ಅಪರಾಧಿಯೇ ಆಗುತ್ತಾನೆ/ಳೆ. ಕರಾವಳಿ ಮತ್ತು ಸಂಘಪರಿವಾರದ ಪ್ರಾಬಲ್ಯವಿರುವ ಕಡೆ ಇದು ಸಂಘಪರಿವಾರದ ವಿರೋಧಿಗಳಿಗೆ, ಮುಸ್ಲಿಮರಿಗೆ, ಸಾಮಾನ್ಯ ಜನರಿಗೆ ಎಂಥಾ ಮುಸೀಬತ್ ತಂದೊಡ್ಡಬಹುದೆಂಬುದು ಊಹೆಗೆ ನಿಲುಕದ್ದೇನಲ್ಲ!

-ಮೂರನೆಯದು ಮತ್ತು ಅತಿಮುಖ್ಯವಾದದ್ದು ಇದು ರಾಜ್ಯದ ಎಲ್ಲಾ ರೈತರನ್ನೂ ಸಂಭವನೀಯ ಅಪರಾಧಿಗಳನ್ನಾಗಿಸುತ್ತದೆ. ಈ ಕಾಯಿದೆಯ ಸೆಕ್ಷನ್ (8) "ಜಾನುವಾರುಗಳನ್ನು ಕೊಲ್ಲುವ ಉದ್ದೇಶದಿಂದ ಮಾರುವುದು, ಕೊಳ್ಳುವುದು, ಅಥವಾ ಪರಭಾರೆ ಮಾಡುವುದನ್ನು ನಿಷೇಧಿಸುತ್ತದೆ". ಹಾಗೆಯೇ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಅಂದರೆ ಇನ್ನುಮುಂದೆ ಮುದಿಗೊಡ್ಡಾಗಿರುವ ದನಗಳನ್ನು ಪರಭಾರೆ ಮಾಡುವ ರೈತನೂ ಅಪರಾಧಿಯಾಗಲಿದ್ದಾನೆ. ಏಕೆಂದರೆ ಸೆಕ್ಷನ್ (8)ರ ವಿವರಣೆಯ ಪ್ರಕಾರ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಮಾರಿದರೆ ಮಾತ್ರವಲ್ಲ ಆ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಕೊಳ್ಳಲಾಗುತ್ತಿದೆ ಎಂದು "ಗೊತ್ತಿದ್ದರೆ ಅಥವಾ ದನಗಳನ್ನು ಕೊಲ್ಲಲೆಂದೇ ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿದ್ದೂ" ಮಾರಿದರೂ ಸಹ ಈ ಕಾಯಿದೆ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಆದರೆ ರೈತನಿಗೆ ಗೊತ್ತಿದ್ದೂ ಮಾರಿದ್ದಾನೆ ಎಂಬುದನ್ನು ಮತ್ತು ಕೊಲ್ಲಲೆಂದು ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿತ್ತು ಎಂಬುದನ್ನು ನಿರ್ಧರಿಸುವವರು ಯಾರು? ಅಪರಾಧವನ್ನು ತಡೆಗಟ್ಟಲು ಬರುವ ಸಬ್ ಇನ್‌ಸ್ಪೆಕ್ಟರ್ ಅಥವಾ ಇತರ ಅಧಿಕಾರಿಗಳು! ಅಂದರೆ ಈಗಾಗಲೇ ಆತ್ಮಹತ್ಯೆಯ ಅಂಚಿನಲ್ಲಿರುವ ರೈತನ ಬದುಕು ಮತ್ತು ನೆಮ್ಮದಿ ಪೊಲೀಸ್ ಅಧಿಕಾರಿಗಳ ಮತ್ತು ಸರ್ಕಾರದ ಮರ್ಜಿಗೆ ಬೀಳುತ್ತದೆ.

ಏಕೆಂದರೆ ಕಾಯಿದೆಯ ಪ್ರಕಾರ ಇವೆಲ್ಲವೂ ಶಿಕ್ಷಾರ್ಹ ಅಪರಾಧವಾದ್ದರಿಂದ ಜಾಮೀನು ರಹಿತ ಅಪರಾಧಗಳಾಗಿವೆ. ಇವುಗಳಿಗೆ ಜಿಲ್ಲಾ ಕೇಂದ್ರಗಳಲ್ಲಿರುವ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲೇ ಜಾಮೀನು ಸಿಗಲು ಸಾಧ್ಯ. ಇದು ತತ್‌ಕ್ಷಣದಲ್ಲಿ ರೈತ ಎದುರಿಸಬೇಕಾದ ಕಿರುಕುಳವಾದರೆ ಮುದಿಗೊಡ್ಡು ದನಗಳನ್ನು ಯಾವ ಕಾರಣಕ್ಕೂ ಪರಭಾರೆ ಮಾಡುವುದನ್ನು ಈ ಕಾಯಿದೆ ನಿಷೇಧ ಮಾಡುತ್ತದೆ. ಸೆಕ್ಷನ್ (18)ರ ಪ್ರಕಾರ ಇಂಥಾ ದನಗಳನ್ನು ನೋಡಿಕೊಳ್ಳಲು ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆ ಆಶ್ರಮಗಳನ್ನು ಸ್ಥಾಪಿಸಿದರೂ ಅದರ ನಿರ್ವಹಣೆಗೆ ರೈತ ಶುಲ್ಕ ಪಾವತಿಸಬೇಕಾಗುತ್ತದೆ. ಅಂದರೆ ಈಗಾಗಲೇ ಸಾಲದ ಭಾರದಿಂದ ಕಂಗೆಟ್ಟಿರುವ ರೈತನ ಮೇಲೆ ಸರ್ಕಾರ ಈ ಕಾಯಿದೆಯ ಮೂಲಕ ಇನ್ನೂ ಹೆಚ್ಚಿನ ಹೊರೆಯನ್ನೂ ಹೊರಿಸುವುದಲ್ಲದೆ ಆತನ ಮೇಲೆ ಸದಾ ಬಂಧನ ಮತ್ತು ಶಿಕ್ಷೆಯ ತೂಗುಕತ್ತಿಯನ್ನು ನೇತುಹಾಕಿದೆ.

ಆದ್ದರಿಂದಲೇ ಈ ನಾಡಿನ ಎಲ್ಲಾ ರೈತರು ಮತ್ತು ರೈತ ಸಂಘಗಳು ಈ ಮಸೂದೆಯನ್ನು ಮೀನಮೇಷ ನೋಡದೆ ವಿರೋಧಿಸಲು ಮುಂದೆ ಬರಬೇಕಿದೆ.

- ನಾಲ್ಕನೆಯದಾಗಿ ಈ ಹೊಸ ಕಾಯಿದೆ ಇಂಥಾ ಜನವಿರೋಧಿ ಕಾಯಿದೆಯನ್ನು ವಿರೋಧಿಸುವುದನ್ನೇ ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಕಾಯಿದೆಯ ಸೆಕ್ಷನ್ (14)ರ ಪ್ರಕಾರ "ಈ ಕಾಯಿದೆಯಲ್ಲಿ ನಮೂದಿಸಲಾಗಿರುವ ಯಾವುದೇ ಅಪರಾಧವನ್ನು ಮಾಡಲು ಪ್ರೋತ್ಸಾಹ-ಪ್ರಚೋದನೆ (Abetment) ಮಾಡುವುದೂ" ಸಹ ಈ ಕಾಯಿದೆಯ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಇದರರ್ಥವೇನಾಗುತ್ತದೆ? ಈ ದೇಶದಲ್ಲಿ ದನದ ಮಾಂಸ ತಿನ್ನುವುದು ಕೂಡಾ ಬಹುಸಂಖ್ಯಾತ ಜನರ ಆಹಾರ ಸಂಸ್ಕೃತಿಯಾಗಿದೆ. ಆದ್ದರಿಂದ ಅದನ್ನು ನಿಷೇಧಿಸುವುದು ಅಪರಾಧ ಎಂದು ಪ್ರತಿಪಾದಿಸುವುದನ್ನೂ ದನದ ಮಾಂಸ ತಿನ್ನಲು ನೀಡುತ್ತಿರುವ ಪ್ರಚೋದನೆ ಎಂದು ಭಾವಿಸಬಹುದು. ದನದ ಮಾಂಸ ತಿನ್ನುವುದೇ ಈ ಕಾಯಿದೆಯ ಪ್ರಕಾರ ಅಪರಾಧವಾಗುತ್ತಾದ್ದರಿಂದ 'ದನದ ಮಾಂಸ ತಿನ್ನುವುದು ಅಪರಾಧವಲ್ಲ' ಎನ್ನುವುದೇ ದನದ ಮಾಂಸ ತಿನ್ನಲು ಅಂದರೆ ಅಪರಾಧ ಎಸಗಲು ನೀಡುತ್ತಿರುವ ಪ್ರಚೋದನೆ ಎಂದು ಪರಿಗಣಿಸಿ ಅಂಥವರನ್ನು ಬಂಧಿಸಬಹುದು!

ಪ್ರಚೋದಕರನ್ನು ಶಿಕ್ಷಿಸುವ ಅವಕಾಶಗಳು ಕೇವಲ "ಭಯೋತ್ಪಾದನೆ ನಿಗ್ರಹ" ಮತ್ತು ಇನ್ನಿತರ "ದೇಶದ್ರೋಹ" ತಡೆಗಟ್ಟಲು ರಚಿಸಲಾದ ಟಾಡಾ, ಪೋಟಾ, ಕೋಕಾದಂಥ ಕಾಯಿದೆಗಳಲ್ಲಿ ಮಾತ್ರ ಕಂಡುಬರುತ್ತಿತ್ತು. ಆ ಕಾಯಿದೆಗಳಲ್ಲೇ ಯಾರನ್ನ ಬೇಕಾದರೂ ಬೇಕಾಬಿಟ್ಟಿ ಬಂಧಿಸುವ ಅವಕಾಶ ಕಲ್ಪಿಸುತ್ತದೆ ಎಂಬ ಕಾರಣಕ್ಕೆ ಟಾಡಾ ಮತ್ತು ಪೋಟಾಗಳೇ ರದ್ದಾಗಿದ್ದವು.

▶▶16

ನೋ ಕಾಮೆಂಟ್ಸ್

"ಇಂದು ಚಳವಳಿಗಾರರು ಜೈಲಿನಲ್ಲಿದ್ದಾರೆ. ಸಾಮಾ ಜನ ಜಾಮೀನಿನ ಮೇಲಿದ್ದಾರೆ."

- ಕಲ್ಕುಳಿ ವಿಠಲ್ ಹೆ

"ವಿದೇಶಾಂಗ ಮಂತ್ರಿ ಶಶಿ ತರೂರ್ ನಮ ಆಸ್ತಿಯೆಂಬುದೇನೋ ಸರಿ. ಆದರೆ ತನ್ನ ಅರ್ಧ ಸಮಯವ ತಾನು ಟ್ವಿಟರ್‌ನಲ್ಲಿ ಬಳಸಿದ ಇಂಗ್ಲಿಷಿನ ಅರ್ಥವೇನು ಎಂದು ಪಕ್ಷದವರಿಗೆ ವಿವರಿಸಲು ಮತ್ತು ಅವರ ಇಂಗ್ಲಿಷನ್ ಅರ್ಥಮಾಡಿಕೊಳ್ಳಲು ಸಮಯ ಕಳೆಯುವವರು ಮಂತ್ರಿ ಸ್ಥಾನದಲ್ಲಿರಲು ಅನರ್ಹರು."

- ವಿ. ಸುದರ್ಶನ್
ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದ

"ಹಿಂದೂ ಸ್ವಾಮೀಜಿಗಳನ್ನು ದೇವರಿಗೆ ಸಮನಾಗಿ ಕಾಣಲಾಗುತ್ತದೆ. ಆ ನಂಬಿಕೆಗಳಿಗೆ ಮಸಿ ಬಳಿಯಲು ಕೆಲ ಮಾಧ್ಯಮಗಳು ನಿತ್ಯಾನಂದ ಸ್ವಾಮಿ ಪ್ರಕರಣವನ್ನು ಸೃಷ್ಟಿಸಿವೆ."

- ಪ್ರಮೋದ್ ಮುತಾಲಿಕ್

"ಹಿಂದೆ ಗೋಮಾಂಸವನ್ನು ಯಾಗಯಜ್ಞಾದಿಗಳಲ್ಲಿ ಬಳಸಲಾಗುತ್ತಿತ್ತು. ಅಂಥವರನ್ನೇ ವಾಜಪೇಯಿ ಎಂದು ಕರೆಯುತಿದ್ದರು. ಈಗ ಲಂಕೇಶ್ ಇದ್ದಿದ್ದರೆ ಗೋಮಾಂಸಕ್ಕೆ 'ವಾಜಪೇಯಿ ಖಾದ್ಯ' ಎಂದು ಹೆಸರಿಡುತ್ತಿದ್ದರೇನೋ?"

- ದೇವನೂರು ಮಹಾದೇವ

"ಮುಸ್ಲಿಂ ಸಮುದಾಯದ ಒಂದು ದೊಡ್ಡ ಸಮಸ್ಯೆಯೆಂದರೆ ಅವರ ನಾಯಕತ್ವ ಮೂಲಭೂತವಾದಿಯಾಗದೆ ಮುಸ್ಲಿಮರ ನಾಯಕನಾಗಲು ಸಾಧ್ಯವಿಲ್ಲವೆನ್ನುವ ಅಭಿಪ್ರಾಯ ಈಗಲೂ ಇದೆ. ಪಾರ್ಸಿ ಹುಡುಗಿಯನ್ನು ಮದುವೆಯಾಗಿದ್ದ ಮಹಮ್ಮದ್ ಅಲಿ ಜಿನ್ನಾರಂಥ ಉದಾರವಾದಿಯೊಬ್ಬರೇ ಕೇವಲ ಮುಸ್ಲಿಂ ನಾಯಕರಾಗಲು ಹೋಗಿ ಮೂಲಭೂತವಾದಿಯಾಗಿ ಪರಿವರ್ತನೆಗೊಂಡ ದುರಂತವನ್ನು ಇತಿಹಾಸದಲ್ಲಿ ಕಾಣಬಹುದು."

- ದಿನೇಶ್ ಅಮೀನ್ ಮಟ್ಟು

"ಅನೇಕ ಖಾಸಗಿ ಡೀಮ್ಡ್ ವಿವಿಗಳು ತಮ್ಮ ಶೈಕ್ಷಣಿ ಮತ್ತು ಸಂಶೋಧನಾ ಗುಣಮಟ್ಟವನ್ನು ಸುಧಾರಿಸುವುದಕ್ಕಿಂ ಆದಾಯ ಹೆಚ್ಚಿಸಿಕೊಳ್ಳುವುದರತ್ತ ಹೆಚ್ಚು ಗಮನ ಹರಿಸಿವೆ."

- ಯುಜಿಸಿ ಸಮಿತಿ ವರ

ನಂಬಿದ್ರೆನಂಬಿ ಬಿಟ್ರೆಬಿಡಿ

"ದೇಶದ ಹೈಕೋರ್ಟುಗಳೂ ಸೇರಿದಂತೆ ವಿವಿ ಕೋರ್ಟುಗಳಲ್ಲಿ ಬಾಕಿ ಇರುವ 3.12 ಕೋಟಿ ಪ್ರಕರಣಗಳನ್ ಇತ್ಯರ್ಥ ಮಾಡಲು 320 ವರ್ಷಗಳು ಹಿಡಿಯುತ್ತವೆ."

- ನ್ಯಾಯಮೂರ್ತಿ ವಿವಿ ರಾವ

"ಸಮಗ್ರ ಕರ್ನಾಟಕದ ಸಮರ್ಥ ನಾಯಕ- ಎಚ್.ಡಿ. ಕುಮಾರಸ್ವಾಮಿ' ಎಂಬ ಈ ಪುಸ್ತಕದಲ್ಲಿ ವ್ಯಕ್ತಿಯ ಸಾಮಾಜಿ ಹಾಗೂ ರಾಜಕೀಯ ಬದುಕು ಹೇಗೆ ಸಾಗುತ್ತದೆ ಎಂಬುದ ವಿವರಿಸಲಾಗಿದೆ. ಇದು ಭಟ್ಟಂಗಿತನದ ಪುಸ್ತಕದ ಮಾದರಿ ಸೇರುವುದಿಲ್ಲ."

- ಪ್ರೊ. ಕೆ. ಇ. ರಾಧಾಕೃ

ನಿಮ್ಮ ಮೂರ್ತಿ ನಿರ್ಮಾಣಕ್ಕೆ ವೆಚ್ಚ ಮಾಡಿದ ಕಾಲು ಭಾಗ ಸಾಕಿತ್ತಲ್ಲವೇ?

"ನಮ್ಮ ಸರ್ಕಾರ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವು ರಿಂದ ಆಶ್ರಮದಲ್ಲಿ ಕಾಲ್ತುಳಿತದಿಂದ ಸತ್ತ 63 ಜನರಿ ಕೊಡುವಷ್ಟು ಹಣ ನಮ್ಮಲ್ಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಈ ಬಾಧಿತರಿಗೆ ಹಣ ಒದಗಿಸಬೇಕೆಂದು ಕೋರುತ್ತೇವೆ

- ಮಾಯಾವ

ಸ್ವಾಮಿಯನ್ನು ಬಿಟ್ಟೇವು, ಆಸ್ತಿಯನ್ನು ಮಾತ್ರ ಬಿಡೆವು

"ನಿತ್ಯಾನಂದ ಸ್ವಾಮಿಗಳ ವಿರುದ್ಧದ ಆರೋ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇ ವಿನಃ ಆಶ್ರಮ ಸ್ವಾಧೀನಪಡಿಸಿಕೊಳ್ಳಲು ಮುಂದಾಗಬಾರದು

- ಶಿವ ಸ್ವಾಮೀಜಿ, ಯೋಗ ವಿಜ್ಞಾನ ಸಂ

ಪ್ರಶ್ನೆ ನಿಮಗೆ ಅಷ್ಟು ಶಕ್ತಿ ಹೇಗೆ ಬಂತೆಂಬುದೇ ಅಲ್ಲವೇ?

"ದೇವೇಗೌಡ್ರು ಪ್ರತಿಯೊಬ್ಬ ರೈತರಿಗೂ 5,000 ರ ಕೊಟ್ಟು ದೆಹಲಿಗೆ ಕರೆದೊಯ್ಯುತ್ತಿದ್ದಾರೆ. ನನಗೂ ಒಂ ಲಕ್ಷ ಜನರನ್ನು ಕರೆದುಕೊಂಡು ಹೋಗುವ ಶಕ್ತಿ ಇದೆ

- ಅಶೋಕ್ ಖೇ

ಇದೇ ಅಸಲಿ ಬಜೆಟ್ ಭಾಷಣ!

"ತೆರಿಗೆ ದರ ಹೆಚ್ಚಿಸದೆ ಇಲ್ಲವೇ ಸರ್ಕಾರ ತನ್ನ ವೆ ಕಡಿವಾಣ ಹಾಕದಿದ್ದರೆ ಸದ್ಯಕ್ಕೆ ಗರಿಷ್ಠ ಪ್ರಮಾಣದಲ್ಲಿ ವಿತ್ತೀಯ ಕೊರತೆಯನ್ನು ತಗ್ಗಿಸಲು ಸಾಧ್ಯವಾಗಲಾರದು

- ಗೋವಿಂದರಾ
ಪ್ರಧಾನಿಯ ಆರ್ಥಿಕ ಸಲಹೆ

ಮಹಿಳಾ ಮೀಸಲಾತಿ ಮತ್ತು ರಾಜಕಾರಣಿಗಳ ಸೊಗಲಾಡಿತನ



ಕಂಡಹಾಗೆ

ಗೌರಿ ಲಂಕೇಶ್

ಕಳೆದ ಹನ್ನೆರಡು ವರ್ಷಗಳಿಂದ ದೂಡಲ್ಪಡುತ್ತಲೇ ಬಂದಿದ್ದ ಮಹಿಳಾ ಸಲಾತಿ ಕಾಯಿದೆ ಮೊನ್ನೆ ರಾಜ್ಯ ಸಭೆಯಲ್ಲಿ ೀಕಾರ ಪಡೆದಿದೆ. ನಮ್ಮ ಸಂವಿಧಾನದ 109 ತಿದ್ದುಪಡಿಯಾದ ಈ ಕಾಯಿದೆಯಿಂದಾಗಿ ದಿನ ಸಂಸತ್ತಿನಲ್ಲಿ 190 ಕ್ಕೂ ಹೆಚ್ಚು ಮಹಿಳಾ ವರಿರುತ್ತಾರೆ. ಹಾಗೆಯೇ ಬರುವ ದಿನಗಳಲ್ಲಿ ರಾಜ್ಯಗಳ ವಿಧಾನಸಭೆಗಳಲ್ಲಿ ಒಟ್ಟು 1800 ಕ್ಕೂ ಹೆಚ್ಚು ಮಹಿಳಾ ಶಾಸಕರಿರುತ್ತಾರೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಗೆ 60 ವರ್ಷಗಳಾಗಿದ್ದರೂ ಈಗಲೂ ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ 10 ಅನ್ನು ದಾಟಿರಲಿಲ್ಲ ಎಂಬ ಹಿನ್ನೆಲೆಯಲ್ಲಿ ನೋಡಿದಾಗ ಈ ಕಾಯಿದೆಯ ಮಹತ್ವ ಮನವರಿಕೆಯಾಗುತ್ತದೆ. ಆದ್ದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ. 50 ಸ್ಥಾನಗಳಲ್ಲದಿದ್ದರೂ ಕನಿಷ್ಠ ಶೇ. 33 ಸ್ಥಾನಗಳನ್ನು ಕಾಯ್ದಿರಿಸಲಿಡುತ್ತಿರುವ ಈ ಕಾಯಿದೆ ಸ್ವಾಗತಾರ್ಹ.

ಆದರೆ ಇದರೊಂದಿಗೆ ಹಲವು ಪ್ರಶ್ನೆಗಳತ್ತಲೂ ಗಮನ ಹರಿಸುವ ಅಗತ್ಯವಿದೆ. ಈ ಕಾಯಿದೆಯಿಂದಾಗಿ ಮಹಿಳೆಯರ ಸಬಲೀಕರಣ ವಾಗುತ್ತದೆಯೇ? ಹೆಚ್ಚು ಮಹಿಳೆಯರು ದರು ಮತ್ತು ಶಾಸಕರಾದ ಮಾತ್ರಕ್ಕೆ ಕೋದ್ಧಾರ ಆಗುತ್ತದೆಯೇ? ಹಣಬಲ ಮತ್ತು ತ್ಬಲ ಇಲ್ಲದಿದ್ದರೆ ಚುನಾವಣೆಗಳಲ್ಲಿ ಗೆಲುವು ಬಿಲ್ಲ ಎಂಬ ಪರಿಸ್ಥಿತಿ ಈಗ ಣಗೊಂಡಿರುವುದರಿಂದ ನಿಜವಾಗಲೂ ಾಣಿಕ ಸ್ತ್ರೀವಾದಿಗಳು, ಹಿಂದುಳಿದ/ದಲಿತ/ ಸಂಖ್ಯಾತ ಮಹಿಳೆಯರು ಚುನಾಯಿತ ಗಳಲ್ಲಿ ಪ್ರಾತಿನಿಧ್ಯ ಪಡೆಯಲಾಗುತ್ತದೆಯೇ? ಈ ದೆ ನಿಜವಾಗಲೂ ವಾಸ್ತವಕ್ಕೆ ಎಷ್ಟು ವಾಗಿದೆ?

ಇವೆಲ್ಲ ಮುಖ್ಯ ಪ್ರಶ್ನೆಗಳು. ಆದರೆ ಈ ದೆಯನ್ನು ವಿರೋಧಿಸಿ, ಮೀಸಲಾತಿಯಲ್ಲಿ ೀಸಲಾತಿ ಇರಬೇಕೆಂದು ಯಿಸುತ್ತಿರುವವರ ಪ್ರಾಮಾಣಿಕತೆಯನ್ನೂ ಬೇಕಿದೆ. ಅವುಗಳಲ್ಲಿ ಒಂದು: "ಮೇಲುಜಾತಿ ರುರಿಗೆ ಮಾತ್ರವಲ್ಲ, ಹಿಂದುಳಿದ ವರ್ಗಗಳ ಯರಿಗೂ ಪ್ರಾತಿನಿಧ್ಯ ನೀಡುವುದಕ್ಕೆ ೀಸಲಾತಿ ಬೇಕು" ಎಂದೇ ವಾದಿಸುತ್ತಿರುವ ಜವಾದಿ ಪಕ್ಷದ ಮುಲಾಯಂ ಸಿಂಗ್ ಯಾದವ್ ಆಗಲಿ, ಆರ್‌ಜೆಡಿಯ ಲಾಲೂ ಪ್ರಸಾದ್ ಯಾದವ್ ಆಗಲಿ, ಜೆಡಿಯುನ ಶರದ್ ಯಾದವ್ ಆಗಲಿ ಅದೆಷ್ಟು ದ್ರೌಪದಿಯರಿಗೆ ತಮ್ಮ ಪಕ್ಷದ ವತಿಯಿಂದ ಟಿಕೆಟ್ ನೀಡಿ ಪ್ರೋತ್ಸಾಹಿಸಿದ್ದಾರೆ? ಗೆಲ್ಲಿಸಿದ್ದಾರೆ? ಆಚಾರ ಹೇಳೋಕೆ, ಬದನೆಕಾಯಿ ತಿನ್ನೋಕೆ ಎಂಬಂತಿದೆ ಅಲ್ಲವೆ ಇವರೆಲ್ಲರ ನಡವಳಿಕೆ?

ಇನ್ನು ಈ ಕಾಯಿದೆಯ ಪರವಿರುವ ಪಕ್ಷಗಳ ಸೋಗಲಾಡಿತನದತ್ತಲೂ ನೋಡಬೇಕು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಬಾರಿ ಯಡವಟ್ಟುಗಳನ್ನು ಮಾಡಿಕೊಳ್ಳುತ್ತಲೇ ಸಾಗಿದೆ. ಇತ್ತೀಚಿನ ಬೆಲೆ ಏರಿಕೆಯಂತೂ ದೇಶದ ಮಧ್ಯಮ ವರ್ಗ ಮತ್ತು ಬಡವರನ್ನು ಕಂಗೆಡಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಮಹಿಳಾ ಮೀಸಲಾತಿಯನ್ನು



ಜಾರಿಗೆ ತಂದು ತಾನೊರ್ವ ಕ್ರಾಂತಿಕಾರಿ ಪಕ್ಷ ಎಂಬಂತೆ ಪೋಸು ಕೊಡುತ್ತಿದೆ. ಎಡಪಂಥೀಯ ಪಕ್ಷಗಳು ಮತ್ತು ಬಲಪಂಥೀಯ ಬಿಜೆಪಿಗಳು ಕೂಡ ತಮ್ಮ ನಡುವಿನ ಸೈದ್ಧಾಂತಿಕ ಅಂತರವನ್ನು ಮರೆತು ಈ ಕಾಯಿದೆಯನ್ನು ಬೆಂಬಲಿಸಿವೆ. ಆದರೆ ಅದು ಅಷ್ಟು ಅಚ್ಚರಿ ಹುಟ್ಟಿಸುವುದಿಲ್ಲ. ಏಕೆಂದರೆ ಒಂದು ಕಡೆ ಜಾತಿಯ ಹೆಸರಲ್ಲಿ ಆಗುವ ಶೋಷಣೆಯನ್ನು ಮರೆಸಿ, ಎಲ್ಲರನ್ನೂ 'ಹಿಂದೂ'ಗಳೆಂದು ಬಿಂಬಿಸಿ ಫ್ಯಾಸಿಸ್ಟ್ ರಾಜಕಾರಣವನ್ನು ಬಿಜೆಪಿ ಮಾಡುತ್ತಿದೆ. ಹಾಗೆಯೇ ಇನ್ನೊಂದು ಕಡೆ ಜಾತಿಗಳು ಮುಖ್ಯವಲ್ಲ ಬದಲಾಗಿ ವರ್ಗ ಸಂಘರ್ಷ ಮುಖ್ಯ ಎಂದೇ ನಂಬಿರುವ ಕಮ್ಯುನಿಸ್ಟರಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಎರಡೂ ಪಕ್ಷಗಳು ಕೈಜೋಡಿಸಿವೆ.


ಇದನ್ನೆಲ್ಲ ಬದಿಗಿಟ್ಟು ನೋಡಿದರೆ, 'ಮಹಿಳೆಯರು' ಒಂದು ನಿರ್ದಿಷ್ಟ ಚೌಕಟ್ಟಿಗೆ ಸೇರಿರುವವರಲ್ಲ, ಅವರೆಲ್ಲ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಎರಡನೆ ದರ್ಜೆಯ ಪ್ರಜೆಗಳಂತೆ ಜೀವಿಸುತ್ತಿರುವುದು ಒಂದು ಸಂಗತಿಯಾದರೆ ಅವರಲ್ಲಿ ಬ್ರಾಹ್ಮಣ, ಮೇಲುಜಾತಿ, ಹಿಂದುಳಿದ ವರ್ಗ, ದಲಿತ, ಅಲ್ಪಸಂಖ್ಯಾತ, ಆರ್ಥಿಕ ಸ್ಥಿತಿಗತಿ, ವಿದ್ಯಾಭ್ಯಾಸ, ನಗರ, ಗ್ರಾಮೀಣ ಪ್ರದೇಶ ಇತ್ಯಾದಿ ರೀತಿಯ ವಿವಿಧ ಸ್ತರಗಳ ಮಹಿಳೆಯರೂ ಇರುತ್ತಾರೆ. ಅವರೆಲ್ಲರನ್ನೂ ಏಕರೂಪವಾಗಿ ಪರಿಗಣಿಸುವುದು ತಪ್ಪಾಗುತ್ತದೆ. ಯಾಕೆಂದರೆ ಬಡತನ, ಜಾತಿಭೇದ, ಧಾರ್ಮಿಕ ನಿರ್ಬಂಧಗಳ ಆಧಾರದ ಮೇಲೆ ಬೇರೆ ಬೇರೆ ಮಹಿಳೆಯರ ವೇದನೆಗಳು, ಶೋಷಣೆಗಳು ಬೇರೆಬೇರೆಯೇ ಆಗಿರುತ್ತವೆ.

ಆದ್ದರಿಂದ ಈಗ ಶೇ. 33 ಮೀಸಲಾತಿಯನ್ನು ಮಹಿಳೆಯರಿಗೆ ನೀಡಲಾಗಿದ್ದರೂ ಬರುವ ದಿನಗಳಲ್ಲಿ ಒಳಮೀಸಲಾತಿಯನ್ನು ಜಾರಿಗೆ ತಂದು ನಮ್ಮ ದೇಶದ ಎಲ್ಲಾ ಸ್ತರಗಳ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕಿದೆ.

ಅಷ್ಟೇ ಅಲ್ಲ ಮಹಿಳೆಯರಿಗೆ ಒಳಮೀಸಲಾತಿ ಸೃಷ್ಟಿಸುವಂತೆ ಪುರುಷರಿಗೂ ಒಳಮೀಸಲಾತಿಯನ್ನು ಜಾರಿಗೊಳಿಸಬೇಕಿದೆ. ಇಲ್ಲೊಂದು ಅಂಶವನ್ನು ಗಮನಿಸಬೇಕು. ಯಾವ ಪುರುಷ ನಾಯಕರು ಮಹಿಳೆಯರಿಗೆ ಒಳಮೀಸಲಾತಿ ಇರಬೇಕೆಂದು ಒತ್ತಾಯಿಸುತ್ತಿದ್ದಾರೋ ಅವರ್‍ಯಾರೂ ಪುರುಷರಿಗೂ ಅದೇ ಮಾನದಂಡವನ್ನು ವಿಧಿಸಬೇಕೆಂದು ಮಾತ್ರ ತುಟಿಪಿಟಿಕ್ ಅನ್ನುತ್ತಿಲ್ಲ. ಆದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ ಪುರುಷರಿಗೂ, ಮಹಿಳೆಯರಿಗೂ ಮೀಸಲಾತಿ ಸಿಗುವಂತೆ ನೋಡಿಕೊಳ್ಳಬೇಕಿರುವುದು ಪ್ರಜಾತಂತ್ರದಲ್ಲಿ ನಂಬಿರುವವರ ಕರ್ತವ್ಯವಾಗಬೇಕಿದೆ.

ಹಾಗಾದಾಗ ಮಾತ್ರ ಈ ಪ್ರಜಾತಂತ್ರ ರೂಪದಲ್ಲಿ (form) ಮಾತ್ರವಲ್ಲ, (content) ಎಲ್ಲರಿಗೆ ಪ್ರಾತಿನಿಧ್ಯ ಕೊಟ್ಟಂತಾಗುತ್ತದೆ. ಮೀಸಲಾತಿ-ಅದು ಈಗ ಶೇ. 33 ಮಾತ್ರವಾಗಿದ್ದರೂ-ಆ ನಿಟ್ಟನಲ್ಲಿ ಒಂದು ಹೆಜ್ಜೆ ಎಂದು ಆಶಿಸಬಹುದೇ....

ಹಂಪಿ ವಿವಿ ಸಂತೋಷದ ಸುದ್ದಿ



ಈ ಸಂಚಿಕೆ ಅಚ್ಚಿಗೆ ಹೋಗುವ ಮುನ್ನ ನಾವೂ ನೀವೂ ಎಲ್ಲರೂ ಸಂತೋಷ ಪಡುವ ಸುದ್ದಿಯೊಂದು ಬಂದಿದೆ. ಹಂಪಿ ವಿಶ್ವವಿದ್ಯಾಲಯಕ್ಕೆ ಸೇರಿದ 220 ಎಕರೆ ಭೂಮಿಯನ್ನು ಅಕ್ರಮವಾಗಿ, ಅನೈತಿಕವಾಗಿ ಸಂಘಪರಿವಾರ ಪ್ರೇರಿತ ಸರ್ಕಾರಿ ಮುಸುಕಿನ ಖಾಸಗಿ ಟ್ರಸ್ಟ್‌ಗೆ ಪರಭಾರೆ ಮಾಡಲು ಹೊರಟಿದ್ದ ಬಿಜೆಪಿ ಸರ್ಕಾರ ಈಗ ಆ ನಿರ್ಧಾರವನ್ನು ಕೈಬಿಟ್ಟಿದೆ.

ಸರ್ಕಾರದ ಈ ಅಕ್ರಮದ ವಿರುದ್ಧ ಕನ್ನಡ ನಾಡಿನ ಎಲ್ಲಾ ಆರೋಗ್ಯವಂತ ಮನಸ್ಸುಗಳು, ಚಿಂತಕರು, ಬುದ್ಧಿಜೀವಿಗಳು ಮತ್ತು ಪ್ರಗತಿಪರ ಸಂಘಟನೆಗಳು ಅಭೂತಪೂರ್ವ ಐಕ್ಯತೆಯಿಂದ ಹೋರಾಡಿದ್ದರು. ಇಡೀ ನಾಡಿಗೆ ನಾಡೇ ಒಂದಾಗಿ ತಿಂಗಳ ಕಾಲ ರಾಜಿ ಇಲ್ಲದ ಹೋರಾಟ ನಡೆಸಿದ್ದರು. ಪ್ರಾಯಶಃ ಪ್ರಪ್ರಥಮ ಬಾರಿಗೆ ನಾಡಿನ ವಿಶ್ವವಿದ್ಯಾಲಯವೊಂದರ ಅಧ್ಯಾಪಕ ವರ್ಗ ಮತ್ತು ಬೋಧಕೇತರ ಸಿಬ್ಬಂದಿ ಅಪಾರ ಐಕ್ಯಮತ್ಯತೋರಿ ಹೆಗಲಿಗೆ ಹೆಗಲಾಗಿ ಈ ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದರು.

ಆತ್ಮಸಾಕ್ಷಿ, ಸ್ವಾಭಿಮಾನಕ್ಕಿಂತ ಮಿಗಿಲಾದದ್ದು ಏನೂ ಇಲ್ಲವೆಂದು ಹೋರಾಟಕ್ಕೆ ನಿಂತ ಹಂಪಿ ವಿಶ್ವವಿದ್ಯಾಲಯದ ಅಧ್ಯಾಪಕ ವರ್ಗ ಮತ್ತು ಬೋಧಕೇತರ ಸಿಬ್ಬಂದಿ ಸರ್ಕಾರದ ವಿರುದ್ಧ ಪರ್ಯಾಯ ನೈತಿಕ ಶಕ್ತಿಯಾಗಿ ರಾಜ್ಯಾದ್ಯಂತ ಒಂದು ಪ್ರಬಲ ಸಾತ್ವಿಕ ಕ್ರೋಧವನ್ನು ಪ್ರಜ್ಞಾವಂತರಲ್ಲಿ ಹುಟ್ಟುಹಾಕಿದ್ದರು. ಹೀಗಾಗಿ ಹಂಪಿ ಉಳಿಸಿ ಚಳವಳಿ ಹಣಮದ ಮತ್ತು ಅಧಿಕಾರ ಮದದ ವಿರುದ್ಧ ಸಾತ್ವಿಕ ಶಕ್ತಿಯ, ಸಾಕ್ಷೀಪ್ರಜ್ಞೆಯ ಪ್ರತಿರೋಧವಾಗಿ ರೂಪುಗೊಂಡಿತ್ತು.

ಈ ಹೋರಾಟದಲ್ಲಿ ಕೊನೆಗೂ ಜಯ ನ್ಯಾಯಕ್ಕೆ ಮತ್ತು ಸತ್ಯಕ್ಕೇ ದಕ್ಕಿದೆ. ಇದಕ್ಕೆ ಕಾರಣರಾದ ಹಂಪಿ ವಿವಿಯ ಅಧ್ಯಾಪಕ ವರ್ಗಕ್ಕೂ, ಬೋಧಕೇತರ ಸಿಬ್ಬಂದಿಗೂ ಅಭಿನಂದನೆಗಳು. ಹಾಗೆಯೇ ಅವರ ಬೆಂಬಲಕ್ಕೆ ನಿಂತು ಅಭೂತಪೂರ್ವ ಸೌಹಾರ್ದತೆ ಮತ್ತು ಹೋರಾಟದ ಕೆಚ್ಚು ತೋರಿದ ನಾಡಿನ ಎಲ್ಲಾ ಪ್ರಜ್ಞಾವಂತರಿಗೂ, ಬರಹಗಾರರಿಗೂ, ಚಿಂತಕರಿಗೂ, ಜನಪರ ಸಂಘಟನೆಗಳಿಗೂ ಅಭಿನಂದನೆಗಳು.

ಈ ವಿಜಯ ತಂದಿರುವ ನೈತಿಕ ಸ್ಥೈರ್ಯ ಸೌಹಾರ್ದ ಕರ್ನಾಟಕವನ್ನು ಕುಲಗೆಡಿಸಲು ಹೊರಟಿರುವ ಕೋಮುವಾದಿಗಳ, ಪಟ್ಟಭದ್ರರ ಎಲ್ಲಾ ಹುನ್ನಾರಗಳನ್ನು ಎದುರಿಸಲು ಬೇಕಾದ ಹೋರಾಟದ ಕೆಚ್ಚನ್ನು ತಂದುಕೊಡಲಿ. 'ಲಂಕೇಶ್' ಯಾವಾಗಲೂ ನಿಮ್ಮ ಜೊತೆಗಿರುತ್ತದೆ.

ಮತ್ತೊಮ್ಮೆ ಈ ಸಂತೋಷದ ಸಂದರ್ಭದಲ್ಲಿ ಎಲ್ಲರಿಗೂ ಅಭಿನಂದನೆಗಳು.


ಕಭಿ ಇದರ್ ಕಭಿ ಉದರ್



ಮೊನ್ನೆ ತಾನೆ ಬಾಲಿವುಡ್‌ನ ಮಿನುಗುತಾರೆ ಅಮಿತಾಬ್ ಬಚ್ಚನ್ ನರಹಂತಕ ನರೇಂದ್ರ ಮೋದಿಯೊಂದಿಗೆ ಕೈಕುಲುಕುತ್ತಿದ್ದ ಫೋಟೋಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅಮಿತಾಬ್ ಬಚ್ಚನ್ ಗುಜರಾತ್ ರಾಜ್ಯದ ಅಧಿಕೃತ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿರುವ ಸುದ್ದಿಯೂ ಬದಿಯಲ್ಲಿತ್ತು.

ಕೊಚ್ಚೆ ರಾಡಿಯಂತೆ ಗಬ್ಬೆದ್ದುಹೋಗಿರುವ ರಾಜಕಾರಣಕ್ಕೆ ತಮ್ಮ ಹೀರೋಗಳು ಇಳಿಯಬಾರದು ಎಂದೇ ಸಾಮಾನ್ಯವಾಗಿ ಚಿತ್ರತಾರೆಯರ, ಕ್ರೀಡಾಪಟುಗಳ, ಹಾಡುಗಾರರ, ಚಿತ್ರಕಲಾವಿದರ ಅಭಿಮಾನಿಗಳು ಬಯಸುತ್ತಾರೆ. ಸಮಾಜದಲ್ಲಿ ಕೋಮುದಳ್ಳುರಿ ಹಚ್ಚಿ ಅದರ ಬೆಂಕಿಯಲ್ಲಿ ಚಳಿಕಾಯಿಸಿಕೊಳ್ಳುವ ಕೋಮುವಾದಿಗಳಿಂದ, ಕಂಡಲ್ಲಿ ಬಾಂಬಿಟ್ಟು ಅಮಾಯಕರ ದೇಹಗಳನ್ನು ಛಿದ್ರಗೊಳಿಸುವ ಭಯೋತ್ಪಾದಕರಿಂದ, ಕುತ್ತಿಗೆತನಕ ಭ್ರಷ್ಟಾಚಾರದಲ್ಲಿ ಮುಳುಗಿರುವ ಅಧಿಕಾರಶಾಹಿ-ರಾಜಕಾರಣಿಗಳ ಮೈತ್ರಿಯಿಂದ ದೂರವಿದ್ದು ತಮ್ಮ ತಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲೇ ಗಣನೀಯ ಸೇವೆಗೈದು ಅದನ್ನು ಶ್ರೀಮಂತಗೊಳಿಸಬೇಕೆಂದು ಹಂಬಲಿಸುತ್ತಾರೆ. ಸಚಿನ್ ತೆಂಡೂಲ್ಕರ್‌ನಂತಹ ಕ್ರೀಡಾಪಟುಗಳು, ಡಾ.ರಾಜ್‌ಕುಮಾರ್‌ನಂತಹ ಕೆಲವೇ ಕಲಾವಿದರು ತಮ್ಮ ಅಭಿಮಾನಿಗಳ ಅಭಿಲಾಷೆಗನುಗುಣವಾಗಿಯೇ ತಮ್ಮ ಕ್ಷೇತ್ರದಲ್ಲೇ ಸೇವೆ ಸಲ್ಲಿಸುತ್ತಾ ಅದನ್ನು ಶ್ರೀಮಂತಗೊಳಿಸುವಲ್ಲಿ ತಲ್ಲೀನರಾದಾಗ ಸಹಜವಾಗಿಯೇ ಅವರ ಅಭಿಮಾನಿಗಳೂ ಖುಷಿಯಾಗುತ್ತಾರೆ. ಆದರೆ ಕೆಲವು ನಟರು, ಕಲಾವಿದರು, ಕ್ರೀಡಾಪಟುಗಳು ತಮ್ಮ ಅಭಿಮಾನಿಗಳ ಇಚ್ಛೆಗೆ ವ್ಯತಿರಿಕ್ತವಾಗಿ ರಾಜಕೀಯಕ್ಕಿಳಿದು ಮೈಕೈ ಹೊಲಸು ಮಾಡಿಕೊಂಡಾಗ ತಮ್ಮ ನಾಯಕರನ್ನು ದೇವರಂತೆ ಪೂಜಿಸುವ ಮನಸ್ಥಿತಿ ಹೊಂದಿರುವ ಅಭಿಮಾನಿಗಳು ಅಷ್ಟೇ ಸಹಜವಾಗಿ ನಿರಾಶೆಗೊಳಗಾಗುತ್ತಾರೆ. ಈಗ ಅಮಿತಾಬ್ ಬಚ್ಚನ್ ವಿಚಾರದಲ್ಲೂ ಅದೇ ಆಗಿದೆ. ತನ್ನ ಅತ್ಯದ್ಭುತ ತಲ್ಲೀನತೆಯ ನಟನೆಯ ಮೂಲಕ ಅರವತ್ತೆಂಟರ ಇಳಿವಯಸ್ಸಿನಲ್ಲೂ ಬಾಲಿವುಡ್‌ನಲ್ಲಿ ಸದಾ ಮಿನುಗುವ ತಾರೆಯಂತಿರುವ ಅಮಿತಾಬ್ ಬಚ್ಚನ್ ಮನುಷ್ಯರ ರಕ್ತ ಕುಡಿಯುವ ರಕ್ಕಸನಾಗಿರುವ ನರೇಂದ್ರ ಮೋದಿಯೊಂದಿಗೆ ಕೈಜೋಡಿಸಿರುವುದು, ಭಾರತದಲ್ಲಿ ಅಲ್ಪಸಂಖ್ಯಾತರ ಜೆನೋಸೈಡ್‌ಗಳ ಪ್ರಯೋಗಾಲಯದಂತಿರುವ ಗುಜರಾತ್‌ನ ಅಧಿಕೃತ ರಾಯಭಾರಿಯಾಗಿರುವುದು ಅವರ ಕೋಟಿ ಕೋಟಿ ಅಭಿಮಾನಿಗಳಿಗೆ ನಿಸ್ಸಂಶಯವಾಗಿ ನಿರಾಶೆ ಮೂಡಿಸಿದ್ದು ಮಾತ್ರವಲ್ಲ, ಅವರ ಮನಸ್ಸನ್ನು ಅತೀವವಾಗಿ ಕಲಕಿದೆ ಕೂಡ.


ತನ್ನ ಅತ್ಯದ್ಭುತ ತಲ್ಲೀನತೆಯ ನಟನೆಯ ಮೂಲಕ ಅರವತ್ತೆಂಟರ ಇಳಿವಯಸ್ಸಿನಲ್ಲೂ ಬಾಲಿವುಡ್‌ನಲ್ಲಿ ಸದಾ ಮಿನುಗುವ ತಾರೆಯಂತಿರುವ ಅಮಿತಾಬ್ ಬಚ್ಚನ್ ಮನುಷ್ಯರ ರಕ್ತ ಕುಡಿಯುವ ರಕ್ಕಸನಾಗಿರುವ ನರೇಂದ್ರ ಮೋದಿಯೊಂದಿಗೆ ಕೈಜೋಡಿಸಿರುವುದು, ಭಾರತದಲ್ಲಿ ಅಲ್ಪಸಂಖ್ಯಾತರ ಜೆನೋಸೈಡ್‌ಗಳ ಪ್ರಯೋಗಾಲಯದಂತಿರುವ ಗುಜರಾತ್‌ನ ಅಧಿಕೃತ ರಾಯಭಾರಿಯಾಗಿರುವುದು ಅವರ ಕೋಟಿ ಕೋಟಿ ಅಭಿಮಾನಿಗಳಿಗೆ ನಿಸ್ಸಂಶಯವಾಗಿ ನಿರಾಶೆ ಮೂಡಿಸಿದ್ದು ಮಾತ್ರವಲ್ಲ, ಅವರ ಮನಸ್ಸನ್ನು ಅತೀವವಾಗಿ ಕಲಕಿದೆ....



ನಿಮಗೆ ನೆನಪಿರಬೇಕು. ಇದೇ ಮೋದಿ 2002ರಲ್ಲಿ ಗುಜರಾತ್‌ನಲ್ಲಿ ಮೂರು ಸಾವಿರ ಅಮಾಯಕ ಮುಸ್ಲಿಮರ ಮಾರಣಹೋಮ ಮಾಡಿದ. ಅದಾದ ಎರಡೇ ವರ್ಷದಲ್ಲಿ ಗೋವಿಂದ ನಿಹಲಾನಿ 'ದೇವ್' ಎಂಬ ಸಿನಿಮಾ ಮಾಡಿದರು. ಅದರಲ್ಲಿ ರಾಜ್ಯದ ಮುಖ್ಯಮಂತ್ರಿ ಬಂಡಾರ್ಕರ್ (ಅಮರೀಷ್ ಪುರಿ) ರಾಜಕೀಯ ಲಾಭಕ್ಕಾಗಿ ಕೋಮುಗಲಭೆಗಳನ್ನು ನಡೆಸಿ ಸಾವಿರಾರು ಅಮಾಯಕರು ನಡುಬೀದಿಯಲ್ಲಿ ಸಾಯುವಂತೆ ಮಾಡುತ್ತಾನೆ. ಹೆಚ್ಚೂಕಡಿಮೆ ನರೇಂದ್ರ ಮೋದಿಯ ಪಾತ್ರವೇ ಅದು. ದೇವ್ ಪ್ರತಾಪ್ ಸಿಂಗ್ ಎಂಬ ನೆಲದ ಕಾನೂನಿಗೆ ಅತ್ಯಂತ ನಿಷ್ಠನಾಗಿರುವ, ಪ್ರಾಮಾಣಿಕನಾಗಿರುವ ಪೊಲೀಸ್ ಅಧಿಕಾರಿ ಮುಖ್ಯಮಂತ್ರಿಯ ವಿರುದ್ಧವೇ ಸೆಟೆದುನಿಲ್ಲುತ್ತಾನೆ. ದೇವ್ ಪ್ರತಾಪ್ ಸಿಂಗ್ ಎಂಬ ಒಬ್ಬ ಪ್ರಾಮಾಣಿಕ, ನಿಷ್ಠೂರ, ದೇಶಭಕ್ತ ಪೊಲೀಸ್ ಅಧಿಕಾರಿಯ ಪಾತ್ರ ಮಾಡಿದ್ದು ಬೇರೆ ಯಾರೂ ಅಲ್ಲ, ಇದೇ ಅಮಿತಾಬ್ ಬಚ್ಚನ್. ಈಗ ನಿಜಜೀವನ ನೋಡಿ. ಅದೇ ಅಮಿತಾಬ್ ಬಚ್ಚನ್ ತನ್ನ ರಾಜಕೀಯ ಹಿತಾಸಕ್ತಿಗಾಗಿ ಜನರ ರಕ್ತ ಹೀರುವಲ್ಲಿ ನಿಸ್ಸೀಮನಾಗಿರುವ ನರೇಂದ್ರ ಮೋದಿಯೊಂದಿಗೆ ಕೈಜೋಡಿಸಿದ್ದಾರೆ. ಅಮಿತಾಬ್ ಯಾವತ್ತೂ ದೇವ್ ಪ್ರತಾಪ್ ಸಿಂಗ್ ಆಗಿಯೇ ಇರಬೇಕೆಂದು ಬಯಸುವ ಅವರ ಅಭಿಮಾನಿಗಳು ಮೋದಿಯೊಂದಿಗೆ ಕೈಜೋಡಿಸಿದರೆ ನೋವಾಗದಿರುತ್ತದೆಯೆ?

ಅಮಿತಾಬ್ ಬಚ್ಚನ್ ಒಬ್ಬ ಅತ್ಯದ್ಭುತ ನಟ ಎಂಬುದರಲ್ಲಿ ಎರಡು ಮಾತಿಲ್ಲ. ಇದಕ್ಕೆ ಅವರ ಹಿಂದಿರುವ ಅಭಿಮಾನಿ ಜನಸಾಗರಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ; ಅವರಿಗೆ ಮೈಯಲ್ಲಿ ಹುಷಾರಿಲ್ಲ ಎಂದು ಪತ್ರಿಕೆಯಲ್ಲಿ ವರದಿಯಾದಾಗ ಇಡೀ ಉತ್ತರ ಭಾರತದಾದ್ಯಂತ ಹಲವಾರು ಅಭಿಮಾನಿಗಳು ಹತ್ತು ಹಲವು ರೀತಿಯ ಪೂಜೆಪುನಸ್ಕಾರಗಳನ್ನು ಮಾಡಿ ಅವರಿಗೆ ಬೇಗ ಗುಣವಾಗಲಿ ಎಂದು ಮೊರೆಯಿಟ್ಟ ಸತ್ಯಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ಅರವತ್ತು ವರ್ಷವಾದರೂ ಇನ್ನೂ ಕಾಲೇಜು ಹುಡುಗನ ಪಾತ್ರವೇ ಬೇಕೆಂದು ಹಠ ಹಿಡಿಯುವ, ಪಾತ್ರಕ್ಕನುಗುಣವಾಗಿ ತಮ್ಮನ್ನು ಮಾರ್ಪಡಿಸಿಕೊಳ್ಳದೇ ತಮ್ಮ ಇಚ್ಛೆ ಇಮೇಜುಗಳಿಗನುಗುಣವಾಗಿ ಪಾತ್ರಗಳನ್ನೇ ಮಾರ್ಪಡಿಸುವ ಅರೆಬೆಂದ ಕಲಾವಿದರೇ ತುಂಬಿರುವ ಇಂದಿನ ಪರಿಸ್ಥಿತಿಯಲ್ಲಿ ಎಂಥ ಪಾತ್ರಕ್ಕಾದರೂ ಸಿದ್ಧವಾಗಿ ನಿಲ್ಲುವ, ಅಭಿನಯಿಸುವಾಗ ತನ್ನತನವನ್ನು ಕಳೆದುಕೊಂಡು ಪಾತ್ರದಲ್ಲಿ ತಲ್ಲೀನವಾಗಿ ಮರುಹುಟ್ಟು ಪಡೆಯುವ ಅಮಿತಾಬ್ ಸಿನಿಮಾ ಲೋಕದಲ್ಲಿ ಒಂದು ಅಪವಾದವಾಗಿ, ಒಂದು ಅನುಕರಣೀಯ ಮಾದರಿಯಾಗಿ ನಿಲ್ಲುತ್ತಾರೆ. ತೀರಾ ಇತ್ತೀಚೆಗೆ ಬಂದ 'ಪಾ' ಚಿತ್ರದಲ್ಲಿ ಒಂದು ವಿಶಿಷ್ಟ ಕಾಯಿಲೆಯಿಂದ ಬಳಲುವ ಮಗುವಿನ ಪಾತ್ರ ಮಾಡಿದ್ದಿರಬಹುದು, ಕೆಲವು ವರ್ಷಗಳ ಹಿಂದೆ ಬಂದ 'ಕಭಿ ಅಲ್ವಿದನಾ ಕೆಹನಾ', 'ಬ್ಲಾಕ್', 'ರಾಜ್ ಸರ್ಕಾರ್'ಗಳಂತಹ ಚಿತ್ರಗಳಲ್ಲಿ ಅವರು ಅಭಿನಯಿಸಿದ ಪಾತ್ರಗಳಿರಬಹುದು ಅವೆಲ್ಲವೂ ಅಮಿತಾಬ್ ಬಚ್ಚನ್ ಹೇಗೆ ಇಂತಹ ಇಳಿವಯಸ್ಸಿನಲ್ಲೂ ಎಂಥ ಪಾತ್ರವಾದರೂ ಸರಿ ಅದನ್ನೊಂದು ಸವಾಲಾಗಿ ಸ್ವೀಕರಿಸಿ ಅಭಿನಯಿಸಬಲ್ಲರು ಎಂಬುದನ್ನು ಎತ್ತಿ ತೋರಿಸುತ್ತವೆ. ಅಂತಹ ಮೇರುನಟನೂ ಕೂಡ ಒಮ್ಮೊಮ್ಮೆ ವೈಯಕ್ತಿಕ ಲಾಭಕ್ಕಾಗಿ, ದುಡ್ಡಿಗಾಗಿ, ವರ್ಚಸ್ಸಿಗಾಗಿ ಅಭಿಮಾನಿಗಳ ಆಶೆ ಆಕಾಂಕ್ಷೆಗಳನ್ನೂ ಮಣ್ಣುಪಾಲು ಮಾಡುತ್ತಾರೆ, ಅಭಿಮಾನಿಗಳ ಮನಸ್ಸನ್ನೂ ಅತೀವವಾಗಿ ಕಲಕಿ ನೋವುಂಟುಮಾಡುತ್ತಾರೆ ಎಂಬುದಕ್ಕೆ ಮೊನ್ನೆ ಅವರು ಗುಜರಾತ್‌ನ ರಾಯಭಾರಿಯಾಗಿದ್ದೇ ಸಾಕ್ಷಿ.





ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

ವಾಸ್ತವದಲ್ಲಿ ಅಮಿತಾಬ್ ಬಚ್ಚನ್ ಇರೋದೇ ಹಾಗೆ. ಅವರೆಂದೂ ಅಭಿಮಾನಿಗಳ ಆಕಾಂಕ್ಷೆ ಮತ್ತು ತನ್ನ ವೈಯಕ್ತಿಕ ಹಿತಾಸಕ್ತಿ ಇವೆರಡರ ನಡುವೆ ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾದರೆ ಅವರು ಎರಡನೇಯದನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಸುಸ್ಮಿತಾ ದಾಸ್ ಗುಪ್ತ ಅವರು ಬರೆದಿರುವ "*Amitabh: The Making of a Superstar*" ಎಂಬ ಅಮಿತಾಬ್ ಅವರ ಜೀವನ ಚರಿತ್ರೆಯನ್ನು ಅಥವಾ ಸ್ವತಃ ಅಮಿತಾಬ್ ಅವರೇ ಇತ್ತೀಚೆಗೆ ಬರೆಯುತ್ತಿರುವ ಬ್ಲಾಗ್ ಬರವಣಿಗೆಗಳನ್ನು ಗಮನಿಸಿದರೆ ಸಾಕು ಅವರ ಎಡಬಿಡಂಗಿತನ ಅರ್ಥವಾಗಿ ಹೋಗುತ್ತದೆ.

ಅಮಿತಾಬ್ ಬಚ್ಚನ್ ಒಬ್ಬ ನಟನಾಗುವ ಮೊದಲೇ ಬಚ್ಚನ್ ಕುಟುಂಬ ನೆಹರೂ ಕುಟುಂಬಗಳ ನಡುವೆ ಅತ್ಯಂತ ನಿಕಟ ಬಾಂಧವ್ಯವಿತ್ತು. ಅಮಿತಾಬ್ ಅವರ ತಂದೆ ಹಾಗೂ ಪ್ರಸಿದ್ಧ ಕವಿ ಹರಿವಂಶ್ ರಾಯ್ ಬಚ್ಚನ್ ಅವರು ಸರೋಜಿನಿ ನಾಯ್ಡು ಮೂಲಕ ಅಲಹಾಬಾದ್‌ನಲ್ಲಿರುವ ಆನಂದಭವನದಲ್ಲಿ ನೆಹರೂ ಕುಟುಂಬವನ್ನು ಭೇಟಿಯಾಗಿದ್ದರು. ಆಗಿನ್ನೂ ಇಂದಿರಾ ಗಾಂಧಿಗೆ ಮದುವೆಯೂ ಆಗಿರಲಿಲ್ಲ. ಸರೋಜಿನಿ ನಾಯ್ಡು ಅವರು ಹರಿವಂಶ್ ಮತ್ತು ಅವರ ಸಿಖ್ ಧರ್ಮೀಯ ಪತ್ನಿ ತೇಜಿ ಸೂರಿಯರನ್ನು 'ಕವಿ ಮತ್ತು ಕಾವ್ಯ' ಎಂದು ಬಹಳ ಮಾರ್ಮಿಕವಾಗಿ ನೆಹರೂ ಕುಟುಂಬಕ್ಕೆ ಪರಿಚಯಿಸಿದ್ದರು. (ಮುಂದೆ ಇಂದಿರಾ ಗಾಂಧಿಯವರು ಬಹಳ ವರ್ಷಗಳ ಕಾಲ ತೇಜಿಯವರನ್ನು ವಿದೇಶಿಯರಿಗೆ ಪರಿಚಯಿಸುವಾಗಲೆಲ್ಲಾ ಇದೇ ಪದಗುಚ್ಛವನ್ನು ಬಳಸುತ್ತಿದ್ದರು) ಅಲ್ಲಿಂದ ಪ್ರಾರಂಭವಾದ ಆ ಎರಡೂ ಕುಟುಂಬಗಳ ಸಖ್ಯ ಬಹಳ ಕಾಲ ಮುಂದುವರೆದಿತ್ತು. ರಾಜೀವ್ ಗಾಂಧಿಯನ್ನು ಮದುವೆಯಾಗುವುದಕ್ಕೆ ಸೋನಿಯಾ ಇಟಲಿಯಿಂದ ಹೊರಟು 1968ರ ಜನವರಿ 13ರಂದು ದೆಹಲಿ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಸೋನಿಯಾಳನ್ನು ರಿಸೀವ್ ಮಾಡಿದ್ದು ಇದೇ ಅಮಿತಾಬ್ ಬಚ್ಚನ್. ಸೋನಿಯಾಳಿಗೆ ಭಾರತೀಯ ಭಾಷೆ, ಸಂಸ್ಕೃತಿ, ಸಂಪ್ರದಾಯ, ರೂಢಿಪದ್ಧತಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ, ಕಲಿಯುವುದಕ್ಕೆ ಅನುಕೂಲವಾಗಲೆಂದು ಆಕೆಯನ್ನು ಅಮಿತಾಬ್ ಬಚ್ಚನ್ ಮನೆಯಲ್ಲೇ ಇರಿಸಿದ್ದರು ಇಂದಿರಾ ಗಾಂಧಿ. 1985ರಲ್ಲಿ ಒಂದು ಸಂದರ್ಶನದಲ್ಲಿ ಸೋನಿಯಾ "ತೇಜಿ ಆಂಟಿ ನನ್ನ ಮೂರನೇ ಅಮ್ಮ. ಮೊದಲನೆಯವರು ನನ್ನ ಇಟಲಿ ಅಮ್ಮ, ಎರಡನೆಯವರು ಇಂದಿರಾ ಗಾಂಧಿ. ಅಮಿತ್ (ಅಮಿತಾಬ್ ಬಚ್ಚನ್) ಮತ್ತು ಬಂಟಿ (ಅಮಿತಾಬ್‌ನ ಸಹೋದರ) ನನ್ನ ಸಹೋದರರು" ಎಂದಿದ್ದರು ಎಂದರೆ ಆವೆರಡೂ ಕುಟುಂಬಗಳ ನಡುವಿನ ಬಾಂಧವ್ಯ ಅರ್ಥ ಮಾಡಿಕೊಳ್ಳಬಹುದು.

ನೆಹರೂ ಹರಿವಂಶ್‌ರನ್ನು ಅಲಹಾಬಾದ್‌ನಿಂದ ದೆಹಲಿಗೆ ಕರೆತಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಒಬ್ಬ ವಿಶೇಷಾಧಿಕಾರಿಯನ್ನಾಗಿ ನೇಮಿಸಿದ್ದರು. ಅಮಿತಾಬ್ ಬಚ್ಚನ್ ಕೂಡ ಬಾಲಿವುಡ್ ಚಿತ್ರಲೋಕದಲ್ಲಿ ಗಟ್ಟಿಯಾಗಿ ತಳವೂರುವುದಕ್ಕೂ ಇಂದಿರಾ ಗಾಂಧಿ ಕುಟುಂಬ ಬಹಳವಾಗಿ ಸಹಕರಿಸಿದ್ದು ಗುಟ್ಟಾಗಿ ಏನೂ ಉಳಿದಿಲ್ಲ. ಅದಕ್ಕೆ ಪ್ರತಿಯಾಗಿ ಬಚ್ಚನ್ ಕುಟುಂಬ ಕೂಡ ನೆಹರೂ ಕುಟುಂಬದ ರಾಜಕೀಯಕ್ಕೆ ಬೆಂಬಲವಾಗಿ ನಿಂತಿದ್ದೂ ಅಷ್ಟೇ ಹಸಿಹಸಿಯಾಗಿದೆ. ಒಂದು ಉದಾಹರಣೆ ಕೊಡಬೇಕೆಂದರೆ 1975ರಲ್ಲಿ ಇಂದಿರಾ ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು ಹೇರಿ ಇಡೀ ಜನಕೋಟಿಯ ಮೂಲಭೂತ ಹಕ್ಕುಗಳನ್ನೇ ಕಿತ್ತುಕೊಂಡು ಚಳವಳಿಕಾರರನ್ನು, ಬುದ್ಧಿಜೀವಿಗಳನ್ನು, ವಿರೋಧ ಪಕ್ಷದವರನ್ನು ಹಿಡಿದು ಜೈಲಿಗಟ್ಟುತ್ತಿದ್ದಾಗ ಇಡೀ ದೇಶಕ್ಕೆ ದೇಶವೇ ಇಂದಿರಾ ಗಾಂಧಿಯ ಸರ್ವಾಧಿಕಾರವನ್ನು ವಿರೋಧಿಸಿತ್ತು. ಆಗ ತುರ್ತುಪರಿಸ್ಥಿತಿಯನ್ನು ಬೆಂಬಲಿಸುತ್ತಾ ಇಂದಿರಾ ಗಾಂಧಿಯ ಬೆನ್ನಿಗೆ ನಿಂತ ಕೆಲವೇ ಬುದ್ಧಿಜೀವಿ(!)ಗಳಲ್ಲಿ ಈ ಹರಿವಂಶ್ ಬಚ್ಚನ್ ಕೂಡ ಒಬ್ಬರು! ಅದಕ್ಕೆ ಕೃತಜ್ಞತೆಯಾಗಿ ಇಂದಿರಾ 1976ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ದಯಪಾಲಿಸಿದರು! ಮತ್ತದಕ್ಕೆ ಕೃತಜ್ಞತೆಯಾಗಿ ಅಮಿತಾಬ್ ಬಚ್ಚನ್ ತುರ್ತುಪರಿಸ್ಥಿತಿ ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ, ಅದರಲ್ಲೂ ವಿಶೇಷವಾಗಿ ಸಂಜಯ್ ಗಾಂಧಿ ಪರವಾಗಿ ಪ್ರಚಾರ ಮಾಡಿದರು! 1984ರಲ್ಲಿ ಇಂದಿರಾ ಗಾಂಧಿಯ ಕೊಲೆಯಾದ ಮೇಲೆ ರಾಜೀವ್ ಗಾಂಧಿ ತನ್ನ ಭವಿಷ್ಯದ ರಾಜಕೀಯ ತಂಡದಲ್ಲಿ ಅಮಿತಾಬ್ ಹೆಸರನ್ನೂ ಸೇರಿಸಿಕೊಂಡಿದ್ದರು. (ಅಮಿತಾಬ್ ಬಚ್ಚನ್ ಎರಡು ವರ್ಷದ ಹಾಗೂ ರಾಜೀವ್ ಗಾಂಧಿ ನಾಲ್ಕು ವರ್ಷದ ಹುಡುಗರಾಗಿದ್ದಾಗಿನಿಂದಲೂ ಅವರಿಬ್ಬರೂ ಸ್ನೇಹಿತರಾಗೇ ಇದ್ದವರು) ಆದರೆ, ಇಂದಿರಾ ನಿರ್ಗಮನದ ನಂತರ ರಾಜೀವ್ ಬೋಫೋರ್ಸ್ ಹಗರಣದಲ್ಲಿ ಸಿಕ್ಕಿಹಾಕಿಕೊಂಡರು. ಇಂದಿರಾ ಗಾಂಧಿ ಹತ್ಯೆಗೆ ಇಡೀ ಸಿಖ್ ಸಮುದಾಯವನ್ನು ಹೊಣೆಗಾರರನ್ನಾಗಿ ಮಾಡಿ ದೆಹಲಿ ಮತ್ತು ಇಡೀ ಉತ್ತರ ಭಾರತದಲ್ಲಿ ಸಿಖ್ಖರನ್ನು ಕಾಂಗ್ರೆಸ್ಸಿಗರು ಕಂಡಲ್ಲಿ ಕೊಚ್ಚಿ ಹಾಕಿದ್ದನ್ನು ನೆನಪಿಸಿಕೊಂಡು ಒಬ್ಬ ಸಿಖ್ ತಾಯಿಯ ಮಗನಾಗಿ ಅಮಿತಾಬ್ ಬಚ್ಚನ್ ಕಾಂಗ್ರೆಸ್‌ಗೆ, ರಾಜೀವ್‌ಗೆ ಗುಡ್‌ಬೈ ಹೇಳಿದರು.

ಅಲ್ಲಿಂದಾಚೆಗೆ ಅಮಿತಾಬ್ ಮೇಲ್ನೋಟಕ್ಕೆ ಸಕ್ರಿಯ ರಾಜಕಾರಣದಿಂದ ದೂರವಿದ್ದಂತೆ ಕಂಡರೂ ಆಂತರ್ಯದಲ್ಲಿ ರಾಜಕಾರಣದಿಂದ ನಿರ್ಗಮಿಸಿರಲಿಲ್ಲ.




ರಾತಿ ಅಭಿಮಾನ, ಶಿವಾಜಿ ಭಕ್ತ ಮುಂತಾದ ಮುಖವಾಡದಲ್ಲಿ ಮುಸ್ಲಿಮರ ರುದ್ಧ ಬೆಂಕಿಯುಗುಳುತ್ತಿದ್ದ ಭಾಳ್ ಠಾಕ್ರೆ ಜೊತೆ ಅಮಿತಾಬ್ ನೆಂಟಸ್ತಿಕೆ ಂದುವರೆದಿತ್ತು. 1996ರಲ್ಲಿ ಅಂದಿನ ಪ್ರಧಾನಿ ದೇವೇಗೌಡ ಮತ್ತು ಳ್ ಠಾಕ್ರೆ ನಡುವಿನ ಮೀಟಿಂಗ್ ಅನ್ನು ಅಮಿತಾಬ್ ತನ್ನ ಮನೆಯಲ್ಲಿ ಘಟಿಸಿದ್ದರು. ಈಗಲೂ ಕೂಡ ಆಗಾಗ ಭಾಳ್ ಠಾಕ್ರೆಯೊಂದಿಗೆ ಜೊತೆಗೂಡಿ ಮಾ ನೋಡುತ್ತಿರುತ್ತೇವೆ ಎಂದು ಅಮಿತಾಬ್ ಬಚ್ಚನ್ ಅವರೇ ತಮ್ಮ ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. ದೇವೇಗೌಡರೊಂದಿಗೆ ಸ್ನೇಹಹಸ್ತ ಚಾಚುವುದಕ್ಕೂ ಅಮಿತಾಬ್‌ಗೆ ಬಿಸಿನೆಸ್‌ನ ಲೆಕ್ಕಾಚಾರವಿತ್ತು. ದೇವೇಗೌಡರ ಮೂಲಕ ಅಂದಿನ ಕರ್ನಾಟಕದ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್‌ರಿಗೆ ತ್ತರವಾಗಿ ಬೆಂಗಳೂರಿನಲ್ಲಿ ವಿಶ್ವಸುಂದರಿ ಸ್ಪರ್ಧೆ ಏರ್ಪಡಿಸಿ ಹೊಸದಾಗಿ ಪಿಸಿದ್ದ **Amitabh Bachchan Corporation Ltd (ABCL)** ಪೆನಿಗೆ ಭಾರಿ ಲಾಭ ಮಾಡುವ ಲೆಕ್ಕಾಚಾರವನ್ನು ಅಮಿತಾಬ್ ಮಾಡಿದ್ದರು. ದರೆ, ಅದು ಯಶಸ್ವಿಯಾಗದೇ ಅಮಿತಾಬ್ ಭಾರಿ ನಷ್ಟ ಮಾಡಿಕೊಂಡು ದದಾಡಬೇಕಾಯಿತು. ಅಸಲಿಗೆ ಎಬಿಸಿಎಲ್ ಕಂಪೆನಿ ಭಾರತದ ಮೊದಲ ನರಂಜನಾ ಕಂಪೆನಿ. ಈ ಕಂಪೆನಿಯ ಮೂಲಕ 2000ದ ಹೊತ್ತಿಗೆ ದು ಸಾವಿರ ಕೋಟಿ ಟರ್ನ್‌ಓವರ್ ಮಾಡುವ ಭರ್ಜರಿ ಪ್ಲಾನ್ ಅನ್ನು ಮಿತಾಬ್ ಹೊಂದಿದ್ದರು. ಆದರೆ, ವಿಶ್ವಸುಂದರಿ ಸ್ಪರ್ಧೆಯ ವೈಫಲ್ಯ ಮು ನಿರ್ಮಿಸಿದ ಸಾಲುಸಾಲು ಚಿತ್ರಗಳು ಮಕಾಡೆ ಮಲಗಿದ್ದು ಎಲ್ಲಾ ಕೊಂಡು ದಿವಾಳಿಯೇಳುವ ಹಂತಕ್ಕೆ ಬಂದಿತು. ಕೊನೆಗೆ ಒಂದು ೀಟಿ ರೂಪಾಯಿಯೂ ಬೆಲೆಬಾಳದ ಅಮಿತಾಬ್ ಹೆಂಡತಿ ಜಯಾ ಚ್ಚನ್ ಒಡೆತನದ ಸರಸ್ವತಿ ಆಡಿಯೋ ವಿಜುಯಲ್ಸ್ ಅನ್ನು ಏಳು ಕೋಟಿ ಟ್ಟು ಕೊಂಡುಕೊಳ್ಳುವ ಮೂಲಕ ಎಬಿಸಿಎಲ್ ಕಂಪೆನಿಯನ್ನು ಮುಳುಗಿಸಿ ಡತಿಯ ಮಡಿಲಿಗೆ ದುಡ್ಡು ಸುರಿಯುವ ವ್ಯವಸ್ಥೆಯನ್ನೂ ಅಮಿತಾಬ್ ಡಿದರು. ಇಂತಹ ಹತ್ತು ಹಲವು ಬಿಸಿನೆಸ್ ತಂತ್ರಗಳ ಮೂಲಕವೇ ಮಿತಾಬ್ ಎಬಿಸಿಎಲ್ ಕಂಪೆನಿ ಮುಳುಗಿಸಿ ತಮ್ಮ ತಿಜೋರಿ ಬಿಕೊಂಡರು.

ವಾಸ್ತವದಲ್ಲಿ ಈ ಬಿಕ್ಕಟ್ಟೇ ಅಮಿತಾಬ್ ಬೇರೊಂದು ರಾಜಕೀಯ ಕ್ಷವನ್ನು, ಬೇರೊಬ್ಬ ರಾಜಕೀಯ ನಾಯಕನ ಆಶ್ರಯ ಪಡೆಯುವುದಕ್ಕೆ ವರನ್ನು ಪ್ರೇರೇಪಿಸಿತು. ಈ ಬಾರಿ ಅವರಿಗೆ ಸಿಕ್ಕಿದ್ದು ಸಮಾಜವಾದಿ ಪಕ್ಷ ತ್ತದರ ನಾಯಕ ಅಮರ್ ಸಿಂಗ್. ಅಮರ್ ಸಿಂಗ್ ಮತ್ತು ಸಮಾಜವಾದಿ ಕ್ಷಕ್ಕೂ ಅಮಿತಾಬ್‌ನಂತಹ ಒಬ್ಬ ಸೆಲಬ್ರಿಟಿಯ ಅವಶ್ಯಕತೆಯೂ ಇತ್ತು. ಗಾಗಿ ಅದೊಂದು ಅವಕಾಶವಾದಿ ಸ್ನೇಹ ಎಂಬುದರಲ್ಲಿ ಎರಡು ಮಾತಿಲ್ಲ. ಮಿತಾಬ್ ಹೆಂಡತಿ ಜಯಾ ಬಚ್ಚನ್‌ಗೆ ಸಮಾಜವಾದಿ ಪಕ್ಷ ರಾಜ್ಯ ಭೆಯ ಸೀಟು ದಯಪಾಲಿಸಿದರೆ ಅಮಿತಾಬ್‌ರಿಂದ ಸಮಾಜವಾದಿ ಪಕ್ಷ ಕಳ ಪ್ರಚಾರ, ವರ್ಚಸ್ಸನ್ನೂ ಗಳಿಸಿಕೊಂಡಿತು. ಸಮಾಜವಾದಿ ಪಾರ್ಟಿಯಲ್ಲಿ ್ಯಯಾಗಿ ತಳವೂರಿದ್ದ ಜಯಾ ಮತ್ತು ಬಚ್ಚನ್ 2004ರ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ವಿರುದ್ಧ ಬೆಂಕಿಯುಗುಳಿದ್ದೂ ಆಯಿತು, ಅದರ ರುದ್ಧ ರಾಹುಲ್ ಗಾಂಧಿ ಕಿಡಿಕಾರಿದ್ದೂ ಆಯಿತು.

ಈಗ ಸಮಾಜವಾದಿ ಪಕ್ಷದಲ್ಲೂ ಪರಿಸ್ಥಿತಿ ಬದಲಾಗಿದೆ. ಅಮಿತಾಬ್ ತ್ತು ಜಯಾರ ರಾಜಕೀಯ ರಕ್ಷಕನಂತಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿ ಗೂ ಹಿರಿಯ ನಾಯಕ ಅಮರ್ ಸಿಂಗ್ ಪಕ್ಷದಿಂದ ಹೊರನಡೆದಿದ್ದಾರೆ. ಮರ್ ಸಿಂಗ್ ಇಲ್ಲದೇ ಮುಲಾಯಂ ಸಿಂಗ್ ಯಾದವ್ ಎದುರು ತಮ್ಮ ೆ ಕಾಳು ಬೇಯುವುದಿಲ್ಲ ಎಂಬುದು ಅಮಿತಾಬ್ ಬಚ್ಚನ್‌ಗೂ ಗೊತ್ತಿದೆ. ೂಅಲ್ಲದೇ ಜಯಾ ಬಚ್ಚನ್‌ನ ರಾಜ್ಯಸಭಾ ಸದಸ್ಯತ್ವದ ಅವಧಿ ಇನ್ನೇನು ೂರು ತಿಂಗಳಲ್ಲಿ ಮುಗಿಯಲಿದೆ. ಅಷ್ಟರೊಳಗಾಗಿ ಯಾವುದಾದರೊಂದು ಸ ರಾಜಕೀಯ ಪಕ್ಷದ, ಹೊಸ ರಾಜಕೀಯ ನಾಯಕನ ಪಂಚೆಯಡಿಯಲ್ಲಿ ಯ ಪಡೆದುಕೊಳ್ಳಬೇಕು. ಈ ಬಾರಿ ಅಮಿತಾಬ್‌ಗೆ ಸಿಕ್ಕಿದ್ದು ನರೇಂದ್ರ ೀದಿ! ಗುಜರಾತ್‌ನ ಅಂಬಾಸಿಡರ್ ಆಗುವುದರ ಹಿಂದೆ, ಮೋದಿಗೆ ಹಹಸ್ತ ಚಾಚುವುದರ ಹಿಂದೆ ಅಮಿತಾಬ್‌ಗೆ ಸ್ಪಷ್ಟವಾದ ರಾಜಕೀಯ, ಹಾರಿಕ ಲೆಕ್ಕಾಚಾರವಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಗಾಂಧಿನಗರ ೀಕಸಭಾ ಕ್ಷೇತ್ರದಲ್ಲಿ ಅಧ್ವಾನಿಯ ವಿರುದ್ಧ ಸ್ಪರ್ಧಿಸಿ ಅವರಿಗೆ ಬೆವರಿಳಿಸಿದ ್ಲಿಕಾ ಸಾರಾಭಾಯಿ ಎಂಬ ಖ್ಯಾತ ಡಾನ್ಸರ್ ಪ್ರಕಾರ *"ಅಮಿತಾಬ್ ಚ್ಚನ್ ಚಿತ್ರಗಳಿಗೆ ಗುಜರಾತ್‌ನಲ್ಲಿ ತೆರಿಗೆ ವಿನಾಯಿತಿ ಕೊಡುವುದು, ುದಿನದಿಂದ ಅಮಿತಾಬ್ ಸ್ಥಾಪಿಸಬೇಕೆಂದಿರುವ ಫಿಲ್ಮ್ ಸಿಟಿಗಾಗಿ ಜರಾತ್‌ನಲ್ಲಿ ಸಾವಿರಾರು ಎಕರೆ ಜಮೀನು ಗಿಟ್ಟಿಸಿಕೊಳ್ಳುವುದು ಹಾಗೂ ಹೆಂಡತಿ ಜಯಾ ಬಚ್ಚನ್‌ಗೆ ರಾಜ್ಯಸಭಾ ಸೀಟು ಕೊಡುವುದು - ಈ ೂರು ಕೊಡುಗೆಗಳಿಗೆ ಪ್ರತಿಯಾಗಿ ಅಮಿತಾಬ್ ಬಚ್ಚನ್ ಗುಜರಾತ್‌ನ ರುಭಾರಿಯಾಗುವುದು"* - ಇದು ಒಟ್ಟಾರೆ ಡೀಲ್‌ನ ಸಾರಾಂಶ.

ಅಮಿತಾಬ್ ಬಚ್ಚನ್ ರಾಜೀವ್ ಮತ್ತು ಕಾಂಗ್ರೆಸ್ ಸಖ್ಯ ತೊರೆದು ೇಗೌಡರ ಅಂಗಳದಲ್ಲಿ ಕಾಣಿಸಿಕೊಂಡಾಗ, ಅಲ್ಲಿಂದಲೂ ಕಾಲ್ಕಿತ್ತು ಮರ್ ಸಿಂಗ್‌ನ ಮಡಿಲಿಗೆ ಬಿದ್ದಾಗ ಪ್ರಾಯಶಃ ಅಮಿತಾಬ್ ಅಭಿಮಾನಿಗಳು ್ನೊಂದು ಬೇಸರಗೊಂಡಿರಲಿಲ್ಲ ಅನ್ನಿಸುತ್ತೆ. ಈಗ ದುಡ್ಡಿನಾಸೆಗಾಗಿ, ಕಾರಕ್ಕಾಗಿ ನರಹತ್ಯೆಯನ್ನೇ ಕಸುಬು ಮಾಡಿಕೊಂಡಿರುವ ಮೋದಿಯೊಂದಿಗೆ ೂಡಿಸಿದ್ದು ಮಾತ್ರ ನಿಜಕ್ಕೂ ಬೇಸರ ತರಿಸಿದೆ. ಅದು ಅಮಿತಾಬ್ ಅಪೋಕ ಮೇರುನಟನೊಳಗಿದ್ದ ಒಬ್ಬ ಕ್ಷುಲ್ಲಕ ಮನುಷ್ಯನನ್ನು ಷ್ಟು ಸ್ಪಷ್ಟವಾಗಿ ಹೊರ ಜಗತ್ತಿಗೆ ತೋರಿಸಿದೆ. ●

ಹತ್ತು ಚಿತ್ರಗಳು



1 ಅವಮಾನ

ಪತ್ರಿಕೆಯಲ್ಲಿ ಪ್ರವಾದಿಗಳ ಬಗ್ಗೆ ಬರೆದರು. ಜನ ಬೀದಿಗಿಳಿದರು. ಕಟ್ಟಡಗಳಿಗೆ ಕಲ್ಲೆಸೆದು ಗ್ಲಾಸ್ ಒಡೆದರು. ಪತ್ರಕರ್ತರಿಗೂ ಕಲ್ಲು ತೂರಿದರು. ಬೀದಿಯಲ್ಲಿದ್ದ ಬೈಕ್‌ಗಳಿಗೆ ಬೆಂಕಿ ಹಚ್ಚಿದರು.

ಹೀಗೆ, ಪ್ರವಾದಿಗಳಿಗಾದ ಅವಮಾನವನ್ನು ಸರಿಪಡಿಸಲಾಯಿತು.



2 ನಿಯಂತ್ರಣ

ಮೆರವಣಿಗೆಯಲ್ಲಿದ್ದವರು ಅಮೀರ್ ಅಹಮದ್ ವೃತ್ತದಲ್ಲಿ ಕಲ್ಲು, ತಲವಾರ್ ಹಿಡಿದು ದೊಂಬಿಗಿಳಿದರು.

ಪೊಲೀಸರು ಲಾಠಿ ಬಂದೂಕು ಹಿಡಿದು ನಿಯಂತ್ರಿಸಿದರು.

ಪ್ರತೀಕಾರವಾಗಿ ಗೋಪಿ ವೃತ್ತದಲ್ಲಿದ್ದ ಬಟ್ಟೆ ಅಂಗಡಿಗೆ ಬೆಂಕಿ ಹಚ್ಚಲಾಯಿತು.

ಪೊಲೀಸರು ಲಾಠಿ ಬಂದೂಕು ಹಿಡಿದು ನಿಯಂತ್ರಿಸಿದರು.



3 ಮಗು

ಬೀದಿಯಲ್ಲಿ ಆಡುತ್ತಿದ್ದ ಐದು ವರ್ಷದ ಮಗು ಬಂತು. "ಅಪ್ಪಾ, ಮೊದಲು ಅವರೇ ಹೊಡೆದರು. ಆಮೇಲೆ ನಮ್ಮವರು ಸರೀ ಹೊಡೆದರು. ಮತ್ತೇ? ಸುಮ್ಮನಿರಬೇಕಾ?."

"ಅವರು ಅಂದರೆ ಯಾರು ಮಗಳೇ?"

"ಮುಸ್ಲೀಂಸ್..."



4 ಕ್ರಿಮಿನಲ್‌ಗಳಲ್ಲ

ಮುಖ್ಯ ಸರ್ಕಲ್ ಒಂದರಲ್ಲಿ ಜನ ಗುಂಪು ಸೇರಿದರು. ಬರುತ್ತಿದ್ದ ವಾಹನಗಳನ್ನು ನಿಲ್ಲಿಸುತ್ತಿದ್ದರು. ಬೇರೆ ಧರ್ಮದವರಾಗಿದ್ದರೆ ಕೆಳಗಿಳಿಸಿ ತಲೆ ಒಡೆದು ವಾಹನಗಳಿಗೆ ಬೆಂಕಿ ಹಚ್ಚುತ್ತಿದ್ದರು.

ಇದನ್ನೆಲ್ಲ ನೋಡುತ್ತಿದ್ದ ಒಬ್ಬ ಪೊಲೀಸ್ ಜೊತೆಯಲ್ಲಿದ್ದ ಇನ್ನೊಬ್ಬನಿಗೆ ಹೇಳಿದ: "ನಮ್ಮವರು ಬರೀ ತಲೆ ಒಡೆದು ಬಿಡುತ್ತಿದ್ದಾರೆ. ಅವರಾಗಿದ್ದರೆ ಕೊಂದೇ ಹಾಕುತ್ತಿದ್ದರು. ನಮ್ಮವರು ಅವರಷ್ಟು ಕ್ರಿಮಿನಲ್‌ಗಳಲ್ಲ."



5 ಲೂಟಿ

ರಸ್ತೆ ಪಕ್ಕದಲ್ಲಿದ್ದ ಕಲ್ಲಂಗಡಿ ಹಣ್ಣಿನ ಅಂಗಡಿಯನ್ನು ಸೂರೆಗೈಯುತ್ತಿದ್ದರು.

ಕಡುನೀಲಿ ಬಣ್ಣದ ಕಾರೊಂದು ಬಂದು ನಿಂತಿತು. ದಾಳಿಕೋರರು ಒಂದು ಕ್ಷಣ ಅನುಮಾನಿಸಿದರು. ಕಾರಿನಿಂದಿಳಿದ ವ್ಯಕ್ತಿ ಶಾಂತವಾಗಿ ಬಂದ. ಮೂರು ಕಲ್ಲಂಗಡಿ ಹಣ್ಣುಗಳನ್ನು ಕಷ್ಟಪಟ್ಟು ಎತ್ತಿಕೊಂಡು ಕಾರಿನೊಳಗಿಟ್ಟ. ಬಟ್ಟೆಗಳ ಧೂಳು ಕೊಡವಿ ಸರಿಪಡಿಸಿಕೊಂಡು ಕಾರನ್ನು ಸ್ಟಾರ್ಟ್ ಮಾಡಿದ. ಲೂಟಿ ಮುಂದುವರೆಯಿತು.



6 ಕ್ಷಮೆ

ಐದು ಗುಡಿಸಲುಗಳಿಗೆ ಬೆಂಕಿ ಹಚ್ಚಿದ ನಂತರ ಗುಂಪು ಸಮಾಲೋಚನೆ ನಡೆಸಿತು. ಹತ್ತಿರದಲ್ಲೇ ಇದ್ದ ದೊಡ್ಡ ಮನೆಯೊಂದಕ್ಕೆ ದಾಳಿ ಇಡಲಾಯಿತು. ಮನೆಯಲ್ಲಿದ್ದ ಹೆಣ್ಣುಮಕ್ಕಳು ಹಿಂಬಾಗಿಲಿನಿಂದ ತಪ್ಪಿಸಿಕೊಂಡರು. ಮನೆಯ ಮಾಲೀಕ ಕೈಮುಗಿದ. ತಾನೇ ಹಣ ಹಾಗೂ ಒಡವೆಗಳನ್ನು ದಾಳಿಕೋರರಿಗೆ ನೀಡಿದ. ಹಾಗಾಗಿ ಅವನ ಕಾಲನ್ನಷ್ಟೇ ಮುರಿದು ಜೀವಂತವಾಗಿ ಬಿಡಲಾಯಿತು.

ಪಕ್ಕದಲ್ಲೇ ಇರುವ ರಾಜಕಾರಣಿಯ ಕಾಲೇಜನ್ನು ಎರಡು ವ್ಯಾನುಗಳಲ್ಲಿದ್ದ ಪೊಲೀಸರು ಕಾಯುತ್ತಿದ್ದರು.

7 ಮಾಂತ್ರಿಕರು

ಕತ್ತಲಾಗುತ್ತಿತ್ತು, ಯಾವಾಗಲೋ ಮುಚ್ಚಿ ಹೋದೆ ಬೆಳೆದಿರುವ ಮ್ಯಾಚ್ ಬಾಕ್ಸ್ ಫ್ಯಾಕ್ಟರಿಯೊಳಗಿಂದ ತೂರಿ ಬಂದ ಕಲ್ಲುಗಳು ಮನೆಗಳ ಮೇಲೆ ಬಿದ್ದವು.

'ಮೂರು ಜನರಿದ್ದಾರೆ'.

'ತಲವಾರು ಹಿಡಿದಿದ್ದಾರೆ'

ಸುದ್ದಿ ಹರಡಿತು. ನೂರಾರು ಜನ ಆಯುಧಗಳನ್ನು ಹಿಡಿದು ಒಂದಾದರು. ಪೊದೆಗಳನ್ನು ಸವರಿ ಬೆಂಕಿ ಹಚ್ಚಿ ಇಂಚಿಂಚು ಹುಡುಕಿದರೂ ಯಾರೂ ಸಿಗಲಿಲ್ಲ

ಕ್ಷಣದಲ್ಲಿ ಪ್ರತ್ಯಕ್ಷವಾಗುವ, ಕ್ಷಣದಲ್ಲಿ ಮಾಯವಾಗುವ ಶತ್ರುಗಳ ಮಾಂತ್ರಿಕತೆಗೆ ಎಲ್ಲರೂ ಬೆರಗಾದರು.

8 ಒಂದು ಲಕ್ಷ

ಗೋಲಿಬಾರ್‌ನಲ್ಲಿ ಇಬ್ಬರು ಸತ್ತರು. ಒಬ್ಬನ ಹೃದಯಕ್ಕೆ ಗುಂಡು ಹೊಕ್ಕಿತ್ತು. ಇನ್ನೊಬ್ಬನ ಮೊಣಕಾಲನ್ನು ಹೊಕ್ಕ ಗುಂಡು ಹಣೆಯನ್ನು ಗಾಯಗೊಳಿಸಿ ಹೊಟ್ಟೆಯನ್ನು ಇರಿದಿತ್ತು.

ಜಿಲ್ಲಾಧಿಕಾರಿಗಳು ಎರಡೂ ಕುಟುಂಬದವರಿಗೂ ತಲಾ ಒಂದು ಲಕ್ಷದ ಚೆಕ್ ನೀಡಿದರು.

9 ಮತ್ತು ಹತ್ತು ಸಾವಿರ

ಎಷ್ಟು ಜನರ ಮೇಲೆ ಕೇಸು ದಾಖಲಿಸುವುದೆಂದು ಪೊಲೀಸ್ ಅಧಿಕಾರಿಗಳು ದಿನವಿಡೀ ಚರ್ಚಿಸಿದರು. ಬಗೆಹರಿಯಲಿಲ್ಲ, ರಾಜಕಾರಣಿಗೆ ಫೋನ್ ಮಾಡಲಾಯಿತು. ದಿನವಿಡೀ ಬೈಠಕ್ ನಡೆಸಿ ಕೊನೆಗೂ ತೀರ್ಮಾನಿಸಲಾಯಿತು.

ಹದಿನೈದು ಜನರನ್ನು ಕೇಸಿನಲ್ಲಿ ಹೆಸರಿಸಿ ಮುಂದೆ ಹೀಗೆ ಬರೆಯಲಾಯಿತು - "ಮತ್ತು ಹತ್ತು ಸಾವಿರ"

10 ಕೊಂದೇ ಬಿಡುತ್ತಾರೆ

ಕಾಲೇಜು ಪಕ್ಕದ ಸರ್ಕಲ್‌ನಲ್ಲಿ ದೊಂಬಿ ನಡೆಯುತ್ತಿತ್ತು, ಅನ್ಯ ಧರ್ಮದ ಯುವತಿಯೊಬ್ಬಳು ಅತ್ತ ಹೋಗುವುದೋ ಬೇಡವೋ ಯೋಚಿಸುತ್ತಾ ನಿಂತಳು. ಇದನ್ನು ಗಮನಿಸಿದ ನಡುವಯಸ್ಸಿನ ಹೆಂಗಸೊಬ್ಬಳು ಆಕೆಯನ್ನು ಹತ್ತಿರವಿದ್ದ ತನ್ನ ಮನೆಗೆ ಕರೆದೊಯ್ದಳು.


"ಆ ಕಡೆ ಹೋಗಬೇಡ ಮಗಳೇ. ಕೊಂದೇ ಹಾಕುತ್ತಾರೆ. ನಮ್ಮ ಮಕ್ಕಳು ಸರಿ ಇಲ್ಲ"

●ಶಿವಕುಮಾರ್ ಡಿ.ಎಸ್, ಶಿವಮೊಗ್ಗ


ಗಣೇಶ್ ಮಂದಿರದ ಮಾಜಿ ಕೌನ್ಸಿಲರ್ ಬಿಜೆಪಿ ಬಸವರಾಜನ ದರೋಡೆ ಎಷ್ಟು?

ಐದು ವರ್ಷದ ಕೌನ್ಸಿಲರ್‌ಗಿರಿಯ ಒಂದೇ ಅವಧಿಯಲ್ಲಿ ಪಾಲಿಕೆ ಸದಸ್ಯನೊಬ್ಬ ಎಷ್ಟು ದೋಚಬಹುದು?


ಇಲ್ಲಿ ಫೋಟೋ ಸಹಿತ ಕೊಟ್ಟಿರುವ ಬಿಲ್ಡಿಂಗುಗಳೆಲ್ಲವೂ ಗಣೇಶ್ ಮಂದಿರ ವಾರ್ಡಿನ ಮಾಜಿ ಕೌನ್ಸಿಲರ್ ಎ.ಎಚ್. ಬಸವರಾಜ್‌ಗೆ ಸೇರಿದ್ದು. 2001 ರಲ್ಲಿ ಬನಶಂಕರಿಯ ಗಣೇಶ್ ಮಂದಿರ ವಾರ್ಡಿನಿಂದ ಬಿಜೆಪಿಯಿಂದ ಗೆದ್ದು ಕೌನ್ಸಿಲರ್ ಆದ ಬಸವರಾಜ್ ತನ್ನ ಐದು ವರ್ಷದ ಕೌನ್ಸಿಲರ್‌ಗಿರಿಯ ಅವಧಿಯಲ್ಲಿ ಮಾಡಿದ ಒಟ್ಟು ಸ್ಥಿರಾಸ್ತಿಗಳ ಪೈಕಿ ಬನಶಂಕರಿ ಸುತ್ತಮುತ್ತಲ ಏರಿಯಾಗಳಲ್ಲಿರುವ ಈ ಎಲ್ಲಾ ಕಟ್ಟಡಗಳಿಗೂ 'ಬನಶಂಕರಿ ನಿಲಯ' ಎಂಬ ಒಂದೇ ರೀತಿಯ ಹೆಸರಿದೆ. ಏಕೆಂದರೆ ಬಸವರಾಜ್ ಬನಶಂಕರಿ ದೇವಸ್ಥಾನದ ಆಡಳಿತ ಮಂಡಳಿಯ ಹಾಲಿ ಅಧ್ಯಕ್ಷ ಕೂಡ.


ಚಿಕ್ಕಲಸಂದ್ರದ ಬ್ರಿಗೇಡ್ Apt. ಮುಂಭಾಗದ Apt. -ಐದುಕೋಟಿ ಸೊತ್ತು


ಇಲ್ಲಿ ಗಮನಾರ್ಹ ಸಂಗತಿಯೇನೆಂದರೆ ಈ ಬಸವರಾಜ್ ಕೌನ್ಸಿಲರ್ ಆಗಿದ್ದಷ್ಟೂ ಕಾಲ ಕಾಂಗ್ರೆಸ್ ಸರ್ಕಾರವಿತ್ತು, ಬೆಂಗಳೂರು ಮಹಾನಗರಪಾಲಿಕೆ ಕೂಡ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಜಂಟಿ ಆಳ್ವಿಕೆಗೊಳಪಟ್ಟಿತ್ತು. ಪಾಲಿಕೆ ಮತ್ತು ವಿಧಾನಸೌಧದ ಮಟ್ಟಿಗೆ ವಿರೋಧ ಪಕ್ಷವಾಗಿದ್ದ ಬಿಜೆಪಿಯ ಕೌನ್ಸಿಲರ್ ಓರ್ವ ತನ್ನ ಐದು ವರ್ಷದ ಅವಧಿಯಲ್ಲಿ ದೋಚಿದ ಸೊತ್ತಿನ ವಿವರಗಳಾದರೂ ಎಂಥಾದ್ದು?


ಕಾವೇರಿನಗರ್ ವಾಟರ್‌ಟ್ಯಾಂಕ್ ಪಕ್ಕದ್ದು, ಮೋನೊಟೈಪ್‌ನಿಂದ ಯಾರಬ್ ನಗರದ ರಸ್ತೆಯಲ್ಲಿ...


ಚಿತ್ರ 1 ರಲ್ಲಿನ ನಾಲ್ಕಂತಸ್ತಿನ ಅಪಾರ್ಟ್‌ಮೆಂಟ್ ಒಂದೇ ಐದು ಕೋಟಿಯ ಬೆಲೆ ಬಾಳುತ್ತದೆ. ಚಿಕ್ಕಲ್ಲಸಂದ್ರದ ಬ್ರಿಗೇಡ್ ಅಪಾರ್ಟ್‌ಮೆಂಟ್ ಎದುರಿಗಿರುವ 60X40 ಅಳತೆಯ ಈ ಬಿಲ್ಡಿಂಗ್ ಬಸವರಾಜು ಪತ್ನಿ ಮಂಜುಳಾರ ಹೆಸರಲ್ಲಿದೆ. ಚಿತ್ರ 2 ರಲ್ಲಿರುವುದು ಕಾವೇರಿನಗರದ ವಾಟರ್ ಟ್ಯಾಂಕ್ ಪಕ್ಕದ 25X30 ಅಳತೆಯ ಮೂರಂತಸ್ತಿನ ಮನೆ. ಇಲ್ಲಿಗೆ ವರ್ಷದ ಹಿಂದಷ್ಟೇ 50 ಲಕ್ಷಕ್ಕೆ ಇದನ್ನು ಖರೀದಿಸಿದ ಬಸವರಾಜ್ ಪ್ರತಿ ಅಂತಸ್ತನ್ನೂ ಎಂಟರಿಂದ ಹನ್ನೆರಡು ಸಾವಿರ ರೂಪಾಯಿಗಳಿಗೆ ಬಾಡಿಗೆ ಬಿಟ್ಟಿದ್ದಾನೆ. ಇದಕ್ಕೂ ಬನಶಂಕರಿ ನಿಲಯವೆಂದೇ ಹೆಸರಿಟ್ಟಿದ್ದಾನೆ. ಆದರೆ ಆಸ್ತಿ ಮಾಡಿರುವುದು ತನ್ನ ಅತ್ತೆ ಲಕ್ಷ್ಮಿ ಬಿನ್ ವೆಂಕಟಪ್ಪ ಎಂಬಾಕೆಯ ಹೆಸರಲ್ಲಿ.


ಪದ್ಮನಾಭನಗರದ ಕಿಡ್ನಿಫೌಂಡೇಶನ್ ಹಿಂಭಾಗದಲ್ಲಿ ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಕಾಂಪ್ಲೆಕ್ಸ್.....


ಹಾಗೇ ಪದ್ಮನಾಭನಗರದತ್ತ ಬಂದರೆ ಅಲ್ಲಿನ ಪ್ರಖ್ಯಾತ ಕಿಡ್ನಿ ಫೌಂಡೇಶನ್‌ನ ಹಿಂಭಾಗದಲ್ಲೊಂದು 25X35 ಅಳತೆಯ ಕಾಂಪ್ಲೆಕ್ಸ್ ಕಾಣಿಸುತ್ತದೆ. ಆ ಏರಿಯಾದ ಕುಖ್ಯಾತ ಶಂಕರಿ ಬಾರ್ ಎಂಬ ಲಿಕ್ಕರ್ ಅಡ್ಡೆಯೂ ಅದೇ ಕಾಂಪ್ಲೆಕ್ಸಿನಲ್ಲಿದೆ. ಇದಕ್ಕೂ ಬನಶಂಕರಿ ನಿಲಯ ಎಂದೇ ಹೆಸರಿಟ್ಟಿದ್ದಾನೆ. ಉತ್ತರಹಳ್ಳಿ ಮೇನ್ ರಸ್ತೆಯಲ್ಲಿರುವ ಈ ಕಾಂಪ್ಲೆಕ್ಸಿನ ಸದ್ಯದ ಮಾರುಕಟ್ಟೆ ರೇಟೇ 2 ಕೋಟಿಯಷ್ಟಾಗುತ್ತದೆ. ಇದನ್ನು ಕತ್ರಿಗುಪ್ಪೆಯ ಮಾಜಿ ಬಿಜೆಪಿ ಕೌನ್ಸಿಲರ್ ವೆಂಕಟೇಶ್‌ಮೂರ್ತಿಯಿಂದ ಇತ್ತೀಚಿಗಷ್ಟೇ ಖರೀದಿಸಿದ ಬಸವರಾಜು ಇದನ್ನು ತನ್ನ ಪತ್ನಿಯ ತಮ್ಮ ವೆಂಕಟೇಶನ ಹೆಸರಿಗೆ ಮಾಡಿದ್ದಾನೆ.


ಗೌಡನಪಾಳ್ಯದ ಗ್ರಾನೈಟ್ ಫ್ಯಾಕ್ಟರಿ ರಸ್ತೆಯ ಬಾಲಾಜಿ ಥಿಯೇಟರ್ ಹಿಂಭಾಗದ ಬಂಗಲೆ....

ಹೀಗೆ 'ಬನಶಂಕರಿ ನಿಲಯ' ಎಂಬ ಟ್ರೇಡ್‌ಮಾರ್ಕ್ ಹೊತ್ತ ಬಸವರಾಜನ ನಾಲ್ಕನೇ ಸೊತ್ತೇ 50X70 ಅಳತೆಯ ಐದಂತಸ್ತಿನ ಅಪಾರ್ಟ್‌ಮೆಂಟು. ಇದು ಬನಶಂಕರಿಯ ಗೌಡನಪಾಳ್ಯದ ಗ್ರಾನೈಟ್ ಫ್ಯಾಕ್ಟರಿ ರಸ್ತೆಯ ಬಾಲಾಜಿ ಥೇಟರ್ ಹಿಂಭಾಗದಲ್ಲಿದೆ. ಕಮ್ಮಿಯೆಂದರೂ ಇದು ಮೂರೂವರೆ ಕೋಟಿಯ ಸೊತ್ತು. ಐದೂ ಅಂತಸ್ತುಗಳನ್ನು ಪೊಗದಸ್ತಾದ ಮಂತ್ಲಿ ಬಾಡಿಗೆಗೆ ಬಿಟ್ಟಿರುವ ಬಸವರಾಜು ಇದನ್ನು ಮಾತ್ರ ತನ್ನ ನಂಬಿಕಸ್ತ ಬಂಟ ಮತ್ತು ಬೇನಾಮಿ ಕಂಟ್ರಾಕ್ಟರ್ ಶಂಭುಲಿಂಗಪ್ಪನ ಪತ್ನಿ ಲಲಿತಾಳ ಹೆಸರಿಗೆ ಮಾಡಿದ್ದಾನೆ.



ಬನಶಂಕರಿ 2ನೇ ಹಂತ ಕದಿರೇನಹಳ್ಳಿ ಪಾರ್ಕ್ ಹತ್ತಿರದ್ದು....

ಈ ಎಲ್ಲಾ ಸೊತ್ತುಗಳನ್ನು ಒಂದು ತಕ್ಕಡಿಯಲ್ಲಿಟ್ಟರೆ, ಅಷ್ಟೆಲ್ಲವನ್ನೂ ಸರಿಸಮವಾಗಿ ತೂಗುವುದು ಕದಿರೇನಹಳ್ಳಿ ಪಾರ್ಕ್ ಬಳಿ ಬಸವರಾಜು ಕಟ್ಟಿಸುತ್ತಿರುವ ತನ್ನ ಸ್ವಂತ ಬಂಗಲೆಯ ವೈಭೋಗ. 50X80 ಅಳತೆಯ ವಿಶಾಲ ಸೈಟಿನಲ್ಲಿ ಯಾವ ಮಂತ್ರಿಗೂ ಕಮ್ಮಿಯಿಲ್ಲದಂತೆ 8 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತನ್ನ ವಾಸದ ಬಂಗಲೆ ಕಟ್ಟಿಸುತ್ತಿರುವ ಬಸವರಾಜು ಸದರಿ ಸೈಟನ್ನು ಖರೀದಿಸಿದ್ದು ಕೋರಮಂಗಲದ ಮೊಹಮ್ಮದ್ ಆಲಂಗಿರ್ ಎಂಬಾತನಿಂದ. ಸೇಲ್ ಡೀಡೇ ಹೇಳುವಂತೆ 2004 ರ ಆಗಸ್ಟ್ 25 ರಂದು ಒಟ್ಟು 36,90,000 (ಮೂವತ್ತಾರು ಲಕ್ಷದ ತೊಂಭತ್ತು ಸಾವಿರ) ರೂಪಾಯಿಗೆ ಇದನ್ನು ಮೊಹಮ್ಮದ್ ಆಲಂಗಿರ್‌ನಿಂದ ಖರೀದಿಸಿದ ಬಸವ ರಾಜು ಅದನ್ನು ತನ್ನ ಪತ್ನಿ ವಿ. ಮಂಜುಳಾ ಹಸರಿಗೆ ಜಯನಗರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸುತ್ತಾನೆ. ಮೂವತ್ತಾರು ಲಕ್ಷಕ್ಕೆ ಖರೀದಿಸಿದ್ದು ಕೇವಲ ಸರ್ಕಾರಿ ಲೆಕ್ಕಕ್ಕೆ ಮಾತ್ರ. ಅಸಲಿಗೆ ಅದು 60 ಲಕ್ಷದ ವ್ಯವಹಾರ. ಈಗ ಸದರಿ ಸೈಟೇ ಐದು ಕೋಟಿ ಬೆಲೆ ಬಾಳುತ್ತದೆ!


ಬಸವರಾಜ್

ಸದ್ಯ ಕದಿರೇನಹಳ್ಳಿ ಕ್ರಾಸಿನ ಭವಾನಿನಗರ ಸ್ಲಮ್ಮಿನ ಗೂಡಂಗಡಿಯಂಥ ಮನೆಯೊಂದರಲ್ಲಿ ಏನಕ್ಕೂ ಗತಿಯಿಲ್ಲದವನಂತೆ ವಾಸಿಸುತ್ತಿರುವ ಮಾಜಿ ಕೌನ್ಸಿಲರ್ ಬಸವರಾಜು ಎಂಥಾ ಕಪಟ ನಾಟಕಕಾರ ಎಂಬುದಕ್ಕೆ ಈತ ಕಟ್ಟಿಸುತ್ತಿರುವ ಬಂಗಲೆಯಲ್ಲಿರುವ ಸ್ವಿಮ್ಮಿಂಗ್ ಪೂಲೇ ಸಾಕ್ಷಿ.

ಮೂಲತಃ ಮಾಗಡಿ ತಾಲ್ಲೂಕು ಅತ್ತನಗೆರೆಯವನಾದ ಬಸವರಾಜು ಒಂದಾನೊಂದು ಕಾಲಕ್ಕೆ ಬೆಂಗಳೂರು ಸಿಟಿ ಕಾರ್ಪೋರೇಷನ್ನಿನ ಯಕಶ್ಚಿತ್ ಗ್ಯಾಂಗ್‌ಮನ್. 1985 ರಿಂದ 1995 ರ ತನಕ ತನ್ನ ಹೆಸರನ್ನು ಮುನಿರಾಜು ಎಂದು ಬದಲಿಸಿಕೊಂಡು ಯಡಿಯೂರು ವಾರ್ಡಿನ ಪಾಲಿಕೆ ಕಚೇರಿಯಲ್ಲಿ ಮಾಸಿಕ ಎರಡೂವರೆ ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದ. ಈಗ ಆತ ತೋರಿಕೆಗೆ ವಾಸಿಸುತ್ತಿರುವ ಭವಾನಿನಗರ ಸ್ಲಮ್ಮಿನ ಮನೆ ಕೂಡ ಸರ್ಕಾರ ಕೊಟ್ಟ ಫ್ರೀ ಸೈಟೇ. ಹಾಗೇ ಗ್ಯಾಂಗ್‌ಮನ್ ಆಗಿದ್ದುಕೊಂಡೇ ಆಗ ಉತ್ತರಹಳ್ಳಿಗೆ ಶಾಸಕರಾಗಿದ್ದ ಎಂ. ಶ್ರೀನಿವಾಸ್ ಮನೆಗೆಲಸದವನಾಗಿ ಕಾಫಿ-ಟೀ ಸರಬರಾಜು ಮಾಡಿಕೊಂಡಿದ್ದ. 1996 ರ ಪಾಲಿಕೆ ಚುನಾವಣೆಯಲ್ಲಿ ಗಣೇಶ್‌ಮಂದಿರ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿ ನಿಂತು ಸೋತ. ಆದರೆ 2001 ರ ಹೊತ್ತಿಗೆ ಆರ್. ಅಶೋಕ್ ಕೈಚಳಕದಿಂದಾಗಿ ಗೆದ್ದುಬಿಟ್ಟ.


ಆಲಂಗಿರ್ ಅವರಿಂದ ಬಸವರಾಜ್ ಭೂಮಿ ಖರೀಧಿಸಿದ ದಾಖಲೆ...

ಹೀಗೆ ಗೆದ್ದ ಬಸವರಾಜು ಎಂಥಾ ನರಿಬುದ್ಧಿಯವನೆಂದರೆ ತನ್ನ ಹುಟ್ಟೂರು ಮಾಗಡಿ ತಾಲ್ಲೂಕಿನ ಅತ್ತನಗೆರೆಯಿಂದ ನೂರಾರು ಹುಡುಗರನ್ನು ಕಲೆಹಾಕಿ ಅವರೆಲ್ಲರೂ ಗಣೇಶ್ ಮಂದಿರ ವಾರ್ಡಿನ ಮತದಾರರಂತೆ ದಾಖಲೆ ಸೃಷ್ಟಿಸಿದ. ಹೊಸಕೆರೆಹಳ್ಳಿಯ ಕಂಟ್ರಾಕ್ಟರ್ ಶಂಭು, ಕುಮಾರಸ್ವಾಮಿ ಲೇಔಟಿನ ತನ್ನ ಪಿಎ ವೆಂಕಟೇಶ್ ಇತ್ಯಾದಿ ಯಾವ್ಯಾವುದೋ ಏರಿಯಾದ ಬಂಟರನ್ನು ಗಣೇಶ್ ಮಂದಿರ ವಾರ್ಡಿನ ಮತದಾರರಂತೆ ಕಳ್ಳ ದಾಖಲೆ ಸೃಷ್ಟಿಸಿ ಇಂಥ ನಕಲಿ ಮತದಾರರ ಬಲದಿಂದಲೇ ಗೆದ್ದುಬಿಟ್ಟ.

ಗೆದ್ದದ್ದೇ ತಡ ನಿಪ್ಪಟ್‌ನಾಗ ಮತ್ತು ನಾರಾಯಣ ಸ್ವಾಮಿಯಂಥ ಖತರ್‌ನಾಕ್‌ಗಳನ್ನು ತನ್ನ ಎಡಗೈ ಬಲಗೈಗಳಂತೆ ನೇಮಿಸಿಕೊಂಡು ಪಾಲಿಕೆ ಸೊತ್ತು, ಕಾಂಟ್ರಾಕ್ಟು, ಟಾರು, ಮೋರಿ ಯಾವುದನ್ನೂ ಬಿಡದೇ ದೋಚಲಾರಂಭಿಸಿದ. ಇದಕ್ಕೆ ತಕ್ಕಂತೆ ಬನಶಂಕರಿ ದೇವಸ್ಥಾನದ ಆಡಳಿತ ಮಂಡಳಿಗೂ ಬಸವರಾಜನೇ ಅಧ್ಯಕ್ಷನಾದ. ಪ್ರತಿ ಶುಕ್ರವಾರ ತಾಯಿ ಬನಶಂಕರಿಯ ದರ್ಶನಕ್ಕೆಂದು ನೂರಾರು ಗೃಹಿಣಿಯರು, ಆತಂತ್ರ ಆಂಟಿಯರು ಮೈಲುದ್ದದ ಸರತಿ ಸಾಲಲ್ಲಿ ನಿಂತಿರುತ್ತಾರೆ. ಈ ಪೈಕಿ ಯಾರೇ ಪೊಗದಸ್ತು ಹೆಂಗಸರು ಕಣ್ಣಿಗೆ ಬಿದ್ದರೆಂದರೆ ಹೆಂಡ ಕುಡಿದ ಮಂಗನಂತೆ ಮುಗಿಬಿದ್ದು 'ಬನ್ನಿ ಮೇಡಮ್; ಪಾಪ ತುಂಬಾ ಸುಸ್ತಾಗಿದ್ದೀರಿ ಅಂತ ಕಾಣುತ್ತೆ....!' ಎಂದಿದ್ದೇ ತಾನೇ ಕರೆದೊಯ್ದು ಸ್ಪೆಷಲ್ ದರ್ಶನ ಕಲ್ಪಿಸುವುದು ಈತನ ಕಾಯಕ.

ಬನಶಂಕರಿ ಕಾಂಪ್ಲೆಕ್ಸ್ ಬಳಿಯ ಪಾರ್ಕಿನಲ್ಲಿ ಕುವೆಂಪು ಪ್ರತಿಮೆ ಸ್ಥಾಪಿಸುತ್ತೇನೆಂದು ಪಾಲಿಕೆಯಿಂದ 28 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡು ಏಳೋ ಎಂಟೋ ಲಕ್ಷವಷ್ಟನ್ನೇ ಖರ್ಚು ಮಾಡಿ ಇಡೀ ಇಪ್ಪತ್ತು ಲಕ್ಷ ನುಂಗಿ ನೀರು ಕುಡಿದ. ಅಶೋಕ್ ಕೃಪೆಯಿಂದ ಕೋಟಿಗಟ್ಟಲೇ ಕಾಮಗಾರಿಗಳನ್ನು ಮಂಜೂರು ಮಾಡಿಸಿಕೊಂಡು ಅದೆಲ್ಲವನ್ನೂ ತನ್ನ ಬೇನಾಮಿ ಕಂಟ್ರಾಕ್ಟರ್ ಶಂಭುಲಿಂಗಪ್ಪನ ಹೆಸರಲ್ಲಿ ಮುಂಡಾಮೋಚಿದ. ಈಗ ಮತ್ತೆ ಗಣೇಶ್ ಮಂದಿರ ವಾರ್ಡಿಗೆ ವಕ್ಕರಿಸುತ್ತಿದ್ದಾನೆ.

ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯತರ‍್ಯಾರೂ ತನ್ನ ವಿರುದ್ಧ ಸ್ಪರ್ಧಿಸಲಾಗದ ಹಾಗೆ ಕ್ಯಾಟಗರಿ ಬದಲಿಸಿಕೊಂಡು ಮತ್ತೆ ಬೋಗಸ್ ಓಟ್ ಕೈಚಳಕದಿಂದ ಗೆದ್ದು ಕೌನ್ಸಿಲರ್ ಆಗುವುದು ಈತನ ಹುನ್ನಾರ. ಅವತ್ತು ಬಿಜೆಪಿ ಸರ್ಕಾರವಿರಲಿಲ್ಲ, ಪಾಲಿಕೆ ಕಾಂಗ್ರೆಸ್-ಜೆಡಿಎಸ್‌ಗಳ ಜಂಟಿ ಆಳ್ವಿಕೆಯಲ್ಲಿತ್ತು. ಹಾಗಿದ್ದೂ ಇಷ್ಟೆಲ್ಲಾ ಆಸ್ತಿ ದೋಚಿದ (ಬಾಕ್ಸ್ ನೋಡಿ) ಬಸವರಾಜು ಈಗೇನಾದರೂ ಗೆದ್ದನೆಂದರೆ ಬನಶಂಕರಿಯನ್ನು ಕಾಯುವವರ‍್ಯಾರು?

ಬೆಂಗಳೂರಿಗೆ ಉಳಿಗಾಲವುಂಟೆ?

● ಮಲ್ಲಿ

ಶಾಸಕರ ಭವನದ ಶೋಕಿ ಮತ್ತು ಸರ್ಕಾರಿ ಭೂಮಿಯ ಲೂಟಿ

ಇದೆಲ್ಲವೂ ಬನಶಂಕರಿ ಆಸುಪಾಸಿನಲ್ಲಿ ಬಸವರಾಜು ಮಾಡಿಟ್ಟ ಬೇನಾಮಿ ಆಸ್ತಿಪಾಸ್ತಿಗಳ ಪಟ್ಟಿಯಾದರೆ ಬೆಂಗಳೂರಿನಿಂದಾಚೆಗಿನ ಆತನ ಆಸ್ತಿಪಾಸ್ತಿಗಳದ್ದೇ ಮತ್ತೊಂದು ಪಟ್ಟಿಯಿದೆ.

ತನ್ನ ಹುಟ್ಟೂರು ಮಾಗಡಿ ತಾಲ್ಲೂಕಿನ ಅತ್ತನಗೆರೆಯಲ್ಲಿ ಆತ ಎಂಟೆಕರೆ ಜಮೀನು ಕೂಡ ಗಣೇಶ್ ಮಂದಿರದ ಕೌನ್ಸಿಲರ್ ಆಗಿ ಗೆದ್ದ ನಂತರವೇ ಖರೀದಿಸಿದ್ದು. ಇಷ್ಟೆಲ್ಲಾ ಬೇನಾಮಿ ಸೊತ್ತು ಮುಕ್ಕಿದ ನಂತರವೂ ಆತನ ದನದಾಹ ತಣಿಯಲಿಲ್ಲ. ಮಂತ್ರಿ ಅಶೋಕ್ ಉತ್ತರಹಳ್ಳಿಯ ಶಾಸಕರಾಗಿದ್ದಾಗ ಬೆಂಗಳೂರು ಸುತ್ತಮುತ್ತಲ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ದರಖಾಸ್ತು ಮಂಜೂರಾತಿಯ ಹೆಸರಲ್ಲಿ ದೋಚಲಾಯ್ತಲ್ಲ, ಈ ಭೂಕಬಳಿಕೆಯ ಪ್ರಮುಖ ಭೂಕಂಟಕರಲ್ಲಿ ಬಸವರಾಜು ಕೂಡ ಒಬ್ಬ!

ಕೆಂಗೇರಿ ಹೋಬಳಿಯ ಸ.ನಂ. 91 ರಲ್ಲಿ ತನ್ನ ಪತ್ನಿ ಮಂಜುಳಾ ಹೆಸರಿಗೆ 3 ಎಕರೆ ಸರ್ಕಾರಿ ಭೂಮಿಯನ್ನು ಕಳ್ಳದಾಖಲೆ ಕೊಟ್ಟು ಮಂಜೂರು ಮಾಡಿಸಿಕೊಂಡದ್ದು ಸಾಲದೆಂಬಂತೆ ಅದೇ ಸರ್ವೆ ನಂಬರಿನ ಮತ್ತೆ 3 ಎಕರೆ ಭೂಮಿಯನ್ನು ತನ್ನ ಅತ್ತೆ ಲಕ್ಷ್ಮಿ ಬಿನ್ ವೆಂಕಟಪ್ಪಳ ಹೆಸರಲ್ಲಿ ಬಸವರಾಜು ಕಬಳಿಸಿಬಿಟ್ಟ. ನಿರ್ಗತಿಕ ದಲಿತಕೂಲಿಗಳ ಹೆಸರಲ್ಲಿ ನಕಲಿ ಸಾಗುವಳಿ ಚೀಟಿ, ನಕಲಿ ರೇಷನ್ ಕಾರ್ಡ್, ಬೋಗಸ್ ಇನ್‌ಕಮ್ ಸರ್ಟಿಫಿಕೇಟ್ ಎಲ್ಲವನ್ನೂ ಸೃಷ್ಟಿಸಿ ಬಸವರಾಜು ದೋಚಿದ ಒಟ್ಟು ಆರು ಎಕರೆ ದರಖಾಸ್ತು ಭೂಮಿಯ ಸದ್ಯದ ಮಾರುಕಟ್ಟೆ ರೇಟೇ ಹದಿನೈದು ಕೋಟಿಯಷ್ಟಾಗುತ್ತದೆ!


ಬನಶಂಕರಿ ಕಾಂಪ್ಲೆಕ್ಸ್ ಪಕ್ಕದಲ್ಲೆ ಕಸದರಾಶಿ.....

ಹೋಗಲಿ, ತಾನೊಬ್ಬ ಜನಸೇವಕನೆಂಬ ಕನಿಷ್ಠ ಪ್ರಜ್ಞೆಯಾದರೂ ಇರಬೇಕಲ್ಲವೇ?

ಇವತ್ತು ಬನಶಂಕರಿಯ ಸುಚಿತ್ರಾ ಫಿಲ್ಮ್ ಸೊಸೈಟಿ ಮತ್ತು ಪಾಲಿಕೆ ವಾರ್ಡ್ ಕಚೇರಿ ಪಕ್ಕದ ಶಾಸಕರ ಭವನಕ್ಕೆ ದಿನದ ಯಾವುದೇ ಹೊತ್ತಲ್ಲಿ ಹೋಗಿ ನೋಡಿ. ಹೆಸರಿಗಷ್ಟೇ ಅದು ಶಾಸಕರ ಭವನ. ಎಮ್ಮೆಲ್ಲೇ ಅಶೋಕ್ ಅಲ್ಲಿಗೆ ಬರುವುದೇ ಅಪರೂಪ. ಆದರೆ ಸಂಜೆಯಾಗುತ್ತಿದ್ದಂತೆ ಅಲ್ಲಿ ಬಸವರಾಜನ ಪಟಾಲಮ್ ಅಡ್ಡೆ ಹಾಕುತ್ತದೆ. ಶಾಸಕರ ಭವನದ ನೆಪದಲ್ಲಿ ಅದೊಂದು ಐಷಾರಾಮಿ ವೈಭವೋಪೇತ ಶಯ್ಯಾ ಮಂಚ, ಅದಕ್ಕೆ ಹೊಂದಿಕೊಂಡಂತೆ ಆಳೆತ್ತರದ ಮಿರರ್, ಸುಖಕ್ಕೆ ತಕ್ಕಂತೆ ಏರ್‌ಕಂಡೀಷನ್ ವ್ಯವಸ್ಥೆ ಥರೇವಾರಿಯ ಸುಖಾಸದನ ಸೋಫಾ ಸೆಟ್ಟು, ಹೈಟೆಕ್ ಟಾಯ್ಲೆಟ್ಟು, ಹೀಗೆ ಐಷಾರಾಮಕ್ಕೆಂದೇ ಪಾಲಿಕೆ ರೊಕ್ಕದಿಂದ ಸೃಷ್ಟಿಯಾಗಿರುವ ಈ ಛೇಂಬರಿನಲ್ಲೇ ಬಸವರಾಜನ ಪಟಾಲಮ್ಮು ಗುಂಡೂತುಂಡೂ ಮತ್ತೊಂದರ ಮೋಜು ನಡೆಸುತ್ತದೆ.

ದುರಂತವೆಂದರೆ ಬಸವರಾಜನ ಇಂಥ ಶೋಕಿಗೆಂದೇ ರೂಪುಗೊಂಡ ಈ ಛೇಂಬರಿಗಾಗಿ ಪಾಲಿಕೆ ಮಾಸಿಕ 80 ಸಾವಿರ ರೂಪಾಯಿ ಸುರಿಯುತ್ತಿದೆ. ಜನಸೇವಕನೊಬ್ಬನ ಹುಟ್ಟಾ ಇದು?

ಗಿರಿನಗರ: ಲಲಿತಾ ಶ್ರೀನಿವಾಸ ಗೌಡರಿಗೆ ಯಾರು ಎದುರು?



ಲಲಿತಾ ಶ್ರೀನಿವಾಸ್

ಕಳೆದ ಬಾರಿ ಶ್ರೀನಗರಕ್ಕೆ ಕೌನ್ಸಿಲರ್ ಆಗಿದ್ದದ್ದು ಲಲಿತಾ ಶ್ರೀನಿವಾಸಗೌಡ. ಯಾರೇನೇ ಅಂದರೂ ಲಲಿತಾ ಓರ್ವ ಹೋರಾಟಗಾರ್ತಿ ಮತ್ತು ಪಕ್ಕಾ ಕೆಲಸಗಾತಿ ಎಂಬುದರಲ್ಲಿ ಎರಡು ಮಾತಿಲ್ಲ. ಸಣ್ಣದೊಂದು ಮಳೆ ಬಿದ್ದರೂ ನೂರಾರು ಮನೆಗಳಿಗೆ ಮೋರಿ ನೀರು ನುಗ್ಗುತ್ತಿದ್ದ ನರಿಹಳ್ಳವೆಂಬ ಕೊರಕಲು ಚರಂಡಿಯನ್ನು ಲಲಿತಾ ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಮಾಡಿಸಿದ್ದರಿಂದಾಗಿ ಅಷ್ಟೂ ಕುಟುಂಬಗಳಿಂದು ನೆಮ್ಮದಿಯಿಂದ ನಿದ್ರಿಸುತ್ತಿವೆ. ಖತರ್‌ನಾಕ್ ನೆಲಗಳ್ಳರ ವಿರುದ್ಧ ಹೋರಾಡಿ ಸರ್ಕಾರಿ ಭೂಮಿ ಉಳಿಸಿದ್ದು ಅಲ್ಲಿ ಪಾರ್ಕ್ ನಿರ್ಮಿಸಿದ್ದು ಅದೇ ಪಾರ್ಕಿನಲ್ಲಿಂದು ಜನ ಸಂಭ್ರಮದಿಂದ ವಾಕಿಂಗ್ ಮಾಡುತ್ತಿರುವುದು ಲಲಿತಾ ಶ್ರೀನಿವಾಸಗೌಡರ ಕಾಳಜಿಗೆ ನಿದರ್ಶನವಷ್ಟೇ.

ಲಲಿತಾ ಜನಪ್ರಿಯತೆ ಕಂಡೇ ಬಿಜೆಪಿ ಧೂರ್ತರು ಶ್ರೀನಗರ ವಾರ್ಡನ್ನು ಒಡೆದರು. ಕ್ಯಾಟಗರಿ ಬದಲಿಸಿದ್ದೂ ಅಲ್ಲದೇ ಶ್ರೀನಗರ ಅರ್ಧಭಾಗವನ್ನು ಪಕ್ಕದ ಗಿರಿನಗರ ವಾರ್ಡಿಗೆ ಸೇರಿಸಿದರು. ಹಾಗೇ ಗಿರಿನಗರ ವಾರ್ಡನ್ನು ಮಹಿಳಾ ಮೀಸಲಿಗೊಳಪಡಿಸಿದ ಬಿಜೆಪಿ ...ಯಕರಿಗಿದ್ದ ಒಂದೇ ಗುರಿಯೆಂದರೆ ಅಲ್ಲಿಂದ ಕಾತ್ಯಾಯಿನಿ ಎಂಬ ನಟೋರಿಯಸ್ ಹೆಂಗಸನ್ನು ಗೆಲ್ಲಿಸಿ ಕೌನ್ಸಿಲರ್ ಮಾಡುವುದು!


ಈ ಕಾತ್ಯಾಯಿನಿಯ ಕತೆ ಕೇಳಿದರೆ ಸಾರಾಯಿ ರಾಣಿ ಮಾರಿಮುತ್ತು ಕೂಡ ತಲೆ ತಗ್ಗಿಸಬೇಕು. ಕೆಲದಿನಗಳ ಕಾಲ ಮಾಜಿ ಸಂಸದೆ ತೇಜಸ್ವಿನಿಗೆ ಈಕೆ ಪರಮಾಪ್ತೆಯಂತಿದ್ದಳು. ...ನೇ ತೇಜಸ್ವಿನಿಯ ಪಿಎಸ್ ಎಂದುಕೊಂಡು ನೂರಾರು ಜನಕ್ಕೆ ಟೋಪಿ ಇಟ್ಟಳು. ಈಕೆಯ ವಂಚನೆಗೆ ಅಸ್ತ್ರದಂತಿದ್ದದ್ದು ಪ್ರಮೋದ್ ಹೌಸಿಂಗ್ ಸೊಸೈಟಿ. ಈಕೆಯ ತಂದೆ ...ಂಗಪ್ಪ ಸೈಟು ಕೊಡುತ್ತೇನೆಂದು ನೂರಾರು ಜನರಿಂದ ದುಡ್ಡು ಕಿತ್ತಿದ್ದ. ಶಾಸ್ತ್ರಕ್ಕಷ್ಟೇ ಲೇಔಟ್ ಇತ್ತಾದರೂ ಒಂದೇ ಸೈಟು ತೋರಿಸಿ ಹಲವರಿಂದ ಹಣ ಪಡೆದಿದ್ದ ಅಪ್ಪನ ...ಸುಬನ್ನೇ ಮಗಳು ಕಾತ್ಯಾಯಿನಿ ಮುಂದುವರೆಸಿದಳು.

ದುಡ್ಡೂ ವಸೂಲಾಗದೇ ಸೈಟೂ ದಕ್ಕದೇ ರೋಸತ್ತ ಜನ ಕೊನೆಗೆ ಕಾತ್ಯಾಯಿನಿಯನ್ನೇ ಹಿಡಿದು ಬಡಿದರು. ದುಡ್ಡು ಕಳಕೊಂಡು ಬೀದಿ ಪಾಲಾದವನೊಬ್ಬ ಆಕೆಯ ...ತ್ತಿಗೆಗೇ ಚಾಕು ಹಾಕಿದ್ದ!

ಇದ್ಯಾವುದರಿಂದಲೂ ಪಾಠ ಕಲಿಯದ ಕಾತ್ಯಾಯಿನಿ ನಿಸರ್ಗ ಸೇವಾ ಸಂಸ್ಥೆಗೆ ವಕ್ಕರಿಸಿ ಅಲ್ಲೂ ರೊಕ್ಕ ತಿಂದಳು. ಈಕೆಯನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿದ ಸೆಕ್ರೆಟರಿ ...ಮಕೃಷ್ಣನ ಮೇಲೆ ಪೊಲೀಸರಿಗೆ ಸುಳ್ಳು ದೂರು ಕೊಟ್ಟಳು. ಈಗ ಅನನ್ಯ ಸೇವಾ ಸಂಸ್ಥೆ ಎಂಬ ಮತ್ತೊಂದು ಸಂಸ್ಥೆ ಕಟ್ಟಿದ್ದಳಂತೆ. ಇಂಥ ...ಖ್ಯಾತ ಹೆಂಗಸನ್ನು ಕಟ್ಟಿಕೊಂಡು ಎಲ್ಲಿ ಮಣ್ಣುಮುಕ್ಕಬೇಕಾಗುತ್ತೋ ಎಂದು ಕೊನೆ ಗಳಿಗೆಯಲ್ಲಿ ನಾಗರತ್ನ ಎಂಬಾಕೆಯನ್ನು ಲಲಿತಾ ...ೀನಿವಾಸಗೌಡರ ಎದುರು ಬಿಜೆಪಿ ನಿಲ್ಲಿಸಿದರೂ ಅಚ್ಚರಿಯೇನಿಲ್ಲ.

ವಾರ್ಡ್ ವಾರ್ BBMP

ವಿದ್ಯಾಪೀಠದ ಸಂಗಾತಿ




ಸಂಗಾತಿ ವೆಂಕಟೇಶ್

ಸಂಗಾತಿ ವೆಂಕಟೇಶ್ ಎಂಬ ಪುರಾಣಾ ಪಂಟರ್‌ಗೂ ವಿದ್ಯಾಪೀಠ ಸರ್ಕಲ್ಲಿಗೂ ಯಾವ ಜನ್ಮಾಂತರದ ಋಣಾನುಬಂಧವೋ?

ಈ ಹಿಂದೆ ಕತ್ರಿಗುಪ್ಪೆ ವಾರ್ಡಿನಲ್ಲಿದ್ದ ವಿದ್ಯಾಪೀಠ ಈಗ ಪ್ರತ್ಯೇಕ ವಾರ್ಡಾಗಿದೆ. ಇಲ್ಲಿಗೆ ಕೌನ್ಸಿಲರ್ ಆಗಿದ್ದ ವೆಂಕಟೇಶ್‌ಮೂರ್ತಿ ಪಕ್ಕದ ಕತ್ರಿಗುಪ್ಪೆಗೆ ಬಿಜೆಪಿ ಅಭ್ಯರ್ಥಿಯಾಗಿರುವುದರಿಂದ ಅದೃಷ್ಟ ಖುಲಾಯಿಸಿದ್ದು ಸಂಗಾತಿ ವೆಂಕಟೇಶ್‌ಗೆ. ಬಿಜೆಪಿಗೆ ವಿದ್ಯಾಪೀಠಕ್ಕೊಬ್ಬ ಅಭ್ಯರ್ಥಿ ಬೇಕಿತ್ತು. ನಿನ್ನೆಮೊನ್ನೆಯ ತನಕ ಜೆಡಿಎಸ್‌ನಲ್ಲಿದ್ದ ಸಂಗಾತಿ ವೆಂಕಟೇಶ್ ಬಹುಶಃ ಬಿಜೆಪಿಗೆ ಬಂದಿದ್ದೇ ವಿದ್ಯಾಪೀಠ ವಾರ್ಡಿಗೋಸ್ಕರವೇ ಇರಬೇಕು.

ವಿಶೇಷವೆಂದರೆ ವೆಂಕಟೇಶ್ ವಿರುದ್ಧ ಇಲ್ಲಿ ಕಾಂಗ್ರೆಸ್-ಜೆಡಿಎಸ್‌ಗಳೆರಡಕ್ಕೂ ಅಭ್ಯರ್ಥಿಗಳೇ ಗತಿಯಿಲ್ಲ. ಕಳೆದ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರನಾಗಿ ನಿಂತೇ ವೆಂಕಟೇಶ್ ಕಮ್ಮಿ ಅಂತರದಿಂದ ಸೋತಿದ್ದ. ಸೋತನೆಂದು ಕೈಚೆಲ್ಲಿ ಕೂರಲಿಲ್ಲ. ಒಂದಲ್ಲಾ ಒಂದು ...ಜುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ. ವೆಂಕಟೇಶ್ ವಿರುದ್ಧ ಕಾಂಗ್ರೆಸ್ಸಿನ ಲಿಂಗರಾಜು ನಿಲ್ಲಬಹುದು ಅಥವಾ ಶಾಂತಕುಮಾರ್ ಅಭ್ಯರ್ಥಿಯಾಗಲೂಬಹುದು. ಬಹುಶಃ ...ಎಸ್ ಅಭ್ಯರ್ಥಿ ಹಾಕಲಿಕ್ಕಿಲ್ಲ. ಎಮ್ಮೆಲ್ಲೇ ರವಿ ಸುಬ್ರಹ್ಮಣ್ಯ ಮತ್ತು ಅಶೋಕ್ ಬೆನ್ನಿಗಿರುವಾಗ ಯೋಗ್ಯ ಎದುರಾಳಿಗಳೇ ದಿಕ್ಕಿಲ್ಲದಿರುವಾಗ ವಿದ್ಯಾಪೀಠ ವಾರ್ಡ್ ಎಂಬುದು ...ತ್ಸೂಕಮ್ಮಿ ವೆಂಕಟೇಶ್ ವಶವಾದಂತೆಯೇ.

ಹನುಮಂತನಗರ: ಕೆ. ಚಂದ್ರಶೇಖರ್ ಉತ್ತರಾಧಿಕಾರಿಯಾಗಿ ಬಲರಾಮ್?



ಚಂದ್ರಶೇಖರ್




ಬಲರಾಂ

ಆ ಕಾಲದಿಂದಲೂ ಕೆ. ಚಂದ್ರಶೇಖರ್ ಪಾಲಿಗೆ ಮನೆಯಂತಿದ್ದದ್ದು ಹನುಮಂತನಗರ. ನಿರಂತರವಾಗಿ ಇಲ್ಲಿಂದಲೇ ಗೆದ್ದು ಮೇಯರ್ ಆಗಿ ಕೊನೆಗೆ ಬಸವನಗುಡಿಗೆ ಶಾಸಕರಾಗುವ ಮಟ್ಟಕ್ಕೆ ಬೆಳೆದವರು ಕಾಂಗ್ರೆಸ್ಸಿನ ಕೆ. ಚಂದ್ರಶೇಖರ್. ಈ ಬಾರಿ ಚಂದ್ರಶೇಖರ್ ಬದಲಿಗೆ ಅವರ ನಂಬಿಕಸ್ತ ಶಿಷ್ಯ ಎಂ.ಜಿ. ಬಲರಾಮ್ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಬಲರಾಮ್ ವಿದ್ಯಾವಂತ. ದುರಹಂಕಾರಿಯಲ್ಲ. ಕಳೆದ ಮೂವತ್ತು ವರ್ಷದಿಂದ ಕಾಂಗ್ರೆಸ್ಸಿಗಾಗಿ ದುಡಿದವರು. ಕೆ. ಚಂದ್ರಶೇಖರ್ ಶ್ರೀರಕ್ಷೆಯಿದ್ದ ಮೇಲೆ ಬಲರಾಮ್ ಗೆಲುವು ಕಷ್ಟವೇನಲ್ಲ.

ಆದರೆ ಬಲರಾಮ್ ವಿರುದ್ಧ ಬಿಜೆಪಿಯಿಂದ ನಿಲ್ಲಲು ಹೊರಟ ಈಶ್ವರ್ ಕಮ್ಮಿಯ ಕುಳವೇನಲ್ಲ. ಈ ಬಾರಿ ಶತಗತಾಯ ಹನುಮಂತನಗರವನ್ನು ಹಿಡಿಯುವುದು ಶಾಸಕ ಸುಬ್ರಹ್ಮಣ್ಯರ ಮಹದಾಸೆಯಂತೆ. ಪಾರ್ಟಿ ಫಂಡ್ ಎಂದೇ ಈಶ್ವರ್‌ಗೆ ಒಂದು ಕೋಟಿ ಕೊಡುತ್ತಾರಂತೆ. ಕಳೆದ ಬಾರಿ ಚಂದ್ರಶೇಖರ್ ವಿರುದ್ಧ ನಿಂತು ಠೇವಣಿ ...ದುಕೊಂಡಿದ್ದ ಈಶ್ವರ್ ಬಳಿ ನಟಿ ಸೌಂದರ್ಯ ಕೊಟ್ಟಿಟ್ಟಿದ್ದ ದುಡ್ಡು ಹಾಗೇ ಉಳಿದುಬಿಟ್ಟಿದೆ. ವಿಮಾನಾಪಘಾತದಲ್ಲಿ ಸೌಂದರ್ಯ ದುರಂತಕ್ಕೀಡಾಗಿದ್ದೇ ಆಕೆಯ ಅಣ್ಣ ...ಟ್ಟು ಮಡಗಿದ್ದ ಕಾಸೆಲ್ಲ ಈಶ್ವರ್ ಬಳಿಯೇ ಉಳಿಯಿತಂತೆ. ಈ ದುಡ್ಡು ಮತ್ತು ಪಾರ್ಟಿ ಕೊಟ್ಟ ಫಂಡೂ ಸೇರಿ ಅದಕ್ಕೆ ಈಶ್ವರ್‌ನ ಖತರ್‌ನಾಕ್ ತಲೆಯೂ ...ಓಡಿಸಿತೆಂದರೆ ಹನುಮಂತನಗರದಲ್ಲಿ ಹಣದ ಹೊಳೆ ಹರಿಯುವುದು ಗ್ಯಾರಂಟಿ.

ಆದರೆ ಬಲರಾಮ್ ಇಂಥ ಗಂಡಾಗುಂಡಿಯನ್ನೂ ಮೀರಿ ನಿಲ್ಲಬಲ್ಲ ಛಲಗಾರ. ಕೆ. ಚಂದ್ರಶೇಖರ್ ಶ್ರೀರಕ್ಷೆಯೊಂದಿದ್ದರೆ ಸಾಕು ಬಲರಾಮ್ ನಿರಾಯಾಸವಾಗಿ ಗೆಲ್ಲಬಲ್ಲ.



ತಿಮ್ಮೇಗೌಡ

ಒಬ್ಬ ಹುಚ್ಚಯ್ಯ ಮತ್ತೊಬ್ಬ ಕೊಚ್ಚಯ್ಯ

ಶ್ರೀನಗರಕ್ಕೆ ಉಳಿದವನೇ ತಿಮ್ಮೇಗೌಡ!

ಅಪ್ಪ ಬಿಜೆಪಿ ನಾಯಕನಾದರೆ ಮಗ ಕಾಂಗ್ರೆಸ್ ಕೌನ್ಸಿಲರ್ ಆಗುವುದುಂಟಾ?


ನಂಬಿದರೆ ನಂಬಿ ಬಿಟ್ಟರೆ ಬಿಡಿ. ಕಳೆದ ಚುನಾವಣೆಯಲ್ಲಿ ಚಲುವರಾಯಸ್ವಾಮಿ ವಿರುದ್ಧ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದ ಲಾಳನಕೆರೆ ಶಿವರಾಮೇಗೌಡ ತಾನೆ?

ತಮಾಷೆ ಹೇಗಿದೆಯೆಂದರೆ ಈ ಎಲ್ಲಾರ್ ಶಿವರಾಮೇಗೌಡರ ಮಗ ಚೇತನ್ ಈಗ ಶ್ರೀನಗರ ವಾರ್ಡಿಗೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಈಗ ಅಪ್ಪ ಬಿಜೆಪಿಯಲ್ಲಿದ್ದರೇನಂತೆ ನನಗೆ ಶ್ರೀನಗರಕ್ಕೆ ಕಾಂಗ್ರೆಸ್ ಟಿಕೆಟ್ ಕೊಡಿ ಎಂದು ಚೇತನ್ ಲಾಬಿಗಿಳಿದಿದ್ದಾನೆ. ಶ್ರೀನಗರಕ್ಕೂ ಚೇತನ್‌ಗೂ ಪಾಲಿಕೆ ಎಲೆಕ್ಷನ್ನಿಗೂ ಯಾವ ಬಾದರಾಯಣ ಸಂಬಂಧವಿದೆಯೋ ಗೊತ್ತಿಲ್ಲ. ಕಾಂಗ್ರೆಸ್ ನಾಯಕರ ತಲೆ ಕೆಟ್ಟರೆ ಆತನೇ ಶ್ರೀನಗರದ ಕಾಂಗ್ರೆಸ್ ಕ್ಯಾಂಡಿಡೇಟಾದರೂ ಆಚ್ಚರಿಯಿಲ್ಲ. ಏಕೆಂದರೆ ಕಾಂಗ್ರೆಸ್ಸಿಗಲ್ಲಿ ಮತ್ತೊಬ್ಬ ಗಂಡು ದಿಕ್ಕಿಲ್ಲ.

ಈ ಬಾರಿ ಶ್ರೀನಗರ ವಾರ್ಡಿನಲ್ಲಿರುವುದು ಜೆಡಿಎಸ್ ಅಲೆ. ಆ ಕಾಲದಿಂದಲೂ ಈ ಸುತ್ತಮುತ್ತ ಜೆಡಿಎಸ್ ಪರ ಹೋರಾಟ ಮಾಡಿಕೊಂಡೇ ಬಂದದ್ದು ಟ. ತಿಮ್ಮೇಗೌಡ. ತಂದೆ ತಿಮ್ಮಯ್ಯರ ಹೆಸರಲ್ಲಿ ಚಾರಿಟಬಲ್ ಟ್ರಸ್ಟ್ ಮಾಡಿಕೊಂಡು ಬಡಬಗ್ಗರಿಗೆಂದೇ ಒಂದಲ್ಲ ಎರಡು ಆಂಬುಲೆನ್ಸ್ ಇಟ್ಟು ಸೇವೆಗೈಯುತ್ತಲೇ ಬಂದವನು ತಿಮ್ಮೇಗೌಡ. ಜೆಡಿಎಸ್‌ಗೆ ಬಾವುಟ ಕಟ್ಟುವವರೂ ಶ್ರೀನಗರದಲ್ಲಿ ಗತಿಯಿರಲಿಲ್ಲ. ಅಂಥಾ ದುಷ್ಕಾಲದಲ್ಲಿ ನಿಂತು ಪಕ್ಷ ಕಟ್ಟಿದ ತಿಮ್ಮೇಗೌಡ ನಿಲ್ಲದೇ ಕುಮಾರಸ್ವಾಮಿ ಇನ್ಯಾರಿಗೆ ಜೆಡಿಎಸ್ ಟಿಕೆಟ್ಟು ಕೊಡುತ್ತಾರೆ.

ವಿಕಟವೆಂದರೆ ಈಗ ಸಿದ್ದೇಗೌಡನೆಂಬ ಪ್ರಾಣಿಯೊಂದು ಎಲ್ಲಿಂದಲೋ ಬಂದು ಶ್ರೀನಗರದಲ್ಲಿ ಠಿಕಾಣಿ ಹಾಗಿದೆ. ಹೇಗೂ ಜೆಡಿಎಸ್‌ನಲ್ಲಿ ಮೊದಲೇ ನೆಲೆ ಇರುವುದರಿಂದ ಮಂಕುಬೂದಿ ಹಾಕುತ್ತಿದ್ದಾನೆ. ಬಿಜೆಪಿಯ ಅಭ್ಯರ್ಥಿಯಾಗಲಿರುವ ಹುಚ್ಚಯ್ಯ ಹೇಳಿಕೇಳಿ ಅರೆಹುಚ್ಚ. ಶಿವರಾಮೇಗೌಡರ ಮಗ ಚೇತನ್ ಸುತ್ತ ರೊಚ್ಚು ಕಿಚ್ಚು ಕೊಚ್ಚು ಸ್ಟೈಲಿನ ಹುಡುಗರಿದ್ದರೆ ಯಾರು ಮೂಸುತ್ತಾರೆ?

ಯಾರೇ ಬೆವರು ಸುರಿಸಿ ಕಟ್ಟಿದ ಮನೆಗೆ ತಾನು ಸೇರಿಕೊಳ್ಳುವ ಸಿದ್ದೇಗೌಡನ ಷಡ್ಯಂತ್ರಕ್ಕೇನಾದರೂ ಜೆಡಿಎಸ್ ನಾಯಕರು ಮರುಳಾದರೆಂದರೆ ತಿಮ್ಮೇಗೌಡರಂಥ ಜನನಾಯಕನೊಬ್ಬನನ್ನು ಕಳಕೊಂಡ ಹಾಗೆಯೇ. ಏಕೆಂದರೆ ಶ್ರೀನಗರದಲ್ಲಿ ಜೆಡಿಎಸ್ ಬದುಕಿರುವುದೇ ತಿಮ್ಮೇಗೌಡರಿಂದ.


ಗುರುಪ್ಪನಾಯ್ಡು

ಕಾಂಗ್ರೆಸ್ ಟಿಕೆಟ್ ಮಾರಾಟಕ್ಕೆ?

ಬಿಜೆಪಿಯ ದುರಾಡಳಿತ, ಹಗಲುದರೋಡೆ ಮತ್ತು ಎಲೆಕ್ಷನ್ ಗಿಮಿಕ್ಕುಗಳ ವಿರುದ್ಧ ಪರಿಣಾಮಕಾರಿಯಾಗಿ ಸೆಣಸಬೇಕಿದ್ದ ಕಾಂಗ್ರೆಸ್ಸಿನ ದುರವಸ್ಥೆಗೆ ಅದರ ಕಾರ್ಯಕರ್ತರೇ ಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಕಳೆದ ವಿಧಾನಸಭಾ ಮತ್ತು ಲೋಕಸಭೆ ಚುನಾವಣೆಗಳ ಫಲಿತಾಂಶದಿಂದಾದರೂ ಕಾಂಗ್ರೆಸ್ ಪಾಠ ಕಲಿಯಬೇಕಿತ್ತು. ಬದಲಾಗಿ ತನ್ನದೇ ನಾಯಕರ ಒಣಪ್ರತಿಷ್ಠೆ, ಜಂಬ ಮತ್ತು ಕಚ್ಚಾಟದಿಂದಾಗಿ ಈ ಸಲದ ಪಾಲಿಕೆ ಚುನಾವಣೆಯಲ್ಲೂ ಕಾಂಗ್ರೆಸ್ ಎಡವಿಬೀಳುವ ಸಾಧ್ಯತೆಗಳೇ ಹೆಚ್ಚು.


ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲೆಕ್ಸಾಂಡರ್ ವೈಯಕ್ತಿಕವಾಗಿ ಸಭ್ಯ ನಿಜ. ಹಾಗಂತ ಬೆಂಗಳೂರು ನಗರದ ಇಡೀ ಕಾಂಗ್ರೆಸ್ ಸೂತ್ರವಿರುವುದು ರಾಮಲಿಂಗಾರೆಡ್ಡಿಯ ಕೈಯಲ್ಲಿ. ಅಲೆಕ್ಸಾಂಡರ್ ಎತ್ತಂಗಡಿ ಮಾಡಿ ಆ ಜಾಗಕ್ಕೆ ತಾನೇ ಬಂದು ಕೂರುವ ರೆಡ್ಡಿ ಹುನ್ನಾರದ ವಿರುದ್ಧ ಬಹುತೇಕ ನಿಷ್ಠಾವಂತ ಕಾರ್ಯಕರ್ತರೆಲ್ಲ ಈಗಾಗಲೇ ದೇಶಪಾಂಡೆ, ದೀಕ್ಷಿತ್‌ಗೆ ದೂರು ಕೊಟ್ಟಾಗಿದೆ. ಏನೇ ಆದರೂ ಬೆಂಗಳೂರು ಸಿಟಿ ಕಾಂಗ್ರೆಸ್ ಉಸಾಬರಿಯಿಂದ ರಾ.ಲಿಂ. ರೆಡ್ಡಿಯನ್ನು ಹೊರಗಿಡಬೇಕೆಂಬ ಪಕ್ಷ ನಿಷ್ಠರ ಗುಂಪು ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದ್ದಕ್ಕೆ, ರಾ.ಲಿಂ. ರೆಡ್ಡಿಯನ್ನೇ ಹೊಣೆ ಮಾಡುತ್ತಿದೆ.

ಇಂಥಾ ಅರಾಜಕ, ಅತಂತ್ರ ಸ್ಥಿತಿಯಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ನಾಯಕರೂ ತಂತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲೇ ಬಿಜಿಯಾಗಿದ್ದಾರೆಯೇ ಹೊರತು ಯಾರಿಗೂ ಬಿಜೆಪಿಯನ್ನು ಸೋಲಿಸುವುದಾಗಲಿ, ಬೆಂಗಳೂರು ಪಾಲಿಕೆಯನ್ನು ವಶಪಡಿಸಿಕೊಳ್ಳುವುದಾಗಲಿ ಪ್ರಶ್ನೆಯೇ ಅಲ್ಲ, ಇದು ಕಾಂಗ್ರೆಸ್ ದುರಂತ!

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಮರ್ಥರಿದ್ದೂ ನಾಯಕರ ಭಟ್ಟಂಗಿಗಳು, ಛೇಲಾಗಳೆಂಬ ಒಂದೇ ಕಾರಣಕ್ಕೆ ಕಾಂಗ್ರೆಸ್ ಟಿಕೆಟ್ಟು ಗಿಟ್ಟಿಸಿದವರೇ ಈಗ ಪಾಲಿಕೆಗೆ ಅಭ್ಯರ್ಥಿಗಳನ್ನು ನಿರ್ಧರಿಸುತ್ತಿದ್ದಾರೆ. ಸರ್ ಸಿ.ವಿ. ರಾಮನ್‌ನಗರಕ್ಕೆ ಬಿಜೆಪಿಯ ರಘು ವಿರುದ್ಧ ಅಭ್ಯರ್ಥಿಯಾದ ಮಾಜಿ ಮೇಯರ್ ವಿಜಯ್‌ಕುಮಾರ್ ಮೂಲತಃ ಜಯನಗರದ ವಾಸಿ. ಯಾರದೋ ಮರ್ಜಿಗೆ ಬಿದ್ದು ಸಿ.ವಿ. ರಾಮನ್‌ನಗರಕ್ಕೆ ಕಾಂಗ್ರೆಸ್ 'ಬಿ' ಫಾರ್ಮ್ ಕೊಟ್ಟಿತು. ಸ್ಥಳೀಕ ಮತ್ತು ವರ್ತೂರು ಕೃಷ್ಣಪ್ಪನವರ ನಂಬಿಕಸ್ಥ ಕಾರ್ಯಕರ್ತನಾಗಿದ್ದ ತಿಪ್ಪಸಂದ್ರದ ಎಂ. ಶ್ರೀನಿವಾಸ್‌ಗೆ ಇಡೀ ಕ್ಷೇತ್ರದ ಮೇಲೆ ಹಿಡಿತವಿತ್ತಾದರೂ ಅದನ್ನು ಧಿಕ್ಕರಿಸಿ ಎಲ್ಲಿಂದಲೋ ಬಂದ ವಿಜಯ್‌ಕುಮಾರ್‌ಗೆ ಟಿಕೆಟ್ ಕೊಟ್ಟ ಫಲವಾಗಿ ಬಿಜೆಪಿಯ ರಘು ನಿರಾಯಾಸವಾಗಿ ಗೆದ್ದರು.

ಕಾಂಗ್ರೆಸ್ ಈಗಲೂ ಪಾಠ ಕಲಿತಂತಿಲ್ಲ. ಬೆನ್ನಿಗಾನಹಳ್ಳಿ ವಾರ್ಡಿಗೆ ಎಂ. ಶ್ರೀನಿವಾಸ್‌ಗಿಂತ ಸಮರ್ಥ ಅಭ್ಯರ್ಥಿ ಬೇಕಿಲ್ಲ. ಸ್ವಾತಿಪ್ಪಸಂದ್ರ ವಾರ್ಡಿಗೆ ಲಕ್ಷ್ಮಿ ಶ್ರೀನಿವಾಸ್ ತಕ್ಕ ಅಭ್ಯರ್ಥಿ. ಆದರೆ ವಿಜಯ್‌ಕುಮಾರ್‌ಗೆ ಬೇಕಿರುವುದು ಕಾಂಗ್ರೆಸ್ ಟಿಕೆಟ್ಟಿಗಾಗಿ ಕಾಸು ಕೊಡುವ ರೊಕ್ಕಸ್ಥರು ಮಾತ್ರ. ಕಾಸಿಗೆ ಟಿಕೆಟ್ಟು ಮಾರಿಕೊಂಡರೆ ಕೆಲಸ ಮಾಡಲು ಕಾರ್ಯಕರ್ತರೆಲ್ಲಿ ಬರುತ್ತಾರೆ?

ಇದೇ ಪರಿಸ್ಥಿತಿ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿದೆ. ಕಳೆದ ಬಾರಿ ಆರ್. ಅಶೋಕ್ ವಿರುದ್ಧ ಕಾಂಗ್ರೆಸ್ ಟಿಕೆಟ್ಟು ತಂದವನು ನಟೋರಿಯಸ್ ನೆಲಗಳ್ಳ ಗುರಪ್ಪನಾಯ್ಡು. ಯಡಿಯೂರಿಗೆ ಒಂದಲ್ಲ ಎರಡು ಬಾರಿ ಕೌನ್ಸಿಲರ್ ಆಗಿದ್ದ ವೆಂಕಟೇಶ್ ರೆಡ್ಡಿಗೆ ಟಿಕೆಟ್ ಸಿಕ್ಕಿದ್ದರೆ ಪದ್ಮನಾಭನಗರದ ಲೆಕ್ಕಾಚಾರವೇ ಬೇರೆಯಾಗುತ್ತಿತ್ತು. ಆದರೆ ಕಾಂಗ್ರೆಸ್ ಟಿಕೆಟ್ಟು ಕೊಟ್ಟಿದ್ದು ಧರ್ಮಸಿಂಗ್ ಮನೆಕೆಲಸದ ಆಳಿನಂತಿದ್ದ ಗುರಪ್ಪನಾಯ್ಡುಗೆ!


ವೆಂಕಟೇಶ್ ರೆಡ್ಡಿ

ಅಶೋಕ್ ಜೊತೆ ಸದ್ದಿಲ್ಲದೇ ಕೈಜೋಡಿಸಿದ ಗುರಪ್ಪನಾಯ್ಡು ತನ್ನನ್ನೇ ಬಿಜೆಪಿಗೆ ಮಾರಿಕೊಂಡ. ಕಾರ್ಯಕರ್ತರು ತಾನೇ ಎಷ್ಟು ಅಂತ ಹೆಣಗುತ್ತಾರೆ. ಗೆದ್ದ ಬಿಜೆಪಿ ಎದುರು ಜೆಡಿಎಸ್‌ನ ಕಬ್ಬಡಿ ಬಾಬುಗಿಂತಲೂ ಕಮ್ಮಿ ಓಟು ಗಿಟ್ಟಿಸಿದ ಕಾಂಗ್ರೆಸ್ಸಿಲ್ಲಿ ಮೂರನೇ ಸ್ಥಾನಕ್ಕೆ ಕುಸಿಯಿತು. ತಮಾಷೆಯೆಂದರೆ ಇದೇ ಗುರಪ್ಪನಾಯ್ಡು ಈಗ ಪಾಲಿಕೆ ಅಭ್ಯರ್ಥಿಗಳನ್ನು ನಿರ್ಧರಿಸುತ್ತಿದ್ದಾನೆ!

ವಾರ್ಡ್ ವಾರ್ BBMP


ಮೊದಲೇ ನೆಲಗಳ್ಳ. ಕಳೆದ ಪಾಲಿಕೆ ಚುನಾವಣೆಯಲ್ಲಿ ಬಸವನಗುಡಿ ವಾರ್ಡಿಗೆ ನಿಂತು ಬಿಜೆಪಿಯ ಕಟ್ಟೆ ಸತ್ಯನ ಮುಂದೆ ಠೇವಣಿಯನ್ನೂ ಉಳಿಸಿಕೊಳ್ಳಲಾಗದ ನಿಷ್ಪ್ರಯೋಜಕ. ಇಂಥವನಿಗೆ ಎಮ್ಮೆಲ್ಲೇ ಅಭ್ಯರ್ಥಿ ಮಾಡಿ ಕೈಸುಟ್ಟುಕೊಂಡಿದ್ದೂ ಸಾಲದೇ ಈಗ ಪಾಲಿಕೆ ಅಭ್ಯರ್ಥಿಗಳನ್ನೂ ಆಯ್ಕೆ ಮಾಡುವ ಅಧಿಕಾರ ಸಿಕ್ಕರೆ ಇನ್ನೇನಾದೀತು?


ಬದ್ದಿದ್ದಾನೆ. ಬಿಜೆಪಿಯ ಎಂ.ಆರ್. ವೆಂಕಟೇಶ್‌ರಂಥ ಬಲಾಢ್ಯನ ಮುಂದೆ ಹರಿರೆಡ್ಡಿಯಲ್ಲ ಸ್ವತಃ ಗುರಪ್ಪನಾಯ್ಡುವೇ ನಿಂತರೂ ಠೇವಣಿ ಹುಟ್ಟುವುದು ಕಷ್ಟ. ಅಂಥಾದ್ದರಲ್ಲಿ ಗೆಲ್ಲುವ ಅಭ್ಯರ್ಥಿ ವೆಂಕಟೇಶ್ ರೆಡ್ಡಿಯವರ ಪತ್ನಿಗೆ ಟಿಕೆಟ್ ತಪ್ಪಿಸಿದರೆ ಲಾಭ ಬಿಜೆಪಿಗೇ ತಾನೆ?


ಅಷ್ಟಕ್ಕೂ ಹರಿರೆಡ್ಡಿಗೂ ಕರೇಸಂದ್ರಕ್ಕೂ ಏನೇನೂ ಸಂಬಂಧವಿಲ್ಲ. ಆತ ಮೂಲತಃ ಪದ್ಮನಾಭನಗರದವನು. ಹೇಗೂ ಪದ್ಮನಾಭ ನಗರ ಜನರಲ್ ವಾರ್ಡಾಗಿರುವುದರಿಂದ ಹರಿರೆಡ್ಡಿ ಅಲ್ಲಿಗೇ ಅಭ್ಯರ್ಥಿಯಾಗಬಹುದು. ಆದರೆ ಬಿಜೆಪಿಯ ದೈತ್ಯ ಎಲ್. ಶ್ರೀನಿವಾಸ್ ಮುಂದೆ ನಿಂತು ಗೆಲ್ಲಲು ಧೈರ್ಯ ಬೇಕಲ್ಲ. ವೆಂಕಟೇಶ್ ರೆಡ್ಡಿಯ ಒಂದು ಕಣ್ಣು ಹೋಗುವುದಾದರೆ ತನ್ನ ಎರಡೂ ಕಣ್ಣು ಹೋಗಲಿ ಎಂಬ ಮನೆಹಾಳ ಬುದ್ಧಿ ಗುರಪ್ಪನಾಯ್ಡುವಿನದು.


ಯಡಿಯೂರು ವಾರ್ಡಿಗೆ ಆವತ್ತಿನಿಂದಲೂ ಕಾಂಗ್ರೆಸ್ ಕಾರ್ಯಕರ್ತನಾಗಿ ದುಡಿದದ್ದು ಟಿ. ಚಂದ್ರಶೇಖರ್. ಆತ ಬಿಟ್ಟರೆ ಶಾಸ್ತ್ರಿನಗರದ ಚಂದ್ರು, ಸಂಪಂಗಿ, ಕೃಷ್ಣಪ್ಪರಂಥ ಹಳೇ ಕಾಂಗ್ರೆಸ್ ಕಾರ್ಯಕರ್ತರಿದ್ದಾರೆ. ಈ ಪೈಕಿ ಟಿ. ಚಂದ್ರಶೇಖರ್‌ರನ್ನೇ ಕಾಂಗ್ರೆಸ್ ಅಭ್ಯರ್ಥಿಯಾಗುವಂತೆ ಮಿಕ್ಕೆಲ್ಲಾ ಕಾಂಗ್ರೆಸ್ಸಿಗರೂ ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.


ಆದರೆ ಇವರೆಲ್ಲರನ್ನೂ ಬದಿಗೊತ್ತಿ ಶಾಮಣ್ಣ ಎಂಬ ರೊಕ್ಕದ ಗಿರಾಕಿಗೆ ಗುರಪ್ಪನಾಯ್ಡು ಟಿಕೆಟ್ ಮಾರ ಹೊರಟಿದ್ದಾನೆ. ಶಾಮಣ್ಣ ರೊಕ್ಕದ ಗಿರಾಕಿ ನಿಜ. ಆದರೆ ಸ್ಥಳೀಕನಲ್ಲ. ಪಕ್ಕದ ವಿಲ್ಸನ್ ಗಾರ್ಡನ್ನಿನವನು. ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಕಾಲಿಟ್ಟೇ ಮೂರು ತಿಂಗಳಾಗಿದೆ. ಕಾಂಟ್ರಾಕ್ಟು-ಮಿನರಲ್ ವಾಟರ್ ದಂಧೆಯಲ್ಲಿ ಬೇಕಾಬಿಟ್ಟಿ ದುಡ್ಡು ಮಾಡಿದ ಶಾಮಣ್ಣ ಎಂಥ ಐಲುಪಾರ್ಟಿಯೆಂದರೆ 'ನಾನು ಸಿದ್ರಾಮಯ್ಯನವರಿಗೆ 25 ಲಕ್ಷ ಕಾಸು ಕೊಟ್ಟೇ ಕ್ಯಾಂಡಿಡೇಟ್ ಆಗಿದ್ದೀನಿ.....!' ಎಂದು ಅಧಿಕ ಪ್ರಸಂಗಿ ಡೈಲಾಗ್ ಹೊಡೆಯುತ್ತಾನೆ!


ರಾಮಲಿಂಗ ರೆಡ್ಡಿ


ಶ್ರೀನಿವಾಸ್


ಇ. ಚಂದ್ರಶೇಖರ್


ಚಂದ್ರಶೇಖರ್ ಟಿ.


ಅಲೆಕ್ಸಾಂಡರ್

ಯಡಿಯೂರು ವಾರ್ಡಿನಲ್ಲಿ ಕಾಂಗ್ರೆಸ್ ಗೆಲ್ಲಬೇಕೆಂದರೆ ಎಲ್ಲಿಂದ ಸಾಧ್ಯ? ಪಕ್ಕದ ಕುಮಾರಸ್ವಾಮಿ ಲೇಔಟಿನಲ್ಲಿ ಪಾರ್ಕ್ ಸೂರಿ ಎಂಬ ರೌಡಿ ಎಲಿಮೆಂಟು ಬಿಜೆಪಿ ಅಭ್ಯರ್ಥಿ. ಅಲ್ಲಿ ಹಿರೀಕ ಮತ್ತು ಸಂಭಾವಿತ ಚಿಕ್ಕಪಾಪಯ್ಯನಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟರೆ ಜನ ಕಣ್ಣುಮುಚ್ಚಿ ಚಿಕ್ಕಪಾಪಯ್ಯನನ್ನು ಗೆಲ್ಲಿಸುತ್ತಾರೆ.


ಬನಶಂಕರಿ ವಾರ್ಡಿಗೆ ಎಲ್ಲಾ ರೀತಿಯಲ್ಲೂ ಸಮರ್ಥ ಕಾಂಗ್ರೆಸ್ ಅಭ್ಯರ್ಥಿಯೆಂದರೆ ಆತ ನೂರುಲ್ಲಾನೇ. ಹಾಗಂತ ಕಾಂಗ್ರೆಸ್ ಟಿಕೆಟ್ಟಿಗಾಗಿ ನೂರುಲ್ಲಾ ಕಾಸು ಬಿಚ್ಚುವವನಲ್ಲ. ಅದಕ್ಕೆ ಅಯ್ಯೂಬ್ ಎಂಬ ತನ್ನ ಚೇಲಾನಿಗೆ ಗುರಪ್ಪನಾಯ್ಡು ಟಿಕೆಟ್ ಮಾರ ಹೊರಟಿದ್ದಾನೆ. ಪಕ್ಕದ ಕರೇಸಂದ್ರ ವಾರ್ಡಿಗೆ ಯಡಿಯೂರಿನ ಮಾಜಿ ಕೌನ್ಸಿಲರ್ ವೆಂಕಟೇಶ್ ರೆಡ್ಡಿ ತಮ್ಮ ಪತ್ನಿ ಲಕ್ಷ್ಮಿಯವರನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳಲು ಆವತ್ತಿನಿಂದಲೂ ಹೆಣಗಾಡಿದ್ದಾರೆ. ಈ ಹಿಂದೆ ಯಡಿಯೂರು ವಾರ್ಡಿನಲ್ಲಿದ್ದ ಏಕೆ ಕಾಲೋನಿ, ಬನಶಂಕರಿಯ 7 ಮತ್ತು 8ನೇ ಬ್ಲಾಕ್‌ಗಳ ಒಟ್ಟು 11 ಬೂತುಗಳು ಕರೇಸಂದ್ರ ವಾರ್ಡಿನಲ್ಲಿರುವುದರಿಂದ ಗೆಲ್ಲುವ ಅವಕಾಶವಿರುವುದು ವೆಂಕಟೇಶ್ ರೆಡ್ಡಿಗೇ.

ಆದರೆ ವೆಂಕಟೇಶ್ ರೆಡ್ಡಿ ಇವತ್ತಲ್ಲಾ ನಾಳೆ ಪದ್ಮನಾಭನಗರದ ಎಮ್ಮೆಲ್ಲೇ ಕ್ಯಾಂಡಿಡೇಟು. ಅಶೋಕ್ ವಿರುದ್ಧ ತನಗೆ ಕಾಂಗ್ರೆಸ್ ಟಿಕೆಟ್ಟು ಕೊಟ್ಟಿದ್ದನ್ನು ವಿರೋಧಿಸಿದ್ದಕ್ಕೆ ಮೊದಲೇ ಸಿಟ್ಟಿತ್ತು, ಈಗ ವೆಂಕಟೇಶ್ ರೆಡ್ಡಿ ಪತ್ನಿಗೆ ಟಿಕೆಟ್ ತಪ್ಪಿಸಿ ತನ್ನ ಚೇಲಾ ಹರಿರೆಡ್ಡಿಯ ಪತ್ನಿಯನ್ನು ಕರೇಸಂದ್ರ ವಾರ್ಡಿಗೆ ತರಲು ಗುರಪ್ಪನಾಯ್ಡು ಹಠಕ್ಕೆ

ಇಲ್ಲೂ ಅಷ್ಟೇ, ಬಿಜೆಪಿಯ ಪಾರ್ಕ್ ಸೂರಿಯಿಂದ ರೊಕ್ಕತಿಂದ ಗುರಪ್ಪನಾಯ್ಡು ಜನಾನುರಾಗಿ ಚಿಕ್ಕಪಾಪಯ್ಯನನ್ನು ಬದಿಗೊತ್ತಿ ಅಯ್ಯೂಬ್ ಎಂಬ ಮುಸ್ಲಿಂ ಅಭ್ಯರ್ಥಿಯನ್ನು ಹಾಕಹೊರಟಿದ್ದಾನೆ. ಸಹಜವಾಗೇ ಹಿಂದೂಗಳೆಲ್ಲ ಒಟ್ಟಾಗಿ ಬಿಜೆಪಿಯ ಪಾರ್ಕ್ ಸೂರಿಯನು ಗೆಲ್ಲಿಸುತ್ತಾರೆಂಬುದು ದ್ರೋಹಿ ಗುರಪ್ಪನ ಹುನ್ನಾರ. ಗಣೇಶ್ ಮಂದಿರ ವಾರ್ಡಿಗೆ ಬಿಜೆಪಿಯ ಬಸವರಾಜು ವಿರುದ್ಧ ಎಲ್. ಗೋವಿಂದರಾಜುಗಿಂತ ಬೇರೆ ಅಭ್ಯರ್ಥಿ ಬೇಕಿಲ್ಲ. ನಿನ್ನೆಮೊನ್ನೆತನಕ ಬಿಜೆಪಿಯಲ್ಲಿದ್ದು ಈಗ ಕಾಂಗ್ರೆಸ್ಸಿಗೆ ಬಂದ ಗೋವಿಂದರಾಜುಗೆ ಸುಮ್ಮನೇ ಕಾಂಗ್ರೆಸ್ ಟಿಕೆಟ್ ಕೊಟ್ಟರೆ ಹೇಗೆ?

ಇನ್ನು ಕಾಂಗ್ರೆಸ್ ಉದ್ಧಾರವಾಗಬೇಕೆಂದರೆ ಹೇಗೆ?

● ರಾ. ಸೋಮನಾಥ್


ರಘುನಾಥ್... ದಿನೇಶ್ ಗುಂಡೂರಾವ್ ಜೊತೆ...

ದಿನೇಶ್ ಗುಂಡೂರಾಯರೇ ಹೀಗಾದರೆ?

ಗಾಂಧಿನಗರದ ಎಮ್ಮೆಲ್ಲೇ ದಿನೇಶ್ ಗುಂಡೂರಾವ್‌ಗೆ ತಾನು 20 ಲಕ್ಷ ಕೊಟ್ಟೇ 'ಬಿ' ಫಾರ್ಮ್ ಗಿಟ್ಟಿಸಿದ್ದೀನಿ ಎಂದು ಎಲ್ಲೆಂದರಲ್ಲಿ ರೈಲು ಬಿಡುವವನ ಹೆಸರು ಅಣ್ಣಾಡಿಎಂಕೆ ನಟರಾಜ್!


ಈತ ಹೆಸರಿಗಷ್ಟೇ ಕಾಂಗ್ರೆಸ್ಸು. ದಿನೇಶ್ ಗುಂಡೂರಾವ್‌ಗೆ ತಾನೇ ರೈಟ್ ಹ್ಯಾಂಡು ಎಂದು ಬಂಡಲ್ ಬಿಡುತ್ತಾನಾದರೂ ಅಸಲಿಗೆ ಈತ ತಮಿಳುನಾಡಿನ ಅಣ್ಣಾಡಿಎಂಕೆಯ ಪಕ್ಕಾ ಪುಢಾರಿ. ಕಳೆದ ಚುನಾವಣೆಯಲ್ಲಿ ದಿನೇಶ್ ಗುಂಡೂರಾವ್ ಪರ ಹಂಚಲು ಕೊಟ್ಟಿದ್ದ ಸೀರೆ, ವಿಸ್ಕಿ, ಕಾಸು ಎಲ್ಲವನ್ನೂ ಕದ್ದು ತಮಿಳುನಾಡಿಗೆ ಸಾಗಿಸಿ ಗುಡಿಯಾಟ್ಟಂನಿಂದ ಅಣ್ಣಾಡಿಎಂಕೆಗೆ ನಿಂತಿದ್ದ ತನ್ನ ತಂದೆ ಸುಂದರ್ ಪರ ಹಂಚಿ ಬಂದಿದ್ದ.

ಇಂಥವನನ್ನು ಗಾಂಧಿನಗರ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡ ಹೊರಟಿದ್ದಾರಂತೆ ದಿನೇಶ್ ಗುಂಡೂರಾವ್. ಹಕೀಕತ್ತೇನೆಂದರೆ ಈತನಿಗೂ ಗಾಂಧಿನಗರಕ್ಕೂ ಬಿಲ್‌ಕುಲ್ ಸಂಬಂಧವಿಲ್ಲ. ಪಕ್ಕದ ಮಲ್ಲೇಶ್ವರದ ಆಸಾಮಿ ನಟರಾಜನನ್ನು ತಂದು ಗಾಂಧಿನಗರ ಕೌನ್ಸಿಲರ್ ಮಾಡಹೊರಟ ದಿನೇಶ್ ಸಾಹೇಬರಿಗೆ ಅದೇನು ದೌರ್ಬಲ್ಯವೋ ಗೊತ್ತಿಲ್ಲ, ಕಾಂಗ್ರೆಸ್ಸಿನ ಬಹುತೇಕ ನಿಷ್ಠಾವಂತರೆಲ್ಲ ಸದ್ಯ ನಟರಾಜ್ ವಿರುದ್ಧ ತಿರುಗಿಬಿದ್ದಿದ್ದಾರೆ. ಆವತ್ತಿನಿಂದ ಗಾಂಧಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿ ಪಕ್ಷ ಕಟ್ಟಿದ್ದು ಬಿ.ಆರ್. ರಘುನಾಥ್. ಈ ಹಿಂದೆ ಗಾಂಧಿನಗರದ ಶಾಸಕರಾಗಿದ್ದ ದಯಾನಂದರಾವ್, ಲೋಕಸಭೆ ಗೆದ್ದಿದ್ದ ಗುಂಡೂರಾವ್, ನಂತರ ವರಲಕ್ಷ್ಮಿ ಗುಂಡೂರಾವ್, ತದನಂತರ ಬಿ.ಕೆ. ಹರಿಪ್ರಸಾದ್- ಹೀಗೆ ಯಾರೇ ನಿಂತರೂ ಯಾವುದೇ ಚುನಾವಣೆ ಬಂದರೂ ಗಾಂಧಿನಗರದ ಮಟ್ಟಿಗೆ ಕಾಂಗ್ರೆಸ್ಸಿಗೆ ಲೀಡು ಕೊಡಿಸುತ್ತಲೇ ಬಂದವರು ರಘುನಾಥ್.

ಜೀವನಪರ್ಯಂತ ಕಾಂಗ್ರೆಸ್ ಬಾವುಟ ಹಿಡಿದೇ ಹೈರಾಣಾದ ರಘುನಾಥ್‌ಗೀಗ ವಯಸ್ಸು ಐವತ್ತನ್ನು ದಾಟಿದೆ. ಮುಂಬರುವ ಪಾಲಿಕೆ ಚುನಾವಣೆ ಹೊತ್ತಿಗೆ ಬದುಕಿರುತ್ತಾರೋ ಗೊತ್ತಿಲ್ಲ. ರಘುನಾಥ್‌ಗಿಂತ ಕಿರಿಯರೆಲ್ಲ ಕೌನ್ಸಿಲರ್‌ಗಳಾದರು. ನಿಗಮ ಮಂಡಳಿಗಳ ಗದ್ದುಗೆ ಹಿಡಿದರು. ಸದ್ಯ ಪಿಸಿಸಿಗೆ ನಾಮಿನೇಟೆಡ್ ಮೆಂಬರ್ ಎಂಬುದನ್ನು ಬಿಟ್ಟರೆ ಯಾವುದೇ ಅಧಿಕಾರದ ರುಚಿ ಕಾಣದ ರಘುನಾಥ್ ಕೈಬಿಟ್ಟು ನಯವಂಚಕ ನಟರಾಜ್‌ಗೇನಾದರೂ ಮಣೆ ಹಾಕಿದ್ರೆ ಆದರೆ ಗಾಂಧಿನಗರದಲ್ಲಿ ಕಾಂಗ್ರೆಸ್ ಬಾವುಟ ಕಟ್ಟುವುದಕ್ಕೂ ಕಾರ್ಯಕರ್ತರಿರುವುದಿಲ್ಲ.

ಪಕ್ಷಕ್ಕಾಗಿ ಜೀವ ತೇದ ರಘುನಾಥ್ ಥರದ ಹಿರೀಕರನ್ನು ದಿನೇಶ್ ಗುಂಡೂರಾವ್‌ರೇ ಕೈಹಿಡಿಯದೇ ಹೋದರೆ ಕಾರ್ಯಕರ್ತರನ್ನು ಕಾಯುವವರ್ಯಾರು?

ಬಸವನಗುಡಿ ಟ್ಟೆ ಸತ್ಯನ ಡುಬೀದಿ ಡ್ರಾಮಾ


ಕಟ್ಟೆ ಸತ್ಯನಾರಾಯಣ

ಬಸವನಗುಡಿಯ ಮಾಜಿ ಬಿಜೆಪಿ ಕೌನ್ಸಿಲರ್ ಕಟ್ಟೆ ಸತ್ಯನ ಕನ್ನಡ ು ರಾತ್ರೋರಾತ್ರಿ ಹುದಿಜ್ವರದಂತೆ ಉಲ್ಬಣಗೊಳ್ಳುವುದಕ್ಕೂ ಏಕಾಏಕಿ ಕೆ ಎಲೆಕ್ಷನ್ ಘೋಷಣೆಯಾಗುವುದಕ್ಕೂ ಮತ್ತು ಬಸವನಗುಡಿಯ ಣರೆಲ್ಲಾ ಸೇರಿ ಈ ಬಾರಿ ಸತ್ಯನಿಗೆ ಕಾಯಂ ವಿಶ್ರಾಂತಿ ಕಲ್ಪಿಸುವ ರ್ಾನ ಕೈಗೊಂಡಿದ್ದಕ್ಕೂ ಪರಸ್ಪರ ಸಂಬಂಧವಿರಲೇಬೇಕು!

ಒಂದಲ್ಲ ಮೂರು ಬಾರಿ ಬಸವನಗುಡಿಯಿಂದ ಗೆದ್ದು ಕೌನ್ಸಿಲರ್ ಸತ್ಯನಾರಾಯಣ ಉರ್ಫ್ ಕಟ್ಟೆ ಸತ್ಯನ ಪಾಪದ ತುಂಬಿ ಬಂದಿದೆ. ಏಕೆಂದರೆ ಹಿಂದೆಲ್ಲಾ ಸತ್ಯನ ದ್ಧ ಸಂಗಾತಿ ವೆಂಕಟೇಶ್, ಗುರಪ್ಪನಾಯ್ಡು ಥರದ ಬ್ರಾಮಿನ್ಸ್ ನಿಲ್ಲುತ್ತಿದ್ದರು. ಕಳೆದ ಬಾರಿ ಕಾಂಗ್ರೆಸ್ ರ್ಥಿಯಾಗಿ ಸತ್ಯನ ವಿರುದ್ಧ ಕೇವಲ ಇನ್ನೂರು ಮತಗಳ ರದಿಂದ ಸೋತ ಜಿ.ಆರ್. ಮುರಳಿ ಈಗ ಮತ್ತೆ ಎದುರು ಕಾಂಗ್ರೆಸ್ ಅಭ್ಯರ್ಥಿ!


ಮುರುಳಿ

ಜಾತಿಯಲ್ಲಿ ಬ್ರಾಹ್ಮಣ. ಒಂದಲ್ಲ ಮೂರು ಬಾರಿ ರೂ ಬಸವನಗುಡಿಯ ಬ್ರಾಹ್ಮಣರಿಗೆ ಸತ್ಯ ಪೈಸೆಯ ನೆರವಾಗಲಿಲ್ಲ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಿ ಅಭ್ಯರ್ಥಿ ರವಿಸುಬ್ರಹ್ಮಣ್ಯನ ವಿರುದ್ಧ ಒಳಗೊಳಗೇ ಕತ್ತಿ ಮ ಕಾಂಗ್ರೆಸ್ ಅಭ್ಯರ್ಥಿ ಚಂದ್ರಶೇಖರ್ ಜೊತೆ ಕೈಜೋಡಿಸಿದ್ದಕ್ಕೆ ಷ್ಟ ಬಿಜೆಪಿ ಗಳಿಗೂ ಒಳಗೊಳಗೇ ಸಿಟ್ಟಿದೆ. ಹೋಗಲಿ ಶುದ್ಧ ಭ್ರಷ್ಟನಲ್ಲವಾ ಎಂದರೆ ಸತ್ಯ ಹಳೆಯ ಸತ್ಯನಾಗಿ ಉಳಿದೇ

ಸತ್ಯ ಇವತ್ತು ಕಮ್ಮಿಯೆಂದರೂ 50 ಕೋಟಿಯ ಆಸ್ತಿವಂತ. ಷ್ಠಿತ ಎಚ್.ಎಸ್.ಆರ್. ಲೇಔಟಿನಲ್ಲಿ ರು ಬಂಗಲೆ, ತನ್ನ ಪತ್ನಿಯ ತಮ್ಮ ಂದ್ರನ ಹೆಸರಲ್ಲಿ ಗಂಗಮ್ಮ ಟೆನ್‌ಶನ್‌ನಲ್ಲಿ ಎರಡು ಸೈಟು, ತನ್ನ ೂರು ಚನ್ನರಾಯಪಟ್ಟಣದಲ್ಲಿ 65 ಭರ್ಜರಿ ಎಸ್ಟೇಟ್ ಮತ್ತು ಖ್ಯಾತ ಟ್ಯಾಕ್ಸಿಗಳುಳ್ಳ ಟ್ರಾವೆಲ್ಸು. ಇದು ನಿಗೂಢ ಆಸ್ತಿಪಾಸ್ತಿಯಾದರೆ ಪೀಠ ಸರ್ಕಲ್ಲಿನಲ್ಲಿ ಕಟ್ಟಿಸುತ್ತಿರುವ ಬಂಗಲೆಯೊಂದೇ ಮೂರೂವರೆ ಟಿಯನ್ನು ಮೀರುತ್ತದೆ.

ವಾರ್ಡ್ ವಾರ್ BBMP

ಟ್ಟೆ ಸತ್ಯನ ಸತ್ಯವೇನಿದ್ದರೂ ಕಟ್ಟೆಗಷ್ಟೇ ಸೀಮಿತವೇ ಹೊರತು ರ್‌ಗಿರಿಯ ವಿಷಯದಲ್ಲಿ ಕುಂತ ಕಟ್ಟೆಗೂ ಪೊಟ್ಟಬಿಲ್ಲು ಜಡಿದು ನುಂಗುವುದು ಸತ್ಯನ ಖಯಾಲಿ. ಕಟ್ಟೆ ಬಳಗದ ಪಕ್ಕ ಹದಿನೈದು ಕಳ್ಳ ಕಾಮಗಾರಿ ನಡೆಸಲು ಹೋಗಿ ಸತ್ಯ ರೆಡ್‌ಹ್ಯಾಂಡ್ ದ್ದ. ಜನ ಇನ್ನೇನು ಅದರ ಫೋಟೋ ತೆಗೆದು ದೂರು ಕೊಟ್ಟು ಟಿಸಬೇಕೆನ್ನುವಷ್ಟರಲ್ಲಿ ಹುಷಾರಾದ ಸತ್ಯ ಅದಕ್ಕೆ ರಾತ್ರೋರಾತ್ರಿ ಹಾಕಿ ಬಚಾವಾಗಿಬಿಟ್ಟ!

ಂಗೆ ಬಸವನಗುಡಿ ವಾರ್ಡಿನುದ್ದಕ್ಕೂ ನಡೆದ ಅಸಂಖ್ಯಾತ ಕಳ್ಳ ಗಾರಿಗೆಲ್ಲ ಸತ್ಯ ಗುರಾಣಿಯಾಗಿ ಬಳಸಿದ್ದು ಹೆಗಡೆ ಎಂಬ ಮ ಇಂಜಿನಿಯರ್‌ನನ್ನು. ಯಾವ ಕಾಮಗಾರಿ ಮಾಡಿದರೆ ಕಮೀಷನ್ ಗಿಟ್ಟುತ್ತದೆ ಎಂಥಾ ಕೆಲಸಕ್ಕೆ ಎಷ್ಟು ಎಸ್ಟಿ ಮೇಟ್ ಬೇಕು, ಹೇಗೆ ಬೋಗಸ್ ಹಾಕಿ ಎಲ್ಲಿ ನುಂಗಬೇಕು; ದಿ ಕಳ್ಳಾಟ ದಲ್ಲೇ ಾನಾಗಿದ್ದ ಇಂಜಿನಿ ಯರ್ ಕೂಡ ಸುಮ್ಮನೇ ನಗುಡಿಗೆ ಬಂದವನಲ್ಲ, ೌನ್ಸಿಲರ್ ಸತ್ಯನ ಕೈಗೆ ು ಲಕ್ಷದ ಲಂಚ ಕೊಟ್ಟೇ ನಗುಡಿಗೆ ಕಾಲಿಟ್ಟಿದ್ದ ಯು ಜೊತೆ ಮತ್ತೊಬ್ಬ ಇಂಜಿನಿಯರ್ ಜೆ.ಇ. ಾನೂ ಸುಲಿಗೆಗಿಳಿದ. ಣರಿರಲಿ ಬಿಕನಾಸಿಯಾಗಿ ಣ್ಣ 30x40 ಸೈಟಿನಲ್ಲಿ ಕಟ್ಟಬೇಕೆಂದರೂ ಜೆ.ಇ. ಗಂಗಣ್ಣನಿಗೆ 50 ಸಾವಿರ ರೂಪಾಯಿ ಬೇಕು. ದೊಡ್ಡ ಸೈಟುಗಳಾದರೆ ಎರಡರಿಂದ ಮೂರು ಲಕ್ಷ ಳಲೇಬೇಕು. ಏನಪ್ಪಾ ಇದು ಅನ್ಯಾಯ? ಎಂದು ಯಾರೇ ಬ್ರಾಹ್ಮಣರು ಪ್ರಶ್ನೆಯಿಟ್ಟರೆಂದರೆ ಜೆ.ಇ. ಗಂಗಯ್ಯ 'ನನ್ನ ಮನೆಗೆ ನ್ರೀ....? ನೀವು ಕೊಡ್ತಿರೋದು ಕೌನ್ಸಿಲರ್ ಸತ್ಯಾ ಅವ್ರಿಗೆ...!' ಝೂಂಕರಿಸುತ್ತಿದ್ದ.


ವೈನ್‌ಸ್ಟೋರ್ ವಿರುದ್ಧ ಪ್ರತಿಭಟನೆಯಲ್ಲಿ ಮುರುಳಿ

ಕೊನೆಗೆ ರೋಸತ್ತ ಬಸವನಗುಡಿಯ ಜನ ಜೆ.ಇ. ಗಂಗಯ್ಯ, ಎ.ಇ. ಹೆಗಡೆ ಮತ್ತು ಕೌನ್ಸಿಲರ್ ಸತ್ಯರ ಸುಲಿಗೆಯ ವಿರುದ್ಧ ಪಾಲಿಕೆ ಕಚೇರಿಗೆ ಲಗ್ಗೆಯಿಟ್ಟರು. ತಮಾಷೆಯೆಂದರೆ ಅತ್ತ ಮುರಳಿ ನೇತೃತ್ವದಲ್ಲಿ ಜನ ಪ್ರತಿಭಟಿಸುತ್ತಿದ್ದರೆ ಸತ್ಯ ಪ್ರತಿಭಟನಾಕಾರರ ವಿರುದ್ಧವೇ ನಡುರಸ್ತೆಯಲ್ಲಿ ಪ್ರತಿ ಧರಣಿ ಕುಂತುಬಿಟ್ಟ!

ತನ್ನ ವಿರುದ್ಧ ಪ್ರತಿಭಟಿಸುತ್ತಿರುವವರನ್ನು ಹಿಡಿದು ಲಾಕಪ್ಪಿಗೆ ಹಾಕಿ ಎಂದು ಪೆದ್ದಂಭಟ್ಟನಂತೆ ನಡುಬೀದಿಯಲ್ಲಿ ಕೂತು ಪೊಲೀಸರಿಗೆ ರೋಪು ಹಾಕುತ್ತಿದ್ದ ಕೌನ್ಸಿಲರ್ ಸತ್ಯನನ್ನು ಕೊನೆಗೆ ಪೊಲೀಸರೇ ಎತ್ತಿ ವ್ಯಾನಿಗೆಸೆದಿದ್ದರು!

ಇದು ಸತ್ಯನ ನಡುಬೀದಿ ರಾದ್ಧಾಂತ. ಅಂಥಾ ಸತ್ಯವಂತನಾಗಿದ್ದರೆ ಮನೆ ಮಾಲೀಕರನ್ನು ಸುಲಿಯುತ್ತಿರುವ ಭ್ರಷ್ಟ ಇಂಜಿನಿಯರ್‌ಗಳನ್ನು ಏಕಿಟ್ಟುಕೊಂಡಿದ್ದೀಯಾ? ಜನ ದೂರು ಕೊಟ್ಟ ಮೇಲಾದರೂ ಅವರನ್ನು ಸಸ್ಪೆಂಡ್ ಮಾಡಬೇಕಿತ್ತಲ್ಲವೆ? ಜನ ಪ್ರತಿಭಟಿಸುತ್ತಿದ್ದರೆ ಜನರ ವಿರುದ್ಧವೇ ನಡುಬೀದಿಯಲ್ಲಿ ಕೂರುವ ಬದಲು ಅಂಥವರನ್ನು ಸಸ್ಪೆಂಡ್ ಮಾಡ್ತೀನಿ ಅನ್ನಬೇಕಿತ್ತಲ್ಲವೆ? ನಾಟಕ ಸಾಕು ನಡಿಯಯ್ಯಾ ಎಂದು ಜನ ಉಗಿಯುತ್ತಿದ್ದರೆ ಸತ್ಯ ಆವತ್ತು ಪೊಲೀಸರ ಮೇಲೆ ಜಗಳಕ್ಕೆ ಬಿದ್ದಿದ್ದ.

ಈಗ ಪಾಲಿಕೆ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಸತ್ಯ ಮೈಮೇಲೆ ಕನ್ನಡದ ಭೂತ ಕುಣಿಯುತ್ತಿದೆ. 'ಎಲ್ಲೆಂದರಲ್ಲಿ ಗಾಯಕ, ಸಿ. ಅಶ್ವಥ್ ಫೋಟೋ ಹಾಕಿ 'ಕನ್ನಡವೇ ಸತ್ಯ' ಎಂದು ತನ್ನ ಫೋಟೋ ಸಮೇತ ಭಿತ್ತಿಪತ್ರ ಅಂಟಿಸುತ್ತಿದ್ದಾನೆ. ಅಶ್ವಥ್ ಬದುಕಿದ್ದಾಗ ಒಂದೇ ಒಂದು ದಿನ ಹೋಗಿ ಯೋಗ ಕ್ಷೇಮ ವಿಚಾರಿಸಲಿಲ್ಲ, ಅವರಿಗೆ ಪ್ರಶಸ್ತಿ ಬಂದಾಗ ಕಾಟಾಚಾರಕ್ಕೂ ಹೋಗಿ ಹಾರ ಹಾಕಿ ಅಭಿನಂದಿಸಲಿಲ್ಲ. ಈಗ ಸತ್ತ ಅನುಕಂಪದ ಲಾಭ ಪಡೆದು ಅದನ್ನೇ ತನ್ನ ಎಲೆಕ್ಷನ್ ಗಿಮ್ಮಿಕ್ಕಾಗಿ ಬಳಸಿಕೊಳ್ಳುವುದು ಸತ್ಯನ ಹುನ್ನಾರ.

ಅಶ್ವಥ್ ಫೋಟೋ ಹಾಕಿ 'ಕನ್ನಡವೇ ಸತ್ಯ' ಎಂದು ತನ್ನ ಫೋಟೋ ಸಹಿತ ಫ್ಲೆಕ್ಸ್ ಹಾಕಿಸಿಬಿಟ್ಟರೆ ಕಟ್ಟೆ ಸತ್ಯ ಮತ್ತು ಕನ್ನಡ ಸತ್ಯ ಎರಡೂ ಒಂದೇ ಎಂದುಕೊಂಡ ಜನ ಅಶ್ವಥ್ ಮುಖ ನೋಡಿ ತನಗೇ ಓಟು ಗುದ್ದುತ್ತಾರೆಂಬುದು ಸತ್ಯನ ಭ್ರಮೆ. ವಿಪರ್ಯಾಸವೆಂದರೆ ಸತ್ಯನ ಇಂಥ ಗಿಮ್ಮಿಕ್ ನೋಡಿದ್ದೇ ಕೆಂಡಾಮಂಡಲರಾದ ಶ್ರೀಮತಿ ಅಶ್ವಥ್ ತಾವೇ ನಿಂತು ಸತ್ಯ ಹಾಕಿಸಿದ್ದ ಫ್ಲೆಕ್ಸ್‌ಗಳನ್ನೆಲ್ಲ ಕಿತ್ತು ಹಾಕಿಸಿದ್ದಾರೆ. 'ನಮ್ಮೆಜಮಾನ್ರು ಬದುಕಿದ್ದಾಗ ಒಂದೇ ಒಂದು ದಿನ ಬಂದು ಕಷ್ಟ ವಿಚಾರಿಸಲಿಲ್ಲ, ಈಗ ಅವರ ಸಮಾಧಿ ಮೇಲೆ ಊಟಕ್ಕೆ ಕುಂತಿದ್ದೀಯಾ.....?' ಎಂದು ಶ್ರೀಮತಿ ಅಶ್ವಥ್ ಸತ್ಯನ ಭೂತ ಬಿಡಿಸಿದ್ದಾರೆ.

ಯಾವತ್ತು ಅಶ್ವಥ್ ಪತ್ನಿಯಿಂದ ಮಂಗಳಾರತಿಯಾಯ್ತೋ ಹತಾಶೆಗೆ ಬಿದ್ದ ಸತ್ಯ ತನ್ನ ಮನೆ ಕಿಟಕಿಗೆ ತಾನೇ ಕಲ್ಲು ಹೊಡಕೊಂಡು, ತನ್ನ ಎದುರಾಳಿ ಮುರುಳಿಯೇ ಮಾಡಿಸಿದ್ದು ಎಂದು ಹೆಂಡತಿಯಿಂದ ದೂರು ಕೊಟ್ಟ. ದೂರು ನೋಡಿದ್ದೇ ಇದು ಸತ್ಯನ ಎಲೆಕ್ಷನ್ ಗಿಮ್ಮಿಕ್ಕು ಎಂದು ಪೊಲೀಸರಿಗೆ ಮನದಟ್ಟಾಗಿತ್ತು. ಕಲ್ಲು ಬಿತ್ತೆಂದು ಸತ್ಯನ ಪತ್ನಿ ಮುರಳಿ ವಿರುದ್ಧ ದೂರು ಕೊಟ್ಟ ಹೊತ್ತಿಗೆ ಮುರಳಿ ಮತ್ತು ಸಂಗಡಿಗರು ಉತ್ತರ ಕರ್ನಾಟಕದಲ್ಲಿ ನೆರೆಸಂತ್ರಸ್ತರ ಸೇವೆಯಲ್ಲಿದ್ದರು. ಅದು ಟೀವಿಗಳಲ್ಲೂ ಸುದ್ದಿಯಾಗಿತ್ತು.


ಸದ್ಯ ಸತ್ಯನ ಗಿಮ್ಮಿಕ್‌ಗಳೆಲ್ಲಾ ಖಾಲಿಯಾಗಿವೆ. ಬಸವನಗುಡಿಯ ಬ್ರಾಹ್ಮಣರೇ ಸತ್ಯನ ಮುಖ ಕಂಡರೆ ಅಸಹ್ಯಪಟ್ಟುಕೊಳ್ಳುತ್ತಿದ್ದಾರೆ.

ಒಂದಲ್ಲ ಮೂರು ಬಾರಿ ಗೆದ್ದೂ ಭ್ರಷ್ಟ ಇಂಜಿನಿಯರ್‌ಗಳನ್ನು ಬಿಟ್ಟು ಮನೆ ಮಾಲೀಕರನ್ನು ಸುಲಿಯ ಹೊರಟರೆ ಇನ್ನೇನಾಗುತ್ತದೆ. ಕನ್ನಡವೇ ಸತ್ಯವೆಂದರೂ ತಾನೇ ಮನೆ ಕಿಟಕಿ ಬಡಕೊಂಡರೂ ನಡುಬೀದಿಯಲ್ಲಿ ಕೂತು ಬಾಯಿಬಡಕೊಂಡರೂ ಬಸವನಗುಡಿಯ ಜನ ನಂಬಬೇಕಲ್ಲ?

● ರಾ. ಸೋಮನಾಥ್

ನಮ್ಮ ಸ್ವಾಮಿಗಳ ಆಶೀರ್ವಾದ ಇರೋವರಿಗೆ ಇರತೇನಿ!

ನಿತ್ಯಾನಂದನ ಕಾಮಸೂತ್ರ ನೋಡಿದ ಕರ್ನಾಟಕದ ಕೆಲವು ಕಾವಿಧಾರಿಗಳು ಕಂಗಾಲಾಗಿ ಕುಳಿತಿದ್ದಾರಂತಲ್ಲಾ, ಈ ಪೈಕಿ ಉಡುಪಿ, ಶಿವಮೊಗ್ಗ ಮತ್ತು ಉತ್ತರ ಕರ್ನಾಟಕದ ಕಡೆಯ ಕೆಲವು ಕಾವಿಧಾರಿಗಳು ತಮ್ಮ ಡ್ರೈವರ್‌ಗಳನ್ನು, ತಮ್ಮ ಕಿಟಕಿ, ಕೋಣೆ ಮತ್ತು ಶಯ್ಯಾಗೃಹದ ಚೀಲಗಳನ್ನು ತಪಾಸಣೆ ಮಾಡಿಕೊಂಡು ಮಲಗುತ್ತಿದ್ದಾರಂತಲ್ಲಾ, ಅತ್ತ ಬೇಸ್ತುಬಿದ್ದು ನರಿಯಂತಾಗಿರುವ ನಿತ್ಯಾನಂದನ ಹಿಂಬಾಲಕರು "ಅದೆಲ್ಲಾ ಗ್ರಾಫಿಕ್ ಚಮತ್ಕಾರ, ನಮ್ಮ ನಿತ್ಯಾನಂದರು ಆನಂದಕ್ಕಾಗಿ ಮಹಿಳೆಯರನ್ನು ತಬ್ಬಿಕೊಳ್ಳುತ್ತಾರೆಯೇ ಹೊರತು ಸಂಭೋಗ ಮಾಡುವಷ್ಟು ಕೀಳು ಮಟ್ಟದವರಲ್ಲಾ" ಎಂದು ವಾದಿಸುತ್ತಿವೆಯಂತಲ್ಲಾ, ಥೂತ್ತೇರಿ!



***

ನಿತ್ಯಾನಂದ ಕಾವಿತೊಟ್ಟೇ ಮಾಡಿರುವ ಕಸುಬನ್ನು ಬೆಳಗಿನಿಂದ ಸಂಜೆಯವರೆಗೂ ಟಿವಿಯಲ್ಲಿ ನೋಡಿದ ಕೆಲವು ಕಾವಿಧಾರಿಗಳು "ಅಲ್ರೀ ಈತ ಕಾವಿ ತೊಟ್ಟುಕೊಂಡೇ ಕಾಯಕಮಾಡಿ ಕಾವಿಗೇ ಅವಮಾನ ಮಾಡಿದಾನಲ್ಲಾ" ಎಂದು ಹಲುಬಿದ್ದಲ್ಲದೇ, ಲೇಖನಗಳನ್ನು ಕರೆದಿದ್ದಾರಂತಲ್ಲಾ, ಅದೂ ಅಲ್ಲದೇ ಕಾಮಾತುರ ತನಾನಿಧಿಗಳು ಹೇಳುವ ಪ್ರಕಾರ "ನಿತ್ಯಾನಂದನ ಅಮಲು ನೋಡಿದರೆ, ಈತ ನಿಜಕ್ಕೂ ಅನುಭವಿ. ಮನಸ್ಸು ಮಾಡಿದರೆ ಈತ ಆಧುನಿಕ ರಜನೀಶನಾಗಬಹುದಿತ್ತು, ಆತ ವಯಾಗ್ರ ತಿನ್ನುವ ವೈಖರಿ, ಕಾಲನ್ನ ಎತ್ತಿಹಾಕುವ ಕಲಾತ್ಮಕತೆ.. ಇವೆಲ್ಲಾ ರತಿವಿಜ್ಞಾನದ ಓದಿನಿಂದ ದೊರಕಿರುವ ತಿಳಿವಳಿಕೆಗಳು" ಎಂದರಂತಲ್ಲಾ, ಅದೇನೇ ಆಗಲಿ, ಈತ ತನ್ನ ಮಾನ ಕಳೆದುಕೊಂಡರೂ ಕರ್ನಾಟಕದ ಕೆಲವು ಕಾವಿಧಾರಿಗಳ ಬಗ್ಗೆ ಕಣ್ಣು ತೆರೆಸಿದ್ದಾನೆ. ಇಂತಹವನ ಬಳಿಗೆ ನಮ್ಮ ಯಡವಟ್ ಯಡ್ಡಿಯವರು ಹೋಗಿ ಬರುತ್ತಿದ್ದರಂತಲ್ಲಾ, ಅಲ್ಲಿ ಯಡ್ಡಿ ಪಡೆಯುತ್ತಿದ್ದ ತಿಳಿವಳಿಕೆ ಯಾವುದು, ಉಪದೇಶ ಯಾವುದೆಂಬುದು ರಹಸ್ಯವಾಗುಳಿದಿದೆಯಂತಲ್ಲಾ, ಥೂತ್ತೇರಿ!

***

ಲಂಕೇಶ್‌ಗೆ 75 ವರ್ಷವಾದ ಗಡಿಬಿಡಿಯಲ್ಲಿದ್ದ ನಮಗೆ, ಯಡಿಯೂರಪ್ಪನಿಗೆ 68 ವರ್ಷವಾದದ್ದೇ ತಿಳಿಯಲಿಲ್ಲವಲ್ಲಾ, ಆದರೂ ಈ ಅಪರೂಪದ ಮುಖ್ಯಮಂತ್ರಿಗೆ ಶುಭಾಶಯ ಹೇಳುವುದು ನಮ್ಮ ಕರ್ತವ್ಯವಲ್ಲವೇ? ಫೋನ್ ಮಾಡಿದರೆ ಸಿಕ್ಕಿಬಿಟ್ಟರು.

"ಹಲೋ ಸಾರ್, ನಾನು ಯಾಹು ಸಾರ್."

"ಏನೇಳಿ ಯಾಹು ಅವರೆ."

"ಸಾರಿ ಸಾರ್, ನಿಮ್ಮ ಹುಟ್ಟಿದಹಬ್ಬಕ್ಕೆ ಶುಭಾಶಯ ಹೇಳೋದು ತಡವಾಯ್ತು."

"ಇರ್ಲಿ ಬಿಡಿ, ಎಷ್ಟೋ ಸಾರಿ ಆ ತರ ಆಗ್ತಾಯಿರತ್ತೆ, ಶೋಭಾ ಕೂಡಾ ಒಂದಿನ ತಡವಾಗಿ ಹೇಳಿದ್ಲು, ಏನು ಮಾಡಕ್ಕಾಗಲ್ಲ."

"ಹೇಗಿದೆ ಸಾರ್ ಆಡಳಿತ?"

"ನನ್ನ ಆಡಳಿತ ಜನರ ಭಾವನೆಗೆ ತಕ್ಕಂತೆ ನಡಿತಾಯಿದೆ. ಆದ್ರೂ ಕೆಲವರು ಈ ಸರ್ಕಾರನ ಬೀಳಿಸೋದಕ್ಕೆ ಪ್ರಯತ್ನ ಮಾಡ್ತಾಯಿದಾರೆ. ಆದ್ರೆ ನನ್ನನ್ನ ಕೆಳಗಿಳಿಸೋದು ಅಷ್ಟು ಸುಲಭವಲ್ಲ."

"ನಿಮ್ಮನ್ನ ಕೆಳಗಿಳಿಸೋದಕ್ಕೆ ಹೊರಗಿನ ಶಕ್ತಿಯಿಂದ ಸಾಧ್ಯವಿಲ್ಲ ಅಂತ ಸಾಬೀತಾಯ್ತಲ್ಲಾ ಸಾರ್."

"ಅದು ಸರಿ. ಆದ್ರೆ ಕೋಮುಗಲಭೆ ಮಾಡಿ ವೀರೇಂದ್ರ ಪಾಟೀಲರನ್ನ ಇಳಿಸಿದಂಗೆ ನನ್ನ ಇಳಿಸೋದಕ್ಕೆ ಟ್ರೈ ಮಾಡಿದ್ರು. ನಾನು ಕೋಮುಗಲಭೆಗೆ ಹೆದರಲ್ಲ."

"ಹೆದರೊ ಕಾರಣನೇ ಇಲ್ಲ ಸಾರ್. ಎಷ್ಟೇ ಆಗ್ಲಿ ನೀವು ಕೋಮು ಗಲಭೆಯಿಂದ್ಲೆ ಮೇಲೆ ಬಂದ ನಾಯಕರಲ್ಲವೇ?"

"ಅದನ್ನ ನನ್ನ ವಿರೋಧಿಗಳು ಮೊದಲು ತಿಳಕೋಬೇಕು. ವೀರೇಂದ್ರ ಪಾಟೀಲರಿಗೆ ಯಾರೂ ಇರಲಿಲ್ಲ, ಆದ್ರೆ ನನಗೆ ಸುತ್ತೂರು ಸ್ವಾಮಿ, ಸಿದ್ದಗಂಗೆ ಸ್ವಾಮಿ, ಸಿರಿಗೆರೆ ಸ್ವಾಮಿ ಇವರೆಲ್ಲಾ ಇದ್ದಾರೆ. ನಮ್ಮ ಸ್ವಾಮಿಗಳ ಆಶೀರ್ವಾದ ಇರೋವರಿಗೆ ನನ್ನನ್ನ ಯಾರೂ ಇಳಸಕ್ಕಾಗಲ್ಲ"

"ಈ ಮಾತು ಸುಳ್ಳಲ್ಲವ ಸಾರ್?"

"ಅದೇಗ್ರಿ ಸುಳ್ಳು?"

"ರೆಡ್ಡಿಗಳು ನಿಮ್ಮನ್ನು ಇಳಸೋದಕ್ಕೆ ಹೊರಟಾಗ ಈ ಸ್ವಾಮಿಗಳು ದ್ರಾಕ್ಷಿ, ಗೋಡಂಬಿ ತಿನ್ನಕೊಂಡು ಹಾಯಾಗಿದ್ರು. ಸುಷ್ಮ ಬಂದು ನಿಮ್ಮ ಉಳಿಸಿದ್ರು. ಈಗ್ಲೂ ನೀವು ಉಳದು ಬದುಕಿರೋದು ರೆಡ್ಡಿಗಳಿಂದ ಸಾರ್."

"ಇರಬಹುದು, ಆದ್ರೆ ಇವತ್ತು ಹಾಗಿಲ್ಲ."

"ಹಾಗಿಲ್ಲ ಅನ್ನದಾದ್ರೆ, ಹಂಪೆ ಯೂನಿವರ್ಸಿಟಿಯಿಂದ ಎಂಭತ್ತು ಎಕರೆ ಭೂಮಿ ಪರಭಾರೆ ವಿಷಯದಲ್ಲಿ ನಿಮ್ಮ ನಿಲುವೇನು?"

"ಎಂಭತ್ತು ಎಕರೆ ಜೊತೆಗೆ ಇನ್ನ ಒಂದಿಷ್ಟು ಭೂಮಿನ ನಾನು ಬಿಟ್ಟುಕೊಡೋದಕ್ಕೆ ರೆಡಿ."

"ಅಲ್ಲಿಗೆ ರೆಡ್ಡಿ ಗೆರೆ ದಾಟಲ್ಲ ಅಂದಂಗಾಯ್ತಲ್ಲ ಸಾರ್."

"ಅಲ್ರೀ ಯಾಹೂ, ರೆಡ್ಡಿಗಳು ಖಾಸಗಿ ಉಪಯೋಗಕ್ಕೆ ಆ ಭೂಮಿ ಕೇಳ್ತಾಯಿದಾರ? ನೀವೇ ಯೋಚನೆ ಮಾಡಿ."

"ಯೋಚನೆ ಮಾಡಿದ್ದಿನಿ ಸಾರ್. ಆ ಲೋಫರ್‌ಗಳಿಗೆ ಹಣ ಕರಡಿದೇಹದ ಕೂದಲ ತರ ಆಗಿದೆ. ಅದ್ಕೆ ಅಲವೆ ತಿರುಪ್ತಿ ದೇವರಿಗೆ 50 ಕೋಟಿ ರೂಪಾಯಿ ಕಿರೀಟ ಕೊಟ್ಟಿದ್ದು. ಅಂಥಾ ಜನಗಳನ್ನ ಹಂಪೆ ಯೂನಿವರ್ಸಿಟಿ ಹತ್ತರಕ್ಕೆ ಸೇರಸಬಾರ್ದು ಸಾರ್. ಭವಿಷ್ಯದಲ್ಲಿ ನಿಮ್ಮನ್ನ ಯಾರೂ ಕ್ಷಮಿಸಲ್ಲ."


"ಕ್ಷಮಿಸಲ್ಲ ಅನ್ನದು ನನಗೂ ಗೊತ್ತಿದೆ. ಆದ್ರೂ ನಾನು ಹೇಡಿ ತರಹ ಓಡಿಹೋಗಲ್ಲ."

"ಇದೇನ್ ಸಾರ್ ಹಿಂಗ್ ಮಾತಾಡ್ತಿರಿ. ನೀವು ಎಲ್ಲಾ ಸ್ವಾಭಿಮಾನ ಬಿಟ್ಟು ರೆಡ್ಡಿಗಳು ಹೇಳಿದ ಶರತ್ತಿಗೆಲ್ಲಾ ಒಪ್ಪಿಕೊಂಡು ರಾಜಿಯಾದಾಗ್ಲೆ ನೀವೊಬ್ಬ ಹೇಡಿ ಅನ್ನದು ಎಲ್ಲರಿಗೂ ಗೊತ್ತಾಗಿದೆ. ಪುನಃ ಹೇಡಿಯಲ್ಲ ಅಂತೀರಲ್ಲಾ ಸಾರ್?"

"ರೀ ಯಾಹೂ, ನಾನು ಹೇಡಿಯಲ್ಲ ಅಂದದ್ದ ಅರ್ಥಮಾಡಿಕೊಳ್ಳಿ. ನಾನು ಯಾರಿಗೂ ಹೆದರಿ ರೆಡ್ಡಿಗಳಿಗೆ ಕೊಡೋ 80 ಎಕರೆನ ಹಿಂದಕ್ಕೆ ಪಡಿಯೊಲ್ಲ, ಹಾಗೆ ದಂಡಾವತಿ ಯೋಜನೆಯಿಂದ್ಲೂ ಹಿಂದೆ ಸರಿಯಲ್ಲಾ, ಈ ಎಡೂರಪ್ಪ ಯಾವಾಗ್ಲೂ ಜನಪರವಾದ ಕೆಲಸದಿಂದ ಹಿಂದೆ ಸರಿಯಲ್ಲಾ, ತಿಳಕೊಳಿ."

"ಥೂತ್ತೇರಿ!!!"

ಬಲೆ ಬೀಸಿದ್ದು ಹೇಗೆ ಗೊತ್ತಾ?



● ಪಾರ್ವತೀಶ

ನಿತ್ಯಾನಂದ ಸ್ವಾಮಿಯ ಕರಾಳಮುಖ ಬಯಲಿಗೆಳೆದ ಡ್ರೈವರ್ ಲೆನಿನ್ ಕುರುಪ್ ಅಲಿಯಾಸ್ ಧರ್ಮಾನಂದನ ಹಿನ್ನೆಲೆ ಇಂಟರೆಸ್ಟಿಂಗಾಗಿದೆ. ಮೂಲತಃ ಇವನು ಸೇಲಂ ಜಿಲ್ಲೆಯ ಆತ್ತೂರು ಬಳಿಯ ಒಪ್ಪೆಕಾಟ್ಟುಪ್ಪದೂರಿನವನು. ಬಡವನಾಗಿದ್ದರೂ ನೇರ ನಡವಳಿಕೆಯ ಈ ಲೆನಿನ್ ಹೊಟ್ಟೆಪಾಡಿಗಾಗಿ ಏನೇನೋ ಕೆಲಸ ಮಾಡಿಕೊಂಡಿದ್ದವನು ಕೊನೆಗೆ ನಿತ್ಯಾನಂದನ ಆಪ್ತವಲಯ ಸೇರಿಕೊಂಡ. ಮೊದಲಿಗೆ ಡ್ರೈವರ್ ಆಗಿದ್ದವನು. ಕ್ರಮೇಣ ನಿತ್ಯಾನಂದನ ಪುಸ್ತಕ, ಭಾಷಣ ಸಿಡಿ ಸಿದ್ಧಪಡಿಸುವ, ಕೊನೆಗೆ ಕ್ಯಾಮರಾ ಹಿಡಿದು ಫೋಟೋ ತೆಗೆಯುವ ಕೆಲಸವನ್ನು ಮಾಡಿದ. ಇಂಥ ಲೆನಿನ್ ಕೈಗೆ ಕ್ಯಾಮರಾ ಕೊಡಿಸಿದ ನಿತ್ಯಾನಂದ ಮುಂದೊಂದು ದಿನ ಅದೇ ಕ್ಯಾಮರಾವನ್ನೇ ಲೆನಿನ್ ತನ್ನ ಬೆಡ್‌ರೂಮಿನೊಳಕ್ಕೂ ತಿರುಗಿಸುತ್ತಾನೆಂದು ಊಹಿಸಿರಲಿಲ್ಲ.

ಇದರ ಹಿಂದೆ ನಟಿ ರಂಜಿತಾಳ ಲೋಲುಪತೆ ಮಾತ್ರವಲ್ಲ ಅಮೆರಿಕಾದಲ್ಲಿರುವ ಆಶ್ರಮದ ಟ್ರಸ್ಟಿಯೊಬ್ಬನ ಸಿಟ್ಟೂ ಸೇರಿದೆ.

ಈ ಸೆಕ್ಸ್ ವೀಡಿಯೋ ಹೇಗೆ ಮತ್ತು ಯಾಕಾಗಿ ಶೂಟ್ ಮಾಡಲ್ಪಟ್ಟಿತು ಎಂಬುದೂ ಒಂದು ಕತೆ.

ಲೆನಿನ್ ಹಿನ್ನೆಲೆ

ಮೊದಲಿಗೆ ಬೊಜ್ಜು ಕರಗಿಸುವ ಮ್ಯಾಗ್ನೆಟಿಕ್ ಬೆಲ್ಟ್‌ಗಳನ್ನು ಈ ಲೆನಿನ್ ಮಾರುತ್ತಿದ್ದ. ಆಮೇಲೆ ಅದೆಲ್ಲಾ ವಿವಾದವಾಗಿ ಬೋರ್‌ವೆಲ್ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದ. ಮುಂದೆ ಆ ಕೆಲಸ ಬಿಟ್ಟು ಕೊರಿಯರ್ ಸಂಸ್ಥೆ ಸೇರಿದ. ಆಗಲೇ ಚೆನ್ನೈನ ನಿತ್ಯಾನಂದನ ಆಶ್ರಮಕ್ಕೆ ಕೊರಿಯರ್ ಡೆಲಿವರಿ ಕೊಡಲು ಆಗಾಗ್ಗೆ ಹೋಗಿ ಬರತೊಡಗಿದ. ನಿತ್ಯಾನಂದ ಸ್ವಾಮಿಯ ಪ್ರವಚನಗಳನ್ನು ಆಗಾಗ್ಗೆ ಕೇಳುತ್ತಿದ್ದ. ಕೊನೆಗೊಂದು ದಿನ ಕೊರಿಯರ್ ಕೆಲಸ ಬಿಟ್ಟು ಆಶ್ರಮ ಸೇರಿಕೊಂಡು ನಿತ್ಯಾನಂದನ ಕಾರಿಗೆ ಡ್ರೈವರ್ ಆದ. ಆಗ ಲೆನಿನ್ ಹೆಸರನ್ನು ಧರ್ಮಾನಂದ ಎಂದು ನಿತ್ಯಾನಂದ ಬದಲಿಸಿದ. ಈಗ ನೋಡಿದರೆ ಈ ಸ್ವಾಮಿಯ ನಿತ್ಯ ಸೆಕ್ಸಾನಂದವನ್ನು ಬಯಲಿಗೆಳೆದು ಲೆನಿನ್ ನಿಜಕ್ಕೂ ಧರ್ಮ ಉಳಿಸಿ ಧರ್ಮಾನಂದನೇ ಆಗಿದ್ದಾನೆ.

ಏನಾಯಿತೆಂದರೆ ಆಶ್ರಮಕ್ಕೆ ಬರುತ್ತಿದ್ದ ಕೆಲ ಚೆಂದನೆಯ ಮಹಿಳೆಯರನ್ನು ಗುರುತಿಸಿ ಅವರಿಗೆಲ್ಲಾ ಸಪರೇಟಾಗಿ ಯೋಗ ಹಾಗೂ ಧ್ಯಾನ ಹೇಳಿಕೊಡುತ್ತೇನೆಂದು ನಿತ್ಯಾನಂದ ಒಳಗಿನ ರೂಮುಗಳಿಗೆ ಕರೆದೊಯ್ಯುತ್ತಿದ್ದನಂತೆ. ಲೆನಿನ್ ಇದನ್ನು ಗಮನಿಸಿದ್ದ. ಹಾಗೆ ರೂಂ ಹೊಕ್ಕ ಕೆಲ ಮಹಿಳೆಯರು ಕೆಲವೇ ಕ್ಷಣಗಳಲ್ಲಿ ಹೊರಬರುತ್ತಿದ್ದರು. ಅಂತವರ ಮುಖ ಸಿಟ್ಟು ಮುನಿಸಿನಿಂದ ಕೂಡಿರುತ್ತಿತ್ತು. ಇನ್ನೂ ಕೆಲವರು ತಡವಾಗಿ ರೂಮಿನಿಂದ ಹೊರಬರುತ್ತಿದ್ದರು.

ಇದರಿಂದ ಲೆನಿನ್‌ನ ಅನುಮಾನ ಬೆಳೆದಿದೆ. ಅವನೊಮ್ಮೆ ಆಶ್ರಮದ ಮುಖ್ಯಸ್ಥನೊಬ್ಬನ ಬಳಿ ಈ ವಿಚಾರ ಹೇಳಿ ದೂರಿದ್ದಾನೆ. ಈ ವಿಚಾರ ದೂರದ ಅಮೆರಿಕಾದಲ್ಲಿದ್ದ ಆಶ್ರಮದ ಭಾರತೀಯ ಟ್ರಸ್ಟಿ ಒಬ್ಬನ ಕಿವಿ ಮುಟ್ಟಿತು. ಆತನಿಗೂ ನಿತ್ಯಾನಂದನ ಬಗ್ಗೆ ಅನುಮಾನಗಳಿದ್ದವು. ನಿಜ ಏನೆಂದು ಪತ್ತೆ ಮಾಡಲೇಬೇಕೆಂದು ಆ ಅಮೆರಿಕಾ ಟ್ರಸ್ಟಿ 2009ರ ಡಿಸೆಂಬರ್‌ನಲ್ಲಿ ಒಂದು ಅತ್ಯಾಧುನಿಕ ಕ್ಯಾಮರಾ ಕಳುಹಿಸಿಕೊಟ್ಟ. ಆಶ್ರಮದ ಅಧಿಕಾರಿಯೊಬ್ಬ ಲೆನಿನ್ ಜೊತೆ ಸಮಾಲೋಚಿಸಿ ಸಮಯ ಕಾದು ಈ ಕ್ಯಾಮರಾವನ್ನು ನಿತ್ಯಾನಂದನ ಬಿಡದಿ ಆಶ್ರಮದ ಖಾಸಗಿ ರೂಂನ ಒಂದು ಮೂಲೆಯಲ್ಲಿ ಪ್ರತಿಷ್ಠಾಪಿಸಿದರು. ಕ್ಯಾಮರಾಗೆ ಕೆಲಸ ಕೊಡುವ ಗಳಿಗೆ ಬಂದೇ ಬಂತು. ಬಿಕನಾಸಿ ನಟಿ ರಂಜಿತಾ ಅಷ್ಟರಲ್ಲಿ ಆಶ್ರಮವಾಸಿಯಾಗಿ ನಿತ್ಯಾನಂದ ಸ್ವಾಮಿಯಲ್ಲಿ ಐಕ್ಯಳಾಗುವ ಪರಿಪಾಠ ಬೆಳೆಸಿಕೊಂಡಿದ್ದಳು. ಅವಳಿಗಾಗಿ ಬಿಡದಿ ಆಶ್ರಮದೊಳಗೆ ಒಂದು ಸಪರೇಟಾದ ಪುಟ್ಟ ಬಂಗಲೆಯನ್ನೇ ನೀಡಲಾಗಿತ್ತು. ಈ ರಂಜಿತಾ ಯಾವಾಗ ಎಷ್ಟು ಹೊತ್ತಿಗೆ ಸ್ವಾಮಿಸೇವೆಗೆ ಹೋಗುತ್ತಾಳೆಂದು ಗೊತ್ತಿದ್ದ ಲೆನಿನ್ ಡಿಸೆಂಬರ್ 24ರ ರಾತ್ರಿ ನಿತ್ಯಾನಂದನಿಗೆ ಮುಹೂರ್ತವಿಟ್ಟ. ಸ್ವಾಮಿ ಹಾಗೂ ರಂಜಿತಾ ರೂಂ ಪ್ರವೇಶಿಸುವ ಮುನ್ನವೇ ಕ್ಯಾಮರಾ ಆನ್ ಆಗಿತ್ತು. ಅವತ್ತು ಲೆನಿನ್ ಪೂರಾ ಒಂದೂವರೆ ಗಂಟೆ ಕಾಲ ನಿತ್ಯಾನಂದ ರಂಜಿತಾ ಜೊತೆ ನಡೆಸಿದ ಕಾಮಚೇಷ್ಟೆಯನ್ನು ದಾಖಲಾಗುವಂತೆ ನೋಡಿಕೊಂಡ. ಆ ವೀಡಿಯೋದಲ್ಲಿನ ರಂಜಿತಾಳ ವರ್ತನೆ ಗಮನಿಸಿದರೆ ಆಕೆಗೂ ಅಡಗಿದ್ದ ಕ್ಯಾಮರಾ ಬಗ್ಗೆ ಗೊತ್ತಿತ್ತು ಅನಿಸುವಂತಿದೆ. ಈಗ ಅವೆಲ್ಲ ಮುಖ್ಯವಲ್ಲ. ನಂತರ ಏನಾಯಿತೆಂಬುದೇ ಕುತೂಹಲಕಾರಿಯಾಗಿದೆ.

ಲೆನಿನ್ ಕಿಡ್‌ನ್ಯಾಪ್

2009ರ ಡಿಸೆಂಬರ್‌ನಲ್ಲಿ ವೀಡಿಯೋ ರೆಕಾರ್ಡ್ ಆಯಿತಾದರೂ 2010ರ ಮಾರ್ಚ್‌ವರೆಗೂ ಈ ವಿಷಯವೇ ಹೊರಬರಲಿಲ್ಲ ಎಂಬ ಬಗ್ಗೆ ಅನೇಕ ಊಹಾಪೋಹಗಳೇಳುತ್ತಿವೆ. ಈ ಎರಡೂವರೆ ತಿಂಗಳಲ್ಲಿ ನಿತ್ಯಾನಂದನಾಗಲಿ ಲೆನಿನ್ ಆಗಲಿ ಸುಮ್ಮನಿರಲಿಲ್ಲ. ಈ ವೀಡಿಯೋ ಕೈಗೆ ಸಿಕ್ಕ ನಂತರ ಅಮೆರಿಕಾದಲ್ಲಿದ್ದ ಟ್ರಸ್ಟಿ ನಿತ್ಯಾನಂದನನ್ನು ಸಂಪರ್ಕಿಸಿ ವೀಡಿಯೋ ಬಗ್ಗೆ ತಿಳಿಸಿ ಆಶ್ರಮ ಬಿಟ್ಟು ಹೋಗುವಂತೆ ಹೇಳಿದ್ದಾನೆ. ಆದರೆ ನಿತ್ಯಾನಂದ ಅದನ್ನು ನಂಬಲಿಲ್ಲ ಮತ್ತು ಕೇರ್ ಮಾಡಲಿಲ್ಲ. ಆದರೆ ಅವನಿಗೆ ಡ್ರೈವರ್ ಕಂ ಫೋಟೋಗ್ರಾಫರ್ ಲೆನಿನ್ ಬಗ್ಗೆ ಅನುಮಾನ ಬಂತು.

ತನಿಖೆ ಶುರುವಾಯಿತು. ಲೆನಿನ್ ಕೊಂಚ ಗಾಬರಿ ಬಿದ್ದ. ಆಗ 2010ರ ಫೆಬ್ರವರಿಯಲ್ಲೊಂದು ದಿನ ಸೇಲಂನಲ್ಲಿ ಪ್ರವಚನ ಕೊಡಲು ಆಶ್ರಮದಿಂದ ಹೊರಟ ನಿತ್ಯಾನಂದ ತನ್ನ ಜೊತೆಯಲ್ಲಿ ಲೆನಿನ್‌ನನ್ನೂ ಕರೆದೊಯ್ದ. ವೀಡಿಯೋ ಬಗ್ಗೆ ಕೇಳಿದ. ಅದಕ್ಕೆ ಲೆನಿನ್ ಕೊಟ್ಟ ಉತ್ತರ ಸ್ವಾಮಿಯ ಆತಂಕ ಹೆಚ್ಚಿಸಿತು. ಅಷ್ಟರಲ್ಲಿ ಸೇಲಂ ಬಂತಾದ್ದರಿಂದ ಲೆನಿನ್‌ನನ್ನು ಕಾರಿನೊಳಗೆಯೇ ಬಂಧಿಯಾಗಿ ಕೂರಿಸಿಕೊಂಡಿರಲು ಬೇರೆಯವರಿಗೆ ಹೇಳಿ ನಿತ್ಯಾನಂದ ಧರ್ಮಬೋಧನೆಗೆಂದು ಇಳಿದುಹೋದ. ಆದರೆ ವಾಪಸ್



ನಟಿ ರಂಜಿತಾ

ಸೆಕ್ಸ್ ಸ್ವಾಮಿ ರಕ್ಷಣೆಗೆ ಬಿಜೆಪಿ ಸರ್ಕಾರ

ಕರ್ನಾಟಕ ಬಿಜೆಪಿ ಸರ್ಕಾರ ನಾಚಿಕೆ, ಮಾನ, ಮರ್ಯಾದೆಗಳನ್ನೆಲ್ಲಾ ಬಿಟ್ಟು ನಿಂತಿದೆ. ಬಿಡದಿಯ ಧ್ಯಾನಪೀಠದ ಪರಮಹಂಸ ನಿತ್ಯಾನಂದ ಸ್ವಾಮಿಯ ಸೆಕ್ಸ್ ಹಗರಣ ಬಟಾಬಯಲಾಗಿ ಹತ್ತು ದಿನಗಳಾಗಿದೆ. ಕೇವಲ ಕರ್ನಾಟಕ, ತಮಿಳುನಾಡು ಮಾತ್ರವಲ್ಲದೇ ಇಡೀ ಇಂಡಿಯಾದ ಉದ್ದಗಲಕ್ಕೂ ಜನ ನಿತ್ಯಾನಂದನ ವಿಕೃತ ವರ್ತನೆಯನ್ನು ನೋಡಿ ಶಾಕ್ ಆಗಿದ್ದಾರೆ. ಜಗತ್ತಿನ ಅನೇಕ ದೇಶಗಳಲ್ಲಿದ್ದ ನಿತ್ಯಾನಂದ ಸ್ವಾಮಿಯ ಆಶ್ರಮದ ಶಾಖೆಗಳಿಗೆ ಬೀಗ ಬಿದ್ದಿದೆ. ಬಿಡದಿ ಹಾಗೂ ತಮಿಳುನಾಡಿನ ಅನೇಕ ಕಡೆ ರೊಚ್ಚಿಗೆದ್ದ ಜನ ಆಶ್ರಮವನ್ನೂ ಚಿಂದಿಯೆಬ್ಬಿಸಿದ್ದಾರೆ. ತಮಿಳುನಾಡಿನಲ್ಲಿ ಚೆನ್ನೈ ಪೊಲೀಸರು ನಿತ್ಯಾನಂದನ ವಿರುದ್ಧ ಅರ್ಧ ಡಜನ್ ಸೆಕ್ಷನ್‌ಗಳನ್ನು ಹಾಕಿ ಕಂಪ್ಲೇಂಟ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಸೆಕ್ಷನ್ 295(ಎ) ಜನರ ಧಾರ್ಮಿಕ ನಂಬಿಕೆ ಭಾವನೆಗಳಿಗೆ ಉದ್ದೇಶಪೂರ್ವಕವಾಗಿ ಧಕ್ಕೆ ಮಾಡುವುದು, ಸೆಕ್ಷನ್ 376 (ಅತ್ಯಾಚಾರ), 377 ಅಸಹಜ ಲೈಂಗಿಕ ಪ್ರವೃತ್ತಿ 501 (1) ಕ್ರಿಮಿನಲ್ ದುರುದ್ದೇಶ ಹಾಗೂ 120 (ಬಿ) ಕ್ರಿಮಿನಲ್ ಪಿತೂರಿ... ಇವೇ ಆ ಅಪರಾಧಗಳಾಗಿವೆ. ಹೀಗೆ ದೂರು ದಾಖಲಿಸಿಕೊಳ್ಳಲು ನಿತ್ಯಾನಂದ ಸ್ವಾಮಿಯ ಡ್ರೈವರ್ ಲೆನಿನ ಅಲಿಯಾಸ್ ಧರ್ಮಾನಂದನ ಕಂಪ್ಲೇಂಟೇ ಕಾರಣವೆಂಬುದು ನಿಜ. ಕರ್ನಾಟಕ ಪೊಲೀಸರಿಗೆ ಇದುವರೆಗೂ ಯಾರೂ ಲಿಖಿತ ದೂರು ಕೊಟ್ಟಿಲ್ಲ ಎಂಬುದು ನಿಜವಾಗಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಕಾನೂನುಕ್ರಮ ತೆಗೆದುಕೊಳ್ಳಬೇಕೆಂದಿದ್ದರೆ ಅನೇಕ ಕಾರಣಗಳು ಇವೆ. ಆದರೆ ಹೇಳಿಕೇಳಿ ನಿತ್ಯಾನಂದ ಒಬ್ಬ ಹಿಂದೂ ಧರ್ಮ ಪ್ರಚಾರಕ, ಧರ್ಮಗುರು. ಅಂತಹವನ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳಬೇಕೆಂದರೆ ಅದು ಅಷ್ಟು ಸಲೀಸಾ? ಅದಕ್ಕೆ ಆರೆಸ್ಸೆಸ್ ಒಪ್ಪುತ್ತದಾ? ಈಗಾಗಲೇ ಪೇಜಾವರ ಸ್ವಾಮಿಯಿಂದ ಹಿಡಿದು ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕನ ತನಕ ನಿತ್ಯಾನಂದನ ಪರವಾಗಿ ಹೇಳಿಕೆಗಳು ಬರುತ್ತಿವೆ.





ಇಷ್ಟಕ್ಕೂ ನಿತ್ಯಾನಂದನ ವಿರುದ್ಧ ಯಡಿಯೂರಪ್ಪನವರ ಸರ್ಕಾರ ಸ್ವಯಂಪ್ರೇರಿತ ದೂರು ದಾಖಲಿಸಬಹುದಿತ್ತು. ಜನರ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದು, ಬಿಡದಿಯ ಆಶ್ರಮದೊಳಗೆ ಸಲಿಂಗಕಾಮದ ಚಟುವಟಿಕೆಗಳು, ಹಲವರ ಅನುಮಾನಾಸ್ಪದ ಸಾವುಗಳ ಕುರಿತು ತನಿಖೆಗೆ ಆದೇಶಿಸಬಹುದಿತ್ತು. ಆದರೆ ಊಹುಂ....

ಜನ ಎಷ್ಟೇ ಕ್ಯಾಕರಿಸಿ ಉಗಿಯುತ್ತಿದ್ದರೂ ಬಿಜೆಪಿ ಸರ್ಕಾರ ಕೇರ್ ಮಾಡುತ್ತಿಲ್ಲ. ಇದಕ್ಕೂ ಮೀರಿದ ಕಾನೂನು ಉಲ್ಲಂಘನೆಯ ಕೆಲ ಘಟನೆಗಳೂ ಇವೆ.

ಭೂಪರಿವರ್ತನೆಯಾಗಿಲ್ಲ

ಬಿಡದಿಯ ಕಲ್ಲುಗೋಪನಹಳ್ಳಿಯ ನಿತ್ಯಾನಂದನ ಆಶ್ರಮವಿರುವ ಜಾಗ ಕಾನೂನಿನ ಪ್ರಕಾರ ಭೂಪರಿವರ್ತನೆಯಾಗಿಲ್ಲ. ಈ ಸ್ವಾಮಿಗೆ ಅಲ್ಲಿ ಸರ್ವೆ ನಂ.21/1ರಲ್ಲಿ ಒಟ್ಟು 22 ಎಕರೆ 35 ಗುಂಟೆ ಜಮೀನಿದೆ. ಆದರೆ ಇವನು ನೆಪಮಾತ್ರಕ್ಕೆ ಕೇವಲ ಒಂದೇ ಒಂದು ಎಕರೆಯನ್ನು ಭೂಪರಿವರ್ತನೆ ಮಾಡಿಸಿಕೊಂಡಿದ್ದಾನೆ. ಇನ್ನುಳಿದ 21.35 ಎಕರೆ ಕೃಷಿ ಜಮೀನಿನಲ್ಲಿ ಕಾನೂನುಬಾಹಿರವಾಗಿ ಬೃಹತ್ ಕಟ್ಟಡಗಳನ್ನು ಕಟ್ಟಿಸಿದ್ದಾನೆ. ಅದೇರೀತಿ ಅಕ್ರಮ ವಿದ್ಯುತ್ ಹಾಗೂ ನೀರಿನ ಸಂಪರ್ಕ ಪಡೆದಿದ್ದಾನೆ. ಈಗ ರಾಮನಗರ ತಹಶೀಲ್ದಾರ್ ನಟೇಶ್ ಎಚ್ಚೆತ್ತುಕೊಂಡು ಒಂದು ನೋಟೀಸ್ ಕೊಟ್ಟಿದ್ದಾರಾದರೂ ಅದು ನೆಪ ಮಾತ್ರ. ಈ ನಡುವೆ ಶ್ರೀರಾಮಸೇನೆಯೆಂಬ ಹಿಂದೂ ಸಂಘಟನೆ ನಿತ್ಯಾನಂದ ಉತ್ತಮನೆಂತಲೂ ಅವನ ವಿರುದ್ಧ ಅಪಪ್ರಚಾರ ನಡೆದಿದೆಯೆಂತಲೂ ಚೀರಿಕೊಳ್ಳುತ್ತಿದೆ. ಅದಿರಲಿ, ಅತ್ತ ಚೆನ್ನೈ ಪೊಲೀಸರು ನಿತ್ಯಾನಂದನ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದಾಗಿರುವಾಗ ಕರ್ನಾಟಕ ಬಿಜೆಪಿ ಸರ್ಕಾರ ಅದೇ ನೆಲೆಯಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲವೇಕೆ?

ಹಿಂದೂ ಧರ್ಮ ಕಾಪಾಡುವುದೆಂದರೆ ಹೀಗೇನಾ?

ರಂಜಿತಾಳ ರಂಜಕ ಮಾತು

[illegible]

...ಡಲು ದೊಡ್ಡ ಗಾತ್ರದ ದೇಹವಿದೆಯಾ... [illegible] ...ಮಿ ಹಿಂದೂ ಧರ್ಮ ರಕ್ಷ... [illegible] ...ನಿತ್ಯಾನಂದ ಸ್ವಾಮಿಗೆ ಮಾತು... [illegible]



ನಿತ್ಯಾನಂದನ ಆರಾಧನೆಯಲ್ಲಿ ಪೆದ್ದ ಹೆಂಗಸರು.........

...ರಲ್ಲಿ ಬಂಧಿ ಹಕ್ಕಿ ಹಾರಿಹೋಗಿತ್ತು. ಲೆನಿನ್ ಮೂತ್ರ ವಿಸರ್ಜನೆಯ ... ತಪ್ಪಿಸಿಕೊಂಡಿದ್ದ. ಅವನಿಗೆ ಸ್ವಾಮಿ ತನ್ನ ಹತ್ಯೆ ಮಾಡಿಸಿಬಿಡುವ ...ರುವಾಗಿತ್ತು. ಸೇಲಂನ ರೌಡಿ ರಾಜಕಾರಣಿ ಕೃಷಿ ಸಚಿವ ವೀರಪಾಂಡ್ಯ ...ಂ ಹಾಗೂ ಆತನ ತಮ್ಮನ ಮಗ ಸುರೇಶನೆಂಬ ...ನಿನ್‌ನನ್ನೂ ಕೊಲ್ಲುವ ಪಿತೂರಿ ಮಾಡಿದ್ದರು. ... ಲೆನಿನ್ ಹದಿನೈದು ದಿನ ತಲೆ ...ಸಿಕೊಂಡಿದ್ದವನು ಕೊನೆಗೆ ಸೀದಾ ಸನ್‌ಟಿವಿ ...ರ್ಜನವರೊಂದಿಗೆ ಮಾತನಾಡಿ ವೀಡಿಯೋ ...ನ್ನು ಅವರ ಕೈಗೆ ಒಪ್ಪಿಸಿಬಿಟ್ಟ. ಚೆನ್ನೈ ...ರಿಗೆ, ನಕ್ಕೀರನ್ ಗೋಪಾಲ್‌ಗೆ ಹಾಗೂ ... ಪೊಲೀಸ್‌ನ ಒಂದಿಬ್ಬರು ಉನ್ನತಾಧಿಕಾರಿ ...ಪಿಡಿ ತಲುಪಿಸಿ ತಲೆಮರೆಸಿಕೊಂಡು ಬಿಟ್ಟ.

...ದೆ ಏನಾಯಿತೆಂಬುದು ನಿಮಗೂ ಗೊತ್ತಿದೆ. ...ನ್ ಚೆನ್ನೈ ಪೊಲೀಸರಿಗೆ ನಿತ್ಯಾನಂದನ ವಿರುದ್ಧ ... ಕೊಟ್ಟಿದ್ದಾನೆ. ಚೆನ್ನೈ ಪೊಲೀಸರು ತನಿಖೆ ...ಮಾಡಿದ್ದಾರೆ. ನಿತ್ಯಾನಂದ ತಲೆ ಮರೆಸಿಕೊಂಡು ...ಹೋಗಿದ್ದಾನೆ. ಅವನ ನಿತ್ಯದ ಆನಂದ ಏನೇನಿತ್ತು ...! ಶುರುವಾಯಿತೆಂಬ ಬಗ್ಗೆ ಲೆನಿನ್ ಚೆನ್ನೈ ...ರಿಗೆ ಹೆಚ್ಚಿನ ಮಾಹಿತಿ ಕೊಟ್ಟಿದ್ದಾನೆ.

...ವಾಸಿ ಭಾರತೀಯ ಸುಂದರಿ ಗೋಪಿಕಾ ...ರಲ್ಲಿ ಒಬ್ಬಳು.

...ವಳು ಮಾ ನಿತ್ಯ ಗೋಪಿಕಾ

...ವರ ಸುಮಾರಿಗೆ ಬಿಡದಿಯ ಆಶ್ರಮಕ್ಕೆ ... ನಿತ್ಯಾನಂದನ ಜೊತೆ ಸೇರಿದ ಮೊದಲ ... ಗೋಪಿಕಾ. ಅನಿವಾಸಿ ಭಾರತೀಯಳಾಗಿದ್ದ ...ಇಪ್ಪತ್ತೆರಡರ ವಯಸ್ಸಿನ ಗೋಪಿಕಾ ಕಾಯಂ ...ಮವಾಸಿಯಾಗಿಬಿಟ್ಟಳು. ನಿತ್ಯಾನಂದ ಅವಳ ... ಮಾ ನಿತ್ಯ ಗೋಪಿಕಾ ಎಂದು ಬದಲಿಸಿದ್ದ. ...ನ ದಾರಿ ತಪ್ಪಿಸಿದ ಮೊದಲ ಸ್ತ್ರೀರತ್ನ ಇವಳು. ...ಆಶ್ರಮದಲ್ಲಿ ಇವಳು ಎಷ್ಟು ಪವರ್‌ಫುಲ್ ಆದಳೆಂದರೆ ಅವಳ ಅಪ್ಪಣೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವಂತಿರಲಿಲ್ಲ. ಇವಳೊಂದಿಗೆ ಸ್ವಾಮಿ ನಿತ್ಯ ಸದಾನಂದನೆಂಬುವನೊಬ್ಬ ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದು ನಿತ್ಯಾನಂದನ ಸ್ವಂತ ತಮ್ಮ ಸ್ವಾಮಿ ನಿತ್ಯೇಶ್ವರಾನಂದನಿಗೆ ದುಡ್ಡೆಣಿಸುವ ಕೆಲಸ ನೀಡಲಾಗಿತ್ತು. ಇನ್ನಿಬ್ಬರು ಆತ್ಮಾನಂದ ಹಾಗೂ ಜ್ಞಾನಾನಂದರೆಂಬ ಕಾವಿಗಳಿಗೆ ಸ್ವಾಮಿಯ ಅಂಗರಕ್ಷಕ ಕೆಲಸವಿತ್ತು.





ಮುಗ್ಧರಿಂದ ಭಜನೆ...



ನಿತ್ಯಾನಂದನಿಗೆ ನೋಟಿನ ಹಾರ...

ಮಾ ನಿತ್ಯ ಗೋಪಿಕಾಳ ಮೂಲಕ ಹೊಸ ದಾರಿ ಹಿಡಿದ ನಿತ್ಯಾನಂದ ಸ್ವಾಮಿಯ ಸೆಕ್ಸ್ ಪುರಾಣ ಹೇಳಿದರೆ ಅದಕ್ಕೆ ಕೊನೆಮೊದಲೇ ಇಲ್ಲ. ಗೋಪಿಕಾಳ ನಂತರ ಯುವರಾಣಿ, ಆಮೇಲೆ ರಾಗಸುಧಾ... ಕೊನೆಗೆ ರಂಜಿತಾ!

ಈ ಸರಣಿಯ ನಡುವೆ ಬಂದುಹೋದ ಅಂಗನೆಯರೆಷ್ಟೋ ಹೇಳುವವರ್‍ಯಾರು? ಇದಿಷ್ಟೇ ಅಲ್ಲ ಈ ನಿತ್ಯಾನಂದ ಸಲಿಂಗಕಾಮಿ ಎಂತಲೂ ಅನುಮಾನಗಳಿವೆ. ಆಶ್ರಮವಾಸಿಗಳಲ್ಲಿ ಕೆಲವು ಕ್ಯೂಟ್ ಗಂಡಸರನ್ನೂ, ಚಿಕ್ಕ ಹುಡುಗರನ್ನೂ ನಿತ್ಯಾನಂದ ಬಳಸಿಕೊಳ್ಳಲು ಯತ್ನಿಸಿದ್ದ ಬಗ್ಗೆ ಪುಕಾರುಗಳಿವೆ.

ಲೆನಿನ್ ರೊಚ್ಚಿಗೆದ್ದು ಸ್ವಾಮಿಯ ಮುಖವಾಡ ಕಿತ್ತು ಹಾಕಿದನೋ, ವೀಡಿಯೋ ತೆಗೆದು ಬ್ಲ್ಯಾಕ್‌ಮೇಲ್ ಮಾಡಲು ಯತ್ನಿಸಿದ್ದನೋ ಅಥವಾ ನಾಲ್ಕಾರು ಜನರ ಸಹಾಯ ಪಡೆದು ನಿತ್ಯಾನಂದನ ಸೆಕ್ಸ್‌ಲೀಲೆಗಳನ್ನು ರೆಕಾರ್ಡ್ ಮಾಡಿದನೋ? ಅದಿಲ್ಲಿ ಮುಖ್ಯವಾಗಕೂಡದು. ಸಂಘಪರಿವಾರಿಗಳು ನಿತ್ಯಾನಂದನ ಹಲ್ಕಟ್ ಕೆಲಸದ ಬಗ್ಗೆ ಖಂಡಿಸಿ ಮಾತಾಡುತ್ತಿಲ್ಲ. ಇವನಂಥ ನೀಚರಿಂದ ಲಕ್ಷಾಂತರ ಜನರಿಗೆ ಹಿಂದೂ ಧರ್ಮದ ಬಗ್ಗೆ ಇರುವ ಅಷ್ಟೋ ಇಷ್ಟೋ ನಂಬಿಕೆ ಗೌರವ ಕುಸಿದುಬೀಳುವ ಬಗ್ಗೆಯೂ ಆತಂಕ ಪಟ್ಟುಕೊಳ್ಳುತ್ತಿಲ್ಲ. ಅದನ್ನೆಲ್ಲಾ ಬಿಟ್ಟು ಇದೊಂದು ಪಿತೂರಿ, ಇದೊಂದು ನಕಲಿ ವೀಡಿಯೋ ಎಂದು ಚೀರಿಕೊಂಡರೆ ಜನ ನಂಬುತ್ತಾರಾ?

...ಮಿಯ ಸೆಕ್ಸ್ ಬುಕ್ ಮೋಹ

...ಈ ನಿತ್ಯಾನಂದ ಸ್ವಾಮಿಯು ಬದಲಿಸುವ ಏಕ್‌ದಂ ಕಪ್ಪು-ಬಿಳುಪಿನ ಮುಖವಾಡ ...ವಾಗಿದೆ. ಇವನು ಹಿಂದೂ ಧರ್ಮ, ಆಧ್ಯಾತ್ಮ, ಧ್ಯಾನ ಮೋಕ್ಷಗಳ ಬಗ್ಗೆ ...ಗಟ್ಟಲೆ ಪುಸ್ತಕ ಬರೆದಿದ್ದಾನೆ. ಅವುಗಳ ಟೈಟಲ್‌ಗಳೂ ಅಷ್ಟೇ ...ಹಲಕಾರಿಯಾಗಿದೆ.

- You are no sinner
- Who asked you to believe
- So you want to know the truth
- Simply Nirvana
- Follow me in



ಮೋಕ್ಷಕ್ಕಾಗಿ ಭಕ್ತರ ಡ್ರಿಲ್....

...ತರಹದ ಪುಸ್ತಕಗಳವು. ಮತ್ತೊಂದೆಡೆ ಈ ಲಫಂಗ ತನ್ನ ಪ್ರೇಯಸಿಯರನ್ನು ... ಮೇಲೆ ಕೂರಿಸಿಕೊಂಡು ಸೆಕ್ಸ್ ಬುಕ್ ಓದಿಸಿ ಕೇಳಿ ಆನಂದಿಸುತ್ತಿದ್ದನಂತೆ. ಅವನ ಬೆಡ್‌ರೂಂನ ಮಂಚದ ಕೆಳಭಾಗದಲ್ಲಿ ಸಪರೇಟಾದ ಕ್ಯಾಬಿನ್ ...ಸಿಕೊಂಡು ಅಲ್ಲಿ ರಾಶಿ ರಾಶಿ ಸೆಕ್ಸ್ ಬುಕ್ಸ್ ಇಟ್ಟುಕೊಂಡಿರುತ್ತಿದ್ದನಂತೆ. ಈ ಲಲನಾಮಣಿಯರ ಬಾಯಿಂದ ಸೆಕ್ಸ್ ಕತೆ ಕೇಳುವುದೇ ಅವನಿಗೆ ...ದವಾಗಿತ್ತು. ಮೊದಮೊದಲಿಗೆ ತಾನು ಧ್ಯಾನ ಯೋಗ ಹೇಳಿ ಕೊಡುತ್ತೇನೆಂದು ಬಂದವನು ಇತ್ತೀಚೆಗೆ 'ನಾನೇ ಕಡವಳ್ (ನಾನೇ ದೇವರು). ...ದ್ದ. ತನ್ನ ಸುತ್ತ ನಾಲ್ಕಾರು ಪೆದ್ದು ಸುಂದರಿಯರನ್ನು ಕೂರಿಸಿಕೊಂಡು 'ನಾನೇ ಕೃಷ್ಣ ನೀವೆಲ್ಲಾ ಗೋಪಿಕೆಯರು' ಎನ್ನುತ್ತಿದ್ದ. ತನ್ನನ್ನು ಸೇರಿದರೆ ...ವ ದೈವಿಕ ಅಂಶ ನಿಮ್ಮಲ್ಲಿ ಪ್ರವಹಿಸುತ್ತದೆ ಎಂತಲೂ ನಂಬಿಸಿದ್ದನಂತೆ ಈ ರ್‍ಯಾಸ್ಕಲ್. ದಿನಬೆಳಗಾದರೆ ಮೋಕ್ಷ, ವೈರಾಗ್ಯದ ಬಗ್ಗೆ ...ಸುತ್ತಿದ್ದನಾದರೂ ಕೂರುತ್ತಿದ್ದುದು ಮಾತ್ರ ಬಂಗಾರ ಲೇಪಿತ ಪೀಠದಲ್ಲಿ, ತಲಾ 10 ಲಕ್ಷ ಬೆಲೆ ಬಾಳುವ ಅಂತಹ ಹತ್ತು ಚಿನ್ನದ ಪೀಠಗಳಿವೆ ...ಅಂ!



ಸೆಕ್ಸಾನಂದನೊಂದಿಗೆ ಮೋದಿ ನಂಟು

ಸ್ವಾಮಿ ನಿತ್ಯಾನಂದ ಅಲ್ಲಲ್ಲ ಸೆಕ್ಸಾನಂದನಿಗೂ, ತನ್ನ ಕೈಹಿಡಿದ ಹೆಂಡತಿಯನ್ನು ತೊರೆದು ಈಗ ಅಖಂಡ ಬ್ರಹ್ಮಚಾರಿಯಂತೆ ಜೀವಿಸುತ್ತಿರುವ ಗುಜರಾತಿನ ನರಹಂತಕ ಮುಖ್ಯಮಂತ್ರಿ ನರೇಂದ್ರ ಮೋದಿಗೂ ಎತ್ತಿಂದೆತ್ತಣ ಸಂಬಂಧ?

ಆದರೆ ಸಂಬಂಧ ಇದೆ ಅಂದರೆ ನಿಮಗೆ ಅಚ್ಚರಿಯಾಗಬಹುದು. ಕಾವಿ ಅಂದರೆ ಕಾಮ, ಧರ್ಮ ಅಂದರೆ ಅಧರ್ಮ ಎಂದೇ ನಂಬಿರುವ ಮೋದಿ ತರಹದವರಿಗೆ ಸೆಕ್ಸಾನಂದನಂತಹ ಕ್ರಿಮಿಗಳೊಂದಿಗಲ್ಲದೆ ಬೇರೆ ಇನ್ನಾರೊಂದಿಗೆ ನಂಟಿರಲು ಸಾಧ್ಯ?!

ಇದಕ್ಕೆ ಸಾಕ್ಷಿ ಕಳೆದ ಸೆಪ್ಟೆಂಬರ್ 10 ರಂದು ವಡೋದರಾದಲ್ಲಿ ನಡೆದ ಎರಡು ಘಟನೆಗಳು.

ಈಗ ಮಹಿಳೆಯರೊಂದಿಗೆ ಕಾಮಚೇಷ್ಟೆ ಮಾತ್ರವಲ್ಲ, ಸುಂದರ ಯುವಕರೊಂದಿಗೂ, ಬಾಲಕ-ಬಾಲಕಿಯರೊಂದಿಗೂ ತನ್ನ ಕಾಮತೃಷೆಯನ್ನು ತೀರಿಸಿಕೊಂಡಿದ್ದಾನೆಂಬ ಆರೋಪ ಎದುರಿಸುತ್ತಿರುವ ಸೆಕ್ಸಾನಂದ 2009 ರ ಸೆಪ್ಟೆಂಬರ್‌ನಲ್ಲಿ ಗುಜರಾತಿಗೆ ಭೇಟಿ ನೀಡಿದ್ದಲ್ಲದೆ, ಅಲ್ಲಿ ಮೋದಿ ಚಾಲನೆಗೆ ತಂದಿದ್ದ 'ಕನ್ಯಾ ಕಲ್ಯಾಣ' ಎಂಬ ಯೋಜನೆಗೂ ಈ ಕಾವಿ-ಕಾಮಿ 2.5 ಲಕ್ಷ ರೂಪಾಯಿಗಳನ್ನು ದಾನ ಮಾಡಿದ್ದ.



ಕೈ ಮುಗಿಯುತ್ತಿರುವ ಮೋದಿ

ಆ ಸಂದರ್ಭದಲ್ಲಿ ಈ ಸೆಕ್ಸಾನಂದನ ಬಗ್ಗೆ ಮೋದಿ ಎಷ್ಟು ಮೋಡಿಗೊಂಡಿದ್ದನೆಂದರೆ "ಸ್ವಾಮಿ ನಿತ್ಯಾನಂದ ಅವರು ಆದಿ ಶಂಕ್ರಾಚಾರ್ಯರ ಪರಂಪರೆಗೆ ಸೇರಿದವರು" ಎಂದೂ "ಅದ್ವೈತ ಸಿದ್ಧಾಂತದ ಪಾರಿಪಾಲಕ" ಎಂದೂ ಮೋದಿ ಈತನನ್ನು ಕೊಂಡಾಡಿದ್ದರು.

ಅಷ್ಟೇ ಅಲ್ಲ, ಈ ಕಳ್ಳಸ್ವಾಮಿ ನಡೆಸಿದ 'ಸತ್ಸಂಗ'ದಲ್ಲೂ ಭಾಗವಹಿಸಿದ ಮೋದಿ ಸೆಕ್ಸಾನಂದ ಬರೆದಿರುವ 'ಜೀವನ ಮುಕ್ತಿ' ಎಂಬ ಪುಸ್ತಕವನ್ನೂ ಬಿಡುಗಡೆ ಮಾಡಿದ್ದ.

ಈಗ ಸೆಕ್ಸಾನಂದನ ಕಾಮಕ್ರೀಡೆ ದೃಶ್ಯಗಳು ಟಿವಿ ಚಾನೆಲ್‌ಗಳಲ್ಲಿ ಪ್ರಸಾರಗೊಂಡಾನಂತರ ಗುಜರಾತಿನ ಕಾಂಗ್ರೆಸ್ ನಾಯಕ ಅರ್ಜುನ್ ಮೋಧ್‌ವಾಲಾ ಅವರು "ಇಂತಹ ಸ್ವಾಮಿಯನ್ನು ಭೇಟಿ ಮಾಡಿದ, ಅಟ್ಟಕ್ಕೇರಿಸಿ ಹೊಗಳಿದ, ಆತನ ಪುಸ್ತಕವನ್ನು ಬಿಡುಗಡೆ ಮಾಡಿದ, ಆತನಿಂದ ಹಣ ಸ್ವೀಕರಿಸಿದ ಮೋದಿ ಏನು ಹೇಳುತ್ತಾರೆ? ನಿತ್ಯಾನಂದನ 'ಸತ್ಸಂಗ'ದಲ್ಲಿ ಮೋದಿ ಭಾಗವಹಿಸಿದ್ದೇಕೆ? ಅದಕ್ಕೆಂದು ಸರ್ಕಾರಿ ವಿಮಾನದಲ್ಲಿ ಪ್ರಯಾಣಿಸಿದ್ದೇಕೆ?" ಎಂದೆಲ್ಲ ಪ್ರಶ್ನಿಸುತ್ತಿದ್ದಾರೆ.

ಅಷ್ಟೇ ಅಲ್ಲದೆ ಅಂದು ಈ ಕಾವಿಕಾಮಿಯ ಮುಂದೆ ಮೋದಿ ನಡುಬಗ್ಗಿಸಿ ಸಲಾಮು ಹೊಡೆದದ್ದಲ್ಲದೆ ತನ್ನ ರಾಜ್ಯಕ್ಕೆ ಬಹಳಷ್ಟು ಖ್ಯಾತರು ಭೇಟಿ ನೀಡಿದ್ದರೂ ಇಂತಹ 'ದೈವ ಪುರುಷ'ನೊಂದಿಗೆ ಒಂದೇ ವೇದಿಕೆಯಲ್ಲಿರುವುದರಿಂದ ತಾನು ಧನ್ಯನಾದೆನೆಂದೂ, ರಾಜ್ಯಕ್ಕೆ ಹಣ ನೀಡಿದ ಪ್ರಥಮ ಸ್ವಾಮಿ ಈತನೆಂದೂ ಘೋಷಿಸಿದ್ದು ಸರಿಯೇ? ಎಂದೂ ಮೋಧ್‌ವಾಲಾ ಟೀಕಿಸುತ್ತಿದ್ದಾರೆ.

ಇನ್ನೂ ಸೋಜಿಗದ ಸಂಗತಿ ಯಾವುದೆಂದರೆ ಈ ಹಿಂದೆ ನರೇಂದ್ರ ಮೋದಿ ಸಂತ ಅಸರಾಮ್ ಬಾಪು ಎಂಬ ಮತ್ತೊರ್ವ ಕಿಡಿಗೇಡಿ ಸ್ವಾಮಿಯ ಹಿಂಬಾಲಕನಾಗಿದ್ದ. ಆದರೆ ಇತ್ತೀಚೆಗೆ ಈ ಬಾಪು ಎಂಬ ಖದೀಮನ ಅಹಮದಾಬಾದ್ ಗುರುಕುಲದಲ್ಲಿ ಇಬ್ಬರು ಸಂಶಯಾಸ್ಪದವಾಗಿ ಸಾವಿಗೀಡಾಗಿದ್ದು ಈಗ ಬಾಪು ಎಂಬಾತನ ಸುತ್ತಲೂ ಅಲ್ಲಿ ವಾಗ್ವಾದಗಳು ನಡೆಯುತ್ತಿವೆ.

ಇದೆಲ್ಲದರ ಹಿನ್ನೆಲೆಯಲ್ಲಿ "ಈ ಇಬ್ಬರು ಕಳ್ಳ ಸ್ವಾಮಿಗಳಿಂದ ಮೋದಿ ಕಲಿತ ಪಾಠಗಳೇನು ಪಡೆದ ಮಾರ್ಗದರ್ಶನಗಳೇನು, ಇವರಿಂದಾಗಿ ಮೋದಿ ಏನನ್ನು 'ಅಪ್ಪಿ ಕೊಂಡರು', ಏನನ್ನು 'ಪೂಜಿಸಿದರು' ಎಂಬ ರಾಜ್ಯದ ಪ್ರಜೆಗಳ ಪ್ರಶ್ನೆಗಳಿಗೆ ಉತ್ತರ ನೀಡಿ" ಎಂದು ಮೋಧ್‌ವಾಲಾ ಒತ್ತಾಯಿಸಿರುವುದು ಸರಿಯಲ್ಲವೇ?


ಗೆದ್ದಲ ಹಳ್ಳಿಗೆ ಹತ್ತಿರುವ ಡಾಲರ್ ಗೆದ್ದಲುಗಳು

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಗೆದ್ದಲ ಹಳ್ಳಿಯ ಡಾ.ಅಂಬೇಡ್ಕರ್ ಸ್ಲಂನಲ್ಲಿ 67 ಮನೆಗಳಿವೆ. 20 ವರ್ಷಗಳ ಹಿಂದೆಯೇ ಇವರೆಲ್ಲಾ ಇಲ್ಲಿ ಬಂದು ನೆಲೆಸಿದ್ದಾರೆ. ಆಗ ಈ ಪ್ರದೇಶ ಹೆಚ್ಚೂಕಡಿಮೆ ಕಾಡಾಗಿತ್ತು. ಇಂತಹ ಸ್ಥಿತಿಯಲ್ಲೇ ಸಣ್ಣಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡ ಈ ಜನ ಬೆಂಗಳೂರನ್ನು ಪ್ರಪಂಚದ ನಕ್ಷೆಯಲ್ಲಿ ಕಾಣಿಸಲು ಭರದಿಂದ ನಡೆದ ಕಟ್ಟಡ, ರಸ್ತೆ, ಗಾರೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಕೊಂಡು ಬಂದರು. ಬೆಂಗಳೂರು ಅಭಿವೃದ್ಧಿ ಕಂಡಿದ್ದೇ ಈ ಜನಗಳಿಂದ. ಆದರೆ ಈ ಜನ?

ಇವರೆಲ್ಲ ವಾಸಿಸುತ್ತಿರುವ ಗೆದ್ದಲಹಳ್ಳಿಯ (ಜಲದರ್ಶಿನಿ ಲೇಔಟ್) ಸುತ್ತ ಹೊಸ ಲೇಔಟ್‌ಗಳು ಬೆಳೆದು ಡಾಲರ್ ಕಾಲೋನಿಯೂ ಬೆಳೆಯಿತು. ಇವರಿರುವ ಸರ್ವೆ ನಂ 8 ಮತ್ತು 9ರ 14.5 ಗುಂಟೆ ಜಾಗಕ್ಕೆ ಅನತಿದೂರದಲ್ಲಿ ಯಡಿಯೂರಪ್ಪನ ಮನೆ, ಮುಂಭಾಗದಲ್ಲಿ ಎಸಿಪಿ ಮನೆ, ರಾಮಯ್ಯ ಆಸ್ಪತ್ರೆಯ ವೈದ್ಯಾಧಿಕಾರಿಯ ಮನೆ, ಎಡಭಾಗದಲ್ಲಿ ಐ.ಟಿ ಕಂಪನಿ ಮತ್ತು ಇಂಟರ್‌ನ್ಯಾಷನಲ್ ಲಿಮಿಟೆಡ್ ಕಚೇರಿ, ಬಲಗಡೆ ಮ್ಯಾಜಿಸ್ಟ್ರೇಟ್ ಮತ್ತು ವಕೀಲರುಗಳ ಮನೆಗಳು, ಇವೆಲ್ಲವೂ ತಲೆಎತ್ತಿ ಇವರು ಸುತ್ತಮುತ್ತಲಿನ ಜಾಗವನ್ನು ಆಕ್ರಮಿಸಿಕೊಂಡವು. ಅಷ್ಟೇ ಅಲ್ಲ, ಇದು ಈಗ ಅನೇಕ ಎನ್ನಾರೈಗಳಿರುವ ಬೆಂಗಳೂರಿನ ಅತ್ಯಂತ ಪಾಶ್ ಏರಿಯಾಗಳಲ್ಲಿ ಒಂದಾಯಿತು.

ಈ ಪ್ರದೇಶದಲ್ಲಿ ವಾಸವಿರುವ ಈ ಸೊಕಾಲ್ಡ್ ಪ್ರತಿಷ್ಠಿತ ಮಂದಿ ಈಗ ಹೇಳುತ್ತಿರುವುದೇನೆಂದರೆ: "ಎಲ್ಲಾ ಓಕೆ, ಸ್ಲಂ ಯಾಕೆ?" ತಮ್ಮಂತಹ ಮೇಲ್ವರ್ಗದ, ಮೇಲ್ಜಾತಿಗಳ ಜನ ಮಾತ್ರ ಬದುಕಬೇಕಾಗಿರುವ ಈ ಏರಿಯಾದಲ್ಲಿ ಹೊಲೆ-ಮಾದಿಗ ಜಾತಿಗೆ ಸೇರಿರುವ, ಕೂಲಿ ಮಾಡುವ, ಯಕಶ್ಚಿತ್ ಸ್ಲಂ ಜನ ಇರಕೂಡದು ಎಂಬುದು ಇವರ ಅಭಿಪ್ರಾಯ. ಅದಕ್ಕೆ ಈ ಸ್ಲಂನಲ್ಲಿರುವ ಜನರನ್ನು ಒಕ್ಕಲೆಬ್ಬಿಸುವ ಸಂಚುಗಳನ್ನು ಎಡೆಬಿಡದೆ ಮಾಡುತ್ತಿದ್ದಾರೆ. ಇದೀಗ ಮುಖ್ಯಮಂತ್ರಿ ಯಡ್ಡಿಯಿಂದಲೇ ನೇರವಾಗಿ ಹೌಸಿಂಗ್ ಸೆಕ್ರೆಟರಿಗಳ ಮೇಲೆ ಒತ್ತಡ ತಂದು ಈ ಜನರ ನೆಲೆಗಳನ್ನು ಕಿತ್ತುಕೊಳ್ಳುವ ಯತ್ನಗಳು ನಡೆಯುತ್ತಿವೆ.

ಇದೇ ಸ್ಲಂನಿಂದ ಅನೇಕ ಮಹಿಳೆಯರು ಈ ಪ್ರತಿಷ್ಠಿತರ ಮನೆಗಳಲ್ಲಿ ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ ಮನೆಗೆಲಸಗಳನ್ನು ದಿನನಿತ್ಯ ಮಾಡುತ್ತಿದ್ದಾರೆ. ಇಂತಹ ಕೆಲಸ ಮಾಡಿಸಿಕೊಳ್ಳುವಾಗ ಅವರಲ್ಲಿ ಯಾವ ಕೊಳಕು ಕಾಣಿಸಿಕೊಳ್ಳದಿದ್ದರೂ ಈ ಜನರ ಮನೆಗಳು ತಮ್ಮ ಎದುರೇ ಇರುವುದು ಮಾತ್ರ ಈ ಪ್ರತಿಷ್ಠಿತರ ಕೊಳಕು ಮನಸ್ಸುಗಳಿಗೆ ಸಹಿಲಸಾಧ್ಯವಾಗಿದೆ. ಇವರಿಗಿಂತ ಮುಂಚೆ ಈ ಏರಿಯಾಗೆ ಬಂದು ಅಲ್ಲೇ ಬದುಕುತ್ತಿರುವ ಈ ದಲಿತರನ್ನೇ 'ಕಾನೂನು ಬಾಹಿರವಾಗಿ ವಾಸವಾಗಿರುವವರು', 'ಕ್ರಿಮಿನಲ್‌ಗಳು', 'ಕೊಳಕರು' ಎಂದೆಲ್ಲಾ ಹಳಿಯುತ್ತಾ ಬಡವರು ಅಲ್ಲಿ ಬದುಕುವ ಹಕ್ಕುಗಳನ್ನೇ ಕಿತ್ತುಕೊಳ್ಳಲು ಹೊರಟಿದ್ದಾರೆ.



ಕೊಳಚೆ ಪ್ರದೇಶದಲ್ಲೂ ಬದುಕಲು ಬಿಡದವರು!

ಇಪ್ಪತ್ತು ವರ್ಷಗಳಿಂದ ಹೀನಾತಿಹೀನ ಪರಿಸ್ಥಿತಿಗಳಲ್ಲಿ ಬದುಕುತ್ತಿರುವ ಜನರಿಗೆ ಈ ಪ್ರದೇಶದಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂದು ಇಲ್ಲಿನ ಜನರು ಸ್ಲಂ ಜನರ ಕ್ರಿಯಾ ವೇದಿಕೆಯ ನೇತೃತ್ವದಲ್ಲಿ 2008ರ ನವೆಂಬರ್ 12 ರಂದು ಸ್ಲಂ ಬೋರ್ಡ್ ಆಯುಕ್ತರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಒತ್ತಾಯವನ್ನು ಮಾಡಿದ್ದರು. ತತ್ಪರಿಣಾಮವಾಗಿ ಭೂಮಾಪನಾಧಿಕಾರಿ ಹಾಗೂ ಎ.ಇ 2009ರ ಫೆ. 2ರಂದು ಸ್ಥಳ ಪರಿಶೀಲನೆ ನಡೆಸಿ ಸ್ಲಂ ನಕ್ಷೆ, ಚಕ್ಕುಬಂದಿ, ಗ್ರಾಮ ನಕಾಶೆ, ಪಹಣಿಗಳನ್ನು ಸಿದ್ಧಪಡಿಸಿ ಸ್ಲಂ ಕಾಯಿದೆ 1973-3ಪಿ ರನ್ವಯ ಈ ಪ್ರದೇಶವು ಸ್ಲಂ ಎಂದು ಘೋಷಿಸಲು ಅರ್ಹತೆ ಹೊಂದಿದ್ದು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ ಎಂದು ವರದಿ ನೀಡಿದ್ದರು. ಇದಾದನಂತರದಲ್ಲಿ 2009ರ ಏಪ್ರಿಲ್ 20ರಂದು ಒಂದು ಪ್ರಾಥಮಿಕ ಆದೇಶ ಹೊರಡಿಸಿ ಈ ಪ್ರದೇಶವು ಕೊಳಚೆ ಪ್ರದೇಶ ಎಂದು ಘೋಷಿಸಿದ್ದರು. ಆ ದಿನ ನಿಜಕ್ಕೂ ಈ ಸ್ಲಂನ ನಿವಾಸಿಗಳು ನಿತ್ಯನರಕದಂತಿದ್ದ ತಮ್ಮ ಪ್ರದೇಶವು ಇನ್ನಾದರೂ ಮೂಲಭೂತ ಸೌಕರ್ಯಗಳನ್ನು ಕಾಣಬಹುದು ಎಂದು ಆಶಿಸಿದ್ದರು.

ಪ್ರತಿಷ್ಠೆಗೆ ಕುತ್ತು - ಸಹಿಸದ ಕುಲೀನರು

ಒಂದು ಪ್ರದೇಶವನ್ನು ಸ್ಲಂ ಎಂದು ಘೋಷಿಸಿದ ಬಳಿಕ ಯಾರಾದರೂ ಆಕ್ಷೇಪಣೆ ಸಲ್ಲಿಸಬೇಕಿದ್ದಲ್ಲಿ 15 ದಿನಗಳ ಅವಕಾಶವಿರುತ್ತದೆ. ಆದರೆ ಮೂರು ತಿಂಗಳವರೆಗೂ ಯಾರೂ ಆಕ್ಷೇಪಣೆ ಸಲ್ಲಿಸಿರಲಿಲ್ಲ, ಆದರೆ ಮೂರು ತಿಂಗಳ ನಂತರ ಸ್ಲಂ ಅಕ್ಕಪಕ್ಕದ ಪಾಶ್ ಏರಿಯಾದ ಮಂದಿ ಬಿಡಿಎ ಅಧಿಕಾರಿಗಳ ಮೇಲೆ ಒತ್ತಡ 27-08-2009 ರಂದು ಆಕ್ಷೇಪಣೆ ಸಲ್ಲಿಸಿದ್ದಾರೆ. ಆದರೆ ಇದನ್ನು ಗಣನೆಗೆ ತೆಗೆದುಕೊಳ್ಳದ ವಿಶೇಷ ಜಿಲ್ಲಾಧಿಕಾರಿ ರಾಮಾಂಜನೇಯರವರು 07-01-2010 ರಂದು ಅಂತಿಮ ಘೋಷಣೆಯನ್ನೂ ಹೊರಡಿಸಿದ್ದಾರೆ. ತಮ್ಮಂತಹ ಪ್ರತಿಷ್ಠಿತ ಜನರು ವಾಸಿಸುವ ಜಾಗದಲ್ಲಿ ಹೀಗೆ ಸ್ಲಂ ಜನರು ಶಾಶ್ವತ ನೆಲೆ ಕಂಡುಕೊಂಡುಬಿಡುತ್ತಿರುವುದು ಗೊತ್ತಾಗುತ್ತಲೇ ಆಪಾದಮಸ್ತಕ ಉರಿಸಿಕೊಂಡಿರುವ ಶ್ರೀಮಂತರು - ಕುಲೀನರು ಶಾಸಕ ಕಂ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಕೃಷ್ಣಯ್ಯಶೆಟ್ಟಿಯ ಮೂಲಕ ಈ ಘೋಷಣೆಯನ್ನು ರದ್ದು ಪಡಿಸಲು ಒತ್ತಡ ತಂದಿದ್ದಾರೆ. ಕಳೆದ ಜನವರಿ 21ರಂದು ಬಡಾವಣೆಯ ನಿವಾಸಿಗಳ ಹೆಸರಲ್ಲಿ ಆಕ್ಷೇಪಣಾ ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದಾರೆ. ಅದರಲ್ಲಿ "ಹೊರದೇಶಗಳಲ್ಲಿರುವ ಎನ್ನಾರೈಗಳು ತಮ್ಮ ಸ್ವದೇಶಕ್ಕೆ ಮರಳಿ ಇಲ್ಲೂ ತಮ್ಮ 'ಚಟುವಟಿಕೆ'ಗಳನ್ನು ನಡೆಸಲು ಪ್ರೋತ್ಸಾಹಿಸಲೆಂದೇ ಡಾಲರ್ ಕಾಲೋನಿಯನ್ನು ಸ್ಥಾಪಿಸಿರುವಾಗ, ಅದರಲ್ಲೂ ಅನೇಕರು ಫಾರಿನ್ ಕರೆನ್ಸಿಗಳನ್ನೇ ಕೊಟ್ಟು ಇಲ್ಲಿ ಬಿ.ಡಿ.ಎ ಸೈಟುಗಳನ್ನು ಕೊಂಡುಕೊಳ್ಳುತ್ತಿರುವಾಗ, ಇಂತಹ ಡಾಲರ್ ಕಾಲೋನಿಯ ನಡುವಿನಲ್ಲಿರುವ 'ಖಾಲಿ' ಜಾಗವನ್ನು ಸ್ಲಂ ಎಂದು ಸರ್ಕಾರವು ಘೋಷಿಸುವ ಮೂಲಕ ಸರ್ಕಾರವು ಘೋರವಾದ ತಪ್ಪನ್ನು ಮಾಡಿಬಿಟ್ಟಿದೆ. ಇಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಕಟ್ಟಿಕೊಂಡಿರುವ ಜನರನ್ನು ಬೇರೆಡೆಗೆ ಎತ್ತಂಗಡಿ ಮಾಡಬೇಕು" ಮುಂತಾಗಿ ಅಲವತ್ತುಕೊಂಡಿದ್ದಾರೆ.

ಶಾಮೀಲಾದ ಕಮೀಷನರ್ ಪುಟ್ಟಸ್ವಾಮಿ

ಈ ದೊಡ್ಡ ದೊಡ್ಡ ಜನರು ಮಂತ್ರಿ ಮಹೋದಯರ ಮೇಲೆ ಒತ್ತಡ ತಂದು ಇದೀಗ ಮುಖ್ಯಮಂತ್ರಿಯ ಮೂಲಕವೇ ಸ್ಲಂಬೋರ್ಡ್ ಕಮಿಷನರ್‌ನನ್ನು ಬುಟ್ಟಿಗೆ ಹಾಕಿಕೊಂಡಿದ್ದಾರೆ. ಡಿಸಿ ರಾಮಾಂಜನೇಯ ಹೊರಡಿಸಿದ್ದ ಅಂತಿಮ ಘೋಷಣೆಯು ರಾಜ್ಯಪತ್ರದಲ್ಲಿ ಪ್ರಕಟವಾಗದಂತೆ ತಡೆಹಿಡಿದಿದ್ದಾರೆ. ಇದೀಗ ಇವರ ಮರ್ಜಿಗೆ ಒಳಗಾಗಿರುವ ಕಮಿಷನರ್ ಪುಟ್ಟಸ್ವಾಮಿ ಈ ಹಿಂದೆ ತಾನೇ ಮಾಡಿದ್ದ ಪ್ರಸ್ತಾವನೆಗಳಿಗೆ ತಾನೇ ವಿರುದ್ಧವಾಗಿ ತಿರುಗಿದ್ದಾರೆ. ಆದರೆ ಅಂತಿಮ ಘೋಷಣೆ ಹೊರಡಿಸಿದ್ದ ಜಿಲ್ಲಾಧಿಕಾರಿಗ[ಳು] ಈಗ ತಾವೇ ಅದನ್ನು ವಾಪಸು ಪಡೆಯುವಂತಿ[ಲ್ಲ]. ಆದ್ದರಿಂದ ಈ ಪುಟ್ಟಸ್ವಾಮಿಯೇ ಖುದ್ದಾಗಿ ಸರ್ಕಾ[ರದ] ವಸತಿ ಇಲಾಖೆಯಲ್ಲಿನ ಸರ್ಕಾರದ ಕಾರ್ಯದರ್ಶಿ[ಗೆ] ಪತ್ರ ಬರೆದು ಪ್ರತಿಷ್ಠಿತ ನಿವಾಸಿಗಳು ಸಲ್ಲಿಸಿ[ರುವ] ಆಕ್ಷೇಪಣೆಯನ್ನು ಉಲ್ಲೇಖಿಸಿ ಕೊಳಚೆ ಪ್ರದೇ[ಶ] ಘೋಷಣೆಯ ಕುರಿತು ನಿರ್ದೇಶನ ಕೈಗೊಳ್ಳಲು ... ಬರೆದಿದ್ದಾರೆ. ಆದರೆ ಕಾನೂನುಪ್ರಕಾರ ಈಗ ನಿವಾಸಿಗ[ಳು] ಸಲ್ಲಿಸಿರುವ ಆಕ್ಷೇಪಣೆಗೆ ಕಿವುಡು ಕಾಸಿನ ಕಿಮ್ಮತ್ತೂ ಇಲ್ಲ. ಒಂದರ್ಥದಲ್ಲಿ ಶ್ರೀಮಂತರಿಗಾಗಿ ಬಡವ[ರ] ಪೌರತ್ವವನ್ನೇ ನಿರಾಕರಿಸುತ್ತಿರುವ ಸರ್ಕಾರದ ಈ ಕ್ರ[ಮ] ದೇಶದ್ರೋಹಕ್ಕೆ ಸಮಾನವಾದದ್ದು. ಈ ಕೂಡಲೇ ... ಸಂಘಟನೆಗಳೆಲ್ಲಾ ಒಂದಾಗಿ ಈ ಎನ್ನಾರೈಗಳಿಗೆ ದೇ[ಶ]... ಮಟ್ಟದಲ್ಲಿ ಬುದ್ಧಿ ಕಲಿಸಬೇಕಿದೆ.

● ಹರ್ಷಕುಮಾರ್ ಕು...

ಲ್ಯಾಂಡ್ ಮಾಫಿಯಾ[ದ] ಗೂಂಡಾಗಿರಿ

ಡಾಲರ್ ಕಾಲೋನಿಯ ಹೃದಯಭಾಗದಲ್ಲಿ ... ಸ್ಲಂ ಇರುವ ಜಾಗದಲ್ಲಿ ಇವತ್ತು ಭೂಮಿಯ ಬೆ[ಲೆ] ಚದರಡಿಗೆ ಏನಿಲ್ಲೆಂದರೂ ಹತ್ತು ಸಾವಿರ ರೂ. ಅಂದ[ರೆ] ಈ 67 ಮನೆಗಳಿರುವ ಸೈಟು ಕನಿಷ್ಠ ಎರಡ[ು] ಕೋಟಿಗೆ ಬೆಲೆಬಾಳುತ್ತದೆ. ಹಾಗಾಗಿಯೇ ಇಂದು ... ಸ್ಲಂ ಜನರು ಪ್ರತಿನಿತ್ಯವೂ ಇಲ್ಲಿನ ಪ್ರಭಾಕರ್ ಮತ್ತು ಹರಿಕೃಷ್ಣ ಎಂಬ ಭೂಗಳ್ಳರಿಂದ ನಾನಾ ಬಗೆಯ ಕಿರುಕುಳಗಳನ್ನು ಎದುರಿಸುತ್ತಲೇ ಇದ್ದಾರೆ. ಹೀ[ಗೆ] ಹಿಂಸೆಗೀಡಾಗುತ್ತಿರುವ ಜನರು ಈ ಮೇಲ್ಜಾತಿಯ ಕೊಳಕರ ಮೇಲೆ ಅಟ್ರಾಸಿಟಿ ಕೇಸು ದಾಖಲಿಸಲು ದೂರು ನೀಡಲು ಹೋದರೆ ಒಂದೇ ಒಂದು ಕೇಸನ್ನೂ ದಾಖಲಿಸದ ದಾರ್ಷ್ಟ್ಯ ಸಂಜಯನಗರ ಪೊಲೀಸರದ್ದು. ... ನಲ್ಲಿ ಪೈಪುಗಳನ್ನೇ ಕತ್ತರಿಸುವುದು, ಮಹಿಳೆಯರು ಶೌಚಾಲಯ (ಬಯಲು) ಮಾಡುವಾಗ ಕಲ್ಲು ತೂರುವುದು, ಗುಡಿಸಲುಗಳಿಗೆ ಬೆಂಕಿ ಹಚ್ಚುತ್ತೇವೆಂದು ಬೆದರಿಕೆ ಹಾಕುವುದನ್ನು ಮಾಡುತ್ತಿರುವ ಈ ಗೂಂಡಾಗಳಿಗೆ ಯಡಿಯೂರಪ್ಪನ ಶ್ರೀರಕ್ಷೆಯು ಇದ್ದಂತಿದೆ. ಬಡವರ ಕೋಪ ರಟ್ಟೆಗೆ ಬರದೆ ಇಂಥವರಿ[ಗೆ] ಬುದ್ಧಿಬರುವುದಿಲ್ಲ.





ಜನ ದ್ರೋಹಿ ಸರ್ಕಾರ!

ಈ ಬಾರಿಯ ಬಜೆಟ್‌ನಲ್ಲಿ ಯಡಿಯೂರಪ್ಪನವರ ಆದ್ಯತೆಗಳನ್ನು ಗಮನಿಸಿದರೆ, ಕೇವಲ ಗಣಿದಣಿಗಳ ಬಯಕೆಗಳನ್ನು ಈಡೇರಿಸುವುದಷ್ಟೇ ಅಲ್ಲ, ಈ ರಾಜ್ಯದ ಹತ್ತು ಹಲವು ಕನಸು, ಆಶಯಗಳನ್ನೂ ಹೊಸಕಿ ಹಾಕುವ ತೀರ್ಮಾನ ಮಾಡಿದಂತಿದೆ.

ಈ ರಾಜ್ಯದ ಕೃಷಿ, ಸಂಸ್ಕೃತಿಗಳ ಪುನರುತ್ಥಾನಕ್ಕೆ ಬೇಕಾದ ಹೆಜ್ಜೆಗಳನ್ನು ಇಡುವಲ್ಲಿ ಈ ಸರ್ಕಾರ ತೋರುತ್ತಿರುವ ಬೇಜವಾಬ್ದಾರಿ ನಡೆಗಳನ್ನು ಈ ಕೆಳಗಿನ ಬಜೆಟ್ ಅನುದಾನಗಳು ಢಾಳಾಗಿ ತೋರುತ್ತಿವೆ:

ರಾಜ್ಯದ ಹಲವು ಜಿಲ್ಲೆಗಳಲ್ಲಿ ತೋಟಗಾರಿಕೆ, ಪಶುಸಂಗೋಪನೆ ಕಾಲೇಜುಗಳ ಸ್ಥಾಪನೆಗೆ ಸರ್ಕಾರ ತಲಾ 1.25 ಕೋಟಿ ರೂಪಾಯಿ ನೀಡಿದೆ. ಪಶು ತಳಿ ಅಭಿವೃದ್ಧಿಗೂ ಅಷ್ಟೆ, ಮೂರು ಜಿಲ್ಲೆಗಳಲ್ಲಿ ಈ ಯೋಜನೆಗೆ ಕೇವಲ ತಲಾ 1.25 ಕೋಟಿ ರೂಪಾಯಿ ನೀಡಿದೆ.

ಈ ಮೊತ್ತದಲ್ಲಿ ನೆಟ್ಟಗೆ ಒಂದು ಕಟ್ಟಡ ಕಟ್ಟಲೂ ಸಾಧ್ಯವಿಲ್ಲ ಎಂದು ಯಡಿಯೂರಪ್ಪನವರಿಗೆ ಗೊತ್ತಿಲ್ಲವೇ? ಹಾಗೇ, ಸರ್ಕಾರಿ ಆಯುರ್ವೇದ ಆಸ್ಪತ್ರೆಗಳ ಅಭಿವೃದ್ಧಿಗೆ ತಲಾ 5 ಕೋಟಿ ರೂಪಾಯಿ ಮಾತ್ರ ನೀಡಲಾಗಿದೆ. ಹೋಗಲಿ, ಸ್ಥಾಪನೆಯಾಗಿರುವ ಹೊಸ ವಿವಿಗಳಿಗೆ ನೀಡಿರುವ ಮೊತ್ತ ಕೇವಲ ತಲಾ 10 ಕೋಟಿ ರೂಪಾಯಿ. ಹಂಪಿ ಕನ್ನಡ ವಿವಿಯ ಅಗತ್ಯ ಸೌಲಭ್ಯಗಳಿಗೆ ನೀಡಿರುವ ಮೊತ್ತವೂ ಅಷ್ಟೆ, ಜುಜುಬಿ 5 ಕೋಟಿ ರೂಪಾಯಿ.

ಒಟ್ಟಾರೆಯಾಗಿ ಕೃಷಿ, ಪಶುಸಂಗೋಪನೆ ಅಭಿವೃದ್ಧಿ, ವಿವಿಗಳ ಅಭಿವೃದ್ಧಿ, ವೈದ್ಯಕೀ[ಯ] ಸೌಲಭ್ಯಗಳ ಅಭಿವೃದ್ಧಿಗೆ ನೀಡಿದ ಮೊತ್ತ ರೂಪಾಯಿ 75 ಕೋಟಿ ಮೀರುವುದಿಲ್ಲ.

ರೈತರ ಆತ್ಮಹತ್ಯೆ ತಡೆಯುವ ಸಾವಯವ ಕೃಷಿ ಪ್ರೋತ್ಸಾಹಕ್ಕೆ ಮೀಸಲಿಟ್ಟ ಹಣ ಕೇ[ವಲ] 100 ಕೋಟಿ ರೂಪಾಯಿ.

ಇದೇ ಸರ್ಕಾರ ವಿಜಯನಗರ ಥೀಮ್ ಪಾರ್ಕಗೆ ರೂಪಾಯಿ 50 ಕೋಟಿ ಅನುದ[ಾನ] ನೀಡಿದೆ, ಹಾಗೆ, ಶಿವಮೊಗ್ಗೆಯ ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರಕ್ಕೆ 20 ಕೋ[ಟಿ] ರೂಪಾಯಿ ಕೊಡುಗೆ ನೀಡಿದೆ. ಹಾಗೇ ಶ್ರವಣಬೆಳಗೊಳ, ಎಡೆಯೂರು, ರಂಭಾಪ[ುರಿ], ಕೂಡಲ ಸಂಗಮ, ಬಸವಕಲ್ಯಾಣ ಮತ್ತು ಆದಿಚುಂಚನಗಿರಿ ಅಭಿವೃದ್ಧಿಗೆ ಹಾಗೂ ... ಭವನಕ್ಕೆ ತಲಾ 5 ಕೋಟಿ ರೂಪಾಯಿ ನೀಡಿದೆ!

ಈ ವಿಕೃತ ಆದ್ಯತೆಗಳ ಬಗ್ಗೆ ವ್ಯಾಖ್ಯಾನವೇ ಬೇಕಿಲ್ಲವೇನೋ..!

ಸಮುದಾಯಕ್ಕೆ ಬೇಕಾದ ತುರ್ತು ಆದ್ಯತೆಗಳಿಗೆ ಪುಡಿಗಾಸು. ಥೀಮ್ ಪಾರ್ಕ್‌ಗೆ ... ಕೋಟಿ!

ಕನ್ನಡ ವಿವಿಯ ನೆಲ ಪರಭಾರೆ ಆರಂಭ ಮಾತ್ರ. ಮುಂಬರುವ ದಿನಗಳಲ್ಲಿ ಸಮುದಾ[ಯ] ಹಿತದ ಎಲ್ಲಾ ಸಂಸ್ಥೆಗಳನ್ನೂ ಉಸಿರುಗಟ್ಟಿಸಿ, ಸ್ಥಾಪಿತ ಹಿತಾಸಕ್ತಿಗಳನ್ನು ಪೋಷಿಸುವ ಪ್ರ... ವೇಗ ಪಡೆಯಲಿದೆ.

ನಾಡಿನ ರೈತರು, ವಿಚಾರವಂತರು ಈ ವಿಕೃತಿಗಳ ಬಗ್ಗೆ ಪ್ರತಿಭಟಿಸದಿದ್ದರೆ ನಾಳೆ, ನ... ಕಾಡು, ನದಿ ಬಿಡಿ, ನಮ್ಮ ಮನೆಯನ್ನೂ ಈ ಮಂದಿ ಬಿಡಲಾರರು.

- ಕೆ.ಪಿ.ಸುರೇಶ್, ಮೈಸೂ[ರು]

ಮಂಗಳೂರು: ರಾಮಸೇನೆ ರಾಕ್ಷಸ ಅತ್ತಾವರನ ಅಂಡರ್‌ವರ್ಲ್ಡ್ ದಂಧೆ!



ಪೊಲೀಸ್ ಮೂಲದ ಪ್ರಕಾರ, ಅತ್ತಾವರನ ಹಿಂದೂತ್ವದ ಹಫ್ತಾ ಪಾತಕ ಯಾವ ಲೆಕ್ಕವೂ ಅಲ್ಲ. ಈತನಿಗಿಂತ ದೊಡ್ಡ ಪಾಪಿ ಇನ್ನೂ ಮೂವರು ಹಿಂದೂ ಡಾನ್‌ಗಳು ಮಂಗಳೂರಲ್ಲಿದ್ದಾರಂತೆ. ಇವರೆಲ್ಲಾ ಸಂಘ ಪರಿವಾರದ ಒಂದಲ್ಲ ಒಂದು ಛದ್ಮವೇಷಧಾರಿಗಳೇ! ಇವರಿಗೆಲ್ಲಾ ಭೂಗತ ಲೋಕದ ಸ್ನೇಹ ಸಂಬಂಧವಿದೆ. ಆ ಮೂಲಕವೇ ಈ ಹಿಂದೂ ಮುಂದಾಳುಗಳು ದೇಶವಿರೋಧಿ ದಂಧೆ ಮಾಡಿದ್ದಾರಂತೆ. ಹೇಗಿದೆ ಸಂಘಪರಿವಾರದ-ರಾಮಸೇನೆಯ ದೇಶಭಕ್ತಿ-ಹಿಂದೂತ್ವ ರಕ್ಷಣೆ ದಂಧೆ?

ಮಂಗಳೂರಲ್ಲಿ ಹಿಂದೂತ್ವವು ಅಂಡರ್‌ವರ್ಲ್ಡ್ ದಂಧೆಗೂ ಬಂಡವಾಳ! ಪರಿವಾರದ ಪುಂಡರ ಆಡಂಬೋಲದಂತಾಗಿರುವ ಕರಾವಳಿಯಲ್ಲಿ ...ರ್ಕರು, ಭೂಗತ ಪಾತಕಿಗಳು, ರೌಡಿಗಳು ಹಿಂದೂತ್ವದ ಬುರ್ಖಾ ...ಕೊಂಡು 'ಗಂಡಾಗುಂಡಿ' ಮಾಡುತ್ತಿದ್ದಾರೆ. ಮಾತೆತ್ತಿದರೆ ದೇಶಭಕ್ತಿಯ ...ದ್ದ ವ್ಯಾಖ್ಯಾನ ಬಗಿವ ಈ ಹಿಂದೂವಾದಿಗಳು ಮಾಡುತ್ತಿರುವ ...ದ್ರೋಹದ ಕ್ರಿಮಿನಲ್ ದಂಧೆ ಒಂದೆರಡಲ್ಲ! ಹಿಂದೂ ಸಂಸ್ಕೃತಿ-ಹಿಂದೂ ... ಮಾನ-ಗೋಪ್ರಾಣದ ನೆಪದಲ್ಲಿ ಕಾಮ-ಕಾಸು ಸಾಧಿಸುವ ಖತರ್‌ನಾಕ್ ...ರ್ಯಚರಣೆ ಕರಾವಳಿಯಲ್ಲಿ ನಿರಂತರ-ನಿರಾತಂಕವಾಗಿ ನಡೆದಿದೆ.

...ಮಂಗಳೂರಿನ ಅನಾಹುತಕಾರಿ ಹಿಂದೂತ್ವವೀಗ ಭೀಭತ್ಸ ಭೂಗತ ...ದ ಜತೆ ತೆಕ್ಕೆ ಹಾಕಿಕೊಂಡು ಹೊರಳಾಡುತ್ತಿದೆ!! ವಿದೇಶದಲ್ಲಿ ಕುಳಿತಿರುವ ...ಳಿ ಮೂಲದ ಭೂಗತ ಪಾತಕಿ ರವಿ ಪೂಜಾರಿಗೂ, ಈ ಭಾಗದ ...ಾ ಅಭಿಯಾನ 'ಧರ್ಮಾತ್ಮ'ರಿಗೂ ಸಖ್ಯವಿರುವುದು ಬಹಿರಂಗ ರಹಸ್ಯ. ತಾನೇ ಹಿಂದೂ ಡಾನ್ ಎಂದು ಘೋಷಿಸಿಕೊಂಡಿರುವ ರವಿ ಪೂಜಾರಿ ...ಳೂರು-ಉಡುಪಿ ಕಡೆಯ ಭೂ ಬಿಸಿನೆಸ್‌ದಾರರು-ಬಿಲ್ಡರ್‌ಗಳು ಮತ್ತು ...ಕೋದ್ಯಮಿಗಳನ್ನು ಟಾರ್ಗೆಟ್ ಮಾಡಿಕೊಂಡು ನಡೆಸಿರುವ ...ರ್ಯಚರಣೆಗೆ ಸ್ಥಳೀಯ ಹಿಂದೂ ಹರಾಮಿಗಳು ಸಹಕಾರ ಕೊಡುತ್ತ ...ದ್ದಾರೆ; ಒಂದಿಷ್ಟು ಪಾಲೂ ಪಡೆದಿದ್ದಾರೆ.

...ಮಂಗಳೂರು ಮತ್ತದರ ಸುತ್ತಲಿನ ಪ್ರದೇಶಗಳಲ್ಲಿ ಹಿಂದೂ ರೌಡಿಗಳು ...ಪೂಜಾರಿಯ ಕಮ್ಯುನಲ್ ಕುಮ್ಮಕ್ಕಿನಿಂದ ಹಲವು ಕೋಮು ಗಲಭೆ ...ದ್ದಾರೆ; ಮುಸ್ಲಿಮರ ಮೇಲೆ ಹಲ್ಲೆ-ಮರ್ಡರ್ ಮಾಡಿದ್ದಾರೆ. ಮುಸ್ಲಿಮ್ ...ಉಗಳು-ಬಿಲ್ಡರ್‌ಗಳ ಮೇಲೆ ಗುಂಡು ಹಾರಿಸಿ ಹಫ್ತಾ ವಸೂಲಿ ಮಾಡಿದ್ದಾರೆ. ...ಸ್ ಎಂಬ ವಕೀಲನ ಕೊಲೆಯಲ್ಲಿ ರವಿ ಪೂಜಾರಿಯ ಕೈವಾಡವಿರುವುದು ...ಗೂ ಗೊತ್ತಿರುವಂಥದ್ದೇ. ಹಿಂದೂ ರೌಡಿಸಂ ಕರಾವಳಿಯನ್ನು ...ಸಿಬಿಟ್ಟಿದೆ.

...ಮಂಗಳೂರಲ್ಲಿರುವ ತರಹೇವಾರಿ ಹಿಂದೂ ಗ್ಯಾಂಗುಗಳಿಗೆ ಜಾನುವಾರು ...ಿಕ ಸಾಗಾಟ ತಡೆ, ಹಿಂದೂ ಹೆಣ್ಣಿನ ಮಾನ ಕಾಪಾಡುವುದು, ...ಕ ಪೊಲೀಸ್‌ಗಿರಿಗಳೆಲ್ಲ ಕಾಸು ಮಾಡುವ ಕಸುಬೆಂಬುದು ಸಾಬೀತಾಗಿ ...ದೆ. ಈ ಅಕ್ರಮ ಆಮದಾನಿ ಹಂಚಿಕೆ ಜಗಳದಿಂದಾಗಿಯೇ ಭಜರಂಗ ...ಡೆದು ಮುತಾಲಿಕ್‌ನ ಮಂಗಸೇನೆ ಬಣ ರಚನೆಯೂ ಆಗಿದೆ. ...ಾರು ಸಾಗಾಟಗಾರ ಸಾಬಿಗಳು, ಹಿಂದೂ-ಮುಸ್ಲಿಮ್ ಪ್ರೇಮಿಗಳ ...ಲ್- ಹಣ ವಾಚ್‌ಗಳನ್ನೆಲ್ಲಾ ದೋಚಿಕೊಂಡು ಬರುವ ...ಗಿ-ರಾಮಸೇನೆ ಪರಾಕ್ರಮಿಗಳೀಗ ಅಂಡರ್‌ವರ್ಲ್ಡ್ ಪಾತಕಿಗಳ ...ೇರಿಕೊಂಡು ಹೈಟೆಕ್ ರಾಬರಿಗಿಳಿದಿದ್ದಾರೆ.

...ಾವಳಿಯ ಸಂಘಪರಿವಾರದ ಭಜರಂಗದಳ, ರಾಮಸೇನೆ ...ದ ಸುಲಿಗೆ ಕೋಳಿಗಳಿಗೆ ವಿದೇಶದಲ್ಲಿ ಕುಳಿತು ಸ್ಕೆಚ್ ... ಹಿಂದೂ ಭೂಗತ ಡಾನ್‌ಗಳೊಂದಿಗೆ ಲಿಂಕುಗಳಿವೆ ...ು ತುಂಬ ಹಿಂದಿನ ಅನುಮಾನ. ಈ ಸಂಶಯ ಮೊನ್ನೆ ...ಬ್ರಹ್ಮಣ್ಯೇಶ್ವರ ರಾವ್ ನಡೆಸಿದ ಕಾರ್ಯಾಚರಣೆ ಸತ್ಯವೆಂದು ...ಮಾಡಿದೆ. ಮುತಾಲಿಕ್‌ನ ರಾಮಸೇನೆಯ ರಾಜ್ಯ ಸಹ ...ಕ ಪ್ರಸಾದ್ ಅತ್ತಾವರ್ ಭೂಗತ ಜೀವಿ ರವಿ ಪೂಜಾರಿ ...ನದಂತೆ ಕರಾವಳಿಯಲ್ಲಿ ಅಂಡರ್‌ವರ್ಲ್ಡ್ ಪಾತಕ ...ದ್ದಾನೆಂಬ ಕಾರಣಕ್ಕೆ ಆತನನ್ನು ಬಂಧಿಸಿ ಜೈಲಿಗೆ ಹಾಕಲಾಗಿದೆ. ...ಪೊಲೀಸರು "ಧರ್ಮಾತ್ಮ" ಪ್ರಸಾದ್ ಅತ್ತಾವರನ ಅಸಲೀ ...ವನ್ನು ಹಿಂದೂ ಸಮಾಜಕ್ಕೆ ತೋರಿಸಿದಂತಾಗಿದೆ!!


...ರಂಗದಳದಲ್ಲಿದ್ದಾಗ ಜಾನುವಾರು ಸಾಗಾಟಗಾರ ಸಾಬಿಗಳ ... ಬದುಕಿಕೊಂಡಿದ್ದ ಅತ್ತಾವರ ರಾಮಸೇನೆ ಸೇರಿದ ಮೇಲೆ ಐಡೆಂಟಿಟಿ ...ದ ಬಳಲುತ್ತಿದ್ದ. ಹೇಗಾದರೂ ಮಾಡಿ ಪಬ್ಲಿಸಿಟಿ-ಮೈಲೇಜು ಪಡೆಯಲು ...ಸುತ್ತಿದ್ದ ಆತ "ಅಮ್ನೇಷಿಯಾ" ಪಬ್ ಮೇಲೆ ದಾಳಿ ಮಾಡಿ ... ಕುಖ್ಯಾತನಾಗಿಹೋಗಿದ್ದ. ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ...ಳೆದ ಈ ಕೊಳಕು ಪಬ್ ದಾಳಿಯ ಪ್ರಮುಖ ಸೂತ್ರಧಾರನಾದ ... ಕಮ್ಯುನಲ್ ಕ್ರಿಮಿನಲ್ ಅಕೌಂಟ್‌ನಲ್ಲಿ ಸಾಬಿಗಳ ಸುಲಿದ, ದೊಂಬಿ, ...ಲಭೆ ಮಾಡಿದ ಹಲವು ಕೇಸುಗಳಿವೆ!

...ಂದೂ ರಾ... [illegible] ...ಕ್ಯುರಿಟಿ ಏಜೆನ್ಸಿ. ಇದೇ ಮಂಗಳೂರಿನ



ದೊಡ್ಡ-ದೊಡ್ಡ ಮಾಲ್, ಬಿಲ್ಡಿಂಗ್, ಪಬ್, ಬಾರ್‌ನವರೆಲ್ಲ ಈತನ ಏಜೆನ್ಸಿಯಿಂದಲೇ ಸೆಕ್ಯುರಿಟಿಗಳ ನೇಮಿಸಿಕೊಳ್ಳಬೇಕು; ಆತ ಹೇಳಿದಷ್ಟು ಹಣ ಕೊಡಬೇಕು. ಇಲ್ಲದಿದ್ದರೆ ಈ ಕಟ್ಟಡಗಳು ಹಿಂದೂ ಧರ್ಮ ರಕ್ಷಣೆ ಹೆಸರಿನ (ಅ)ನೈತಿಕ ಪೊಲೀಸ್‌ಗಿರಿಯ ದಾಳಿಗೆ ಬಲಿಯಾಗುವುದು ಗ್ಯಾರಂಟಿ. ಅತ್ತಾವರನ ಹಿಂದೂತ್ವದ ಬೆದರಿಕೆಗೆ ಸೊಪ್ಪು ಹಾಕದಿದ್ದರೆ ತಕ್ಷಣ ಆತನ ರಾಮಸೇನೆಯ ಮಂಗಗಳು 'ಹಿಂದೂ ಧರ್ಮಕ್ಕೆ ಅಪಚಾರ ಆ ಕಟ್ಟಡಗಳಲ್ಲಿ ನಡೆಯುತ್ತಿದೆ' ಎಂದು ಹುಯಿಲೆಬ್ಬಿಸಿಬಿಡುತ್ತಾರೆ. ನಂತರ ದಾಳಿ! ದರೋಡೆ!!

ಅಮ್ನೇಷಿಯಾ ಪಬ್ ಮೇಲೆ ರೌಡಿ ಅತ್ತಾವರನ ಗ್ಯಾಂಗು ಮುಗಿಬೀಳಲು ಮೂಲ ಕಾರಣವೇ ಈ ಸೆಕ್ಯುರಿಟಿ ದಂಧೆ. ಆ ಪಬ್‌ನವರು ಅತ್ತಾವರನ ಸೆಕ್ಯುರಿಟಿ ಏಜೆನ್ಸಿಯನ್ನು ಕಡೆಗಣಿಸಿ ಬೇರೆ ಸೆಕ್ಯುರಿಟಿ ನೇಮಿಸಿಕೊಂಡಿದ್ದರು. ಇದು ಅತ್ತಾವರನ ಹಿಂದೂ ಪಿತ್ಥ ನೆತ್ತಿಗೇರಿಸಿ ರೌಡಿಗಿರಿಗೆ ಇಳಿಸಿತ್ತು. ಅಲ್ಲಿ ಹೆಣ್ಣು-ಗಂಡು ಕುಡಿದು ಹಿಂದೂ ಧರ್ಮ ಕುಲಗೆಡಿಸುತ್ತಾರೆಂದು ಈ ಅತ್ತಾವರ ಭಾನ್ಗಡಿ ಮಾಡಿದ್ದನಷ್ಟೇ. ಇದೇ ರೀತಿ ಭಾರತ್ ಮಾಲ್‌ನ ಒಡೆಯರೂ ತನ್ನ ಸೆಕ್ಯುರಿಟಿ ಏಜೆನ್ಸಿ ಮೂಲಕ ಗಾರ್ಡ್‌ಗಳನ್ನು ಪಡೆದಿಲ್ಲವೆಂಬ ಹೊಟ್ಟೆಕಿಚ್ಚಿನಿಂದ ಅತ್ತಾವರ್ ಆ ಕಟ್ಟಡದ ಮೇಲೆ ತನ್ನ ಗೂಂಡಾಗಳಿಂದ ಹಿಂದೂತ್ವದ ದಾಳಿ ಮಾಡಿಸಿದ್ದ. ದಾಳಿಗಾತನಿಗೆ ಭಾರತ ಮಾಲ್‌ನಲ್ಲಿ ಟೈಮ್ಸ್ ಗ್ರೂಪಿನವರ ಫ್ಯಾಷನ್ ಶೋ ನಡೆಯುತ್ತಿದ್ದುದೇ ಅಂದು ನೆಪವಾಗಿತ್ತು.



ಹಾಗೆ ನೋಡಿದರೆ ಈ ಅತ್ತಾವರನ ಸೆಕ್ಯುರಿಟಿ ಗಾರ್ಡ್‌ಗಳ ನೇಮಿಸಿಕೊಂಡಿರುವ ಎಂಪೈರ್ ಮಾಲ್‌ನಲ್ಲೇ ಅತೀ ಹೆಚ್ಚು ಪ್ಯಾರೀಸ್ ಪ್ರಣಯ ಲೀಲೆಗಳು ನಡೆಯುತ್ತವೆ. ಬಹುಶಃ ಮಂಗಳೂರಿನಲ್ಲೇ ಹದಿಹರೆಯದ ಅನೈತಿಕ ಜೋಡಿಗಳು ಓಡಾಡುವುದು ಈ ಮಾಲ್‌ನ ಎಂ.ಜಿ. ರೋಡಿನಲ್ಲಿ, ಆದರೆ ಇದ್ಯಾವುದೂ ಅತ್ತಾವರನ ಧರ್ಮಸೂಕ್ಷ್ಮವನ್ನು ಎಚ್ಚರಿಸುತ್ತಿಲ್ಲ, ಕಾರಣ ಸ್ಪಷ್ಟ. ಈ ಮಾಲ್‌ನವರು ದುಬಾರಿ ಟೆಂಡರ್‌ಗೆ ಅತ್ತಾವರನ ಸೆಕ್ಯುರಿಟಿ ಗಾರ್ಡ್‌ಗಳ ನೇಮಿಸಿಕೊಂಡಿರುವುದೇ ಇಲ್ಲಿ ಹಿಂದೂತ್ವದ ಸೊಲ್ಲಡಗಿರಲು ಕಾರಣ!

ಇದಕ್ಕಿಂತ ದೊಡ್ಡ ಇನ್‌ಕಮ್ ಅತ್ತಾವರನಿಗೆ ಇರುವುದು ಭೂಗತ ಹಿಂದೂತ್ವದ ಹಫ್ತಾ ವಸೂಲಿಯಲ್ಲಿ, ಪಾತಕಿ ರವಿ ಪೂಜಾರಿ ಜತೆ ಅತ್ತಾವರನಿಗೆ ಕೆಲವು ವರ್ಷದಿಂದ ನೇರ ನಂಟು ಕುದುರಿತ್ತು. ಪೂಜಾರಿಗೆ ಆತ ಮಂಗಳೂರಿನ-ಉಡುಪಿಯ ಹಣವಂತರ-ಉದ್ಯಮಿಗಳ ಫೋನ್ ನಂಬರ್ ಒದಗಿಸುತ್ತ ಬಂದಿದ್ದಾನೆ. ಆ ನಂಬರಿಗೆ ಹಫ್ತಾ ಕಾಲ್‌ಅನ್ನು ಪೂಜಾರಿ ಮಾಡಿದ ಮೇಲೆ ಚೌಕಾಸಿ ವ್ಯವಹಾರಕ್ಕೆ ಅತ್ತಾವರ ಹೋಗುತ್ತಿದ್ದ ಅಥವಾ ವ್ಯವಹಾರ ಪೂಜಾರಿ ಮೂಲಕವೇ ನಡೆದುಹೋಗಿದ್ದರೆ, ಅತ್ತಾವರನಿಗೆ ಭೂಗತ ಲೋಕದಿಂದ ಕಮಿಷನ್ ಬರುತ್ತಿತ್ತು. ಈ ರಹಸ್ಯ-ಅಕ್ರಮ ದಂಧೆಯಲ್ಲಿ ಲಕ್ಷ-ಲಕ್ಷ ಗಳಿಸುತ್ತಿದ್ದ ಅತ್ತಾವರ ಈಗೀಗ ನೇರವಾಗಿ (ಅ)ನೈತಿಕ ಪೊಲೀಸ್‌ಗಿರಿಯಲ್ಲಿ ಭಾಗವಹಿಸದೇ ತನ್ನ ಹಿಂಬಾಲಕರ ಛೂಬಿಟ್ಟು ಅವರಿಗದರ "ವರಮಾನ" ಹಂಚುತ್ತಿದ್ದ.

ಯಾರೇ ಆತನ ಮನೆಗೆ ಅಥವಾ ಮೊಬೈಲ್‌ಗೆ ಫೋನ್ ಮಾಡಿದರೆ ಈಗೀಗ ಅತ್ತಾವರ ರಿಸೀವ್ ಮಾಡುತ್ತಿರಲಿಲ್ಲ, ಆತನ ಫೋನ್ ತೆಗೆದುಕೊಂಡ ಮನೆ ಮಂದಿ "ಅವರು ಜಪಕ್ಕೆ ಕುಂತಿದ್ದಾರೆ... ಸ್ವಲ್ಪ ತಡೆದು ಮಾಡಿ...." ಎಂದು ಉತ್ತರಿಸುತ್ತಿದ್ದರು. ನಂತರ ಅತ್ತಾವರ ತಾನೇ ಮರಳಿ ಕಾಲ್ ಮಾಡುತ್ತಿದ್ದ. ಶ್ರೀರಾಮ ಸೇನೆಯ ಕಪಿಗಳ ರೌಡಿಗಿರಿಯ ಬಗ್ಗೆ ಕೇಳಿದರೆ "..... ನೋಡಿ ನಾನೀಗ ಜಪದಲ್ಲೇ ಹೆಚ್ಚು ಕಾಲ ಕಳೆಯುತ್ತೇನೆ... ಹೊರಗೆಲ್ಲೂ ಹೋಗೋದಿಲ್ಲ.. ಹೀಗಾಗಿ ಸೇನೆಯವರ ಚಟುವಟಿಕೆ ಗೊತ್ತಿಲ್ಲ... ಬೇಕಿದ್ದರೆ ಕೇಳಿ ಹೇಳ್ತೇನೆ...." ಎಂದು ಸನ್ಯಾಸಿ ಥರ ಬೋಂಗು ಬಿಡುತ್ತಿದ್ದ.

ಆದರೆ ಈ ಕ್ರಿಮಿನಲ್ ಪಾಪಿ ಮನೆಯಲ್ಲೋ, ಪಾತಕದ ಅಡ್ಡೆಯಲ್ಲೋ ಕುಳಿತು ಮಾಡುತ್ತಿದ್ದ "ಜಪ-ತಪ"ವೇ ಬೇರೆಯಾಗಿತ್ತು!! ಯಾರ ತಲೆ ಒಡೆದು ಹಣ ಮಾಡಲಿ, ಯಾರಿಗೆ ಹಿಂದೂತ್ವದ ಬ್ಲ್ಯಾಕ್‌ಮೇಲ್ ಮಾಡಲಿ ಎಂಬ ಅಖಂಡ ಧ್ಯಾನದಲ್ಲೀತ ನಿರತನಾಗಿರುತ್ತಿದ್ದ. ತನ್ನ ಲ್ಯಾಪ್‌ಟ್ಯಾಪ್‌ಗೆ ವಾಯ್ಸ್ ಓವರ್ ಇಂಟರ್‌ನೆಟ್ ಪ್ರೊಟೋಕಾಲ್ (ವಿಓಐಪಿ) ತಂತ್ರಜ್ಞಾನ ಅಳವಡಿಸಿ ಅದರ ಮೂಲಕ ವಿದೇಶಿ ಕರೆಯಂತೆ ಕಾಣುವ ಸಂಖ್ಯೆಯಿಂದ ಬಿಲ್ಡರ್ಸ್ ಮತ್ತು ಉದ್ಯಮಿಗಳಿಗೆ ಫೋನಾಯಿಸಿ ಬೆದರಿಸಿ ಹಫ್ತಾ ವಸೂಲಿ ಈ ಹಿಂದೂ ವೀರ ನಡೆಸುತ್ತಿದ್ದ. ಇಂಟರ್‌ನೆಟ್ ವಿಓಐಪಿ ತಂತ್ರಜ್ಞಾನ ಬಳಕೆಯಿಂದ ಈತ ಹಫ್ತಾ ಕಾಲ್ ಮಾಡಿರುವ ಬಗ್ಗೆ ಪೊಲೀಸರಿಗೀಗ ಬಲವಾದ ಸಾಕ್ಷ್ಯಾಧಾರಗಳು ಸಿಕ್ಕಿದೆ.

ಹೇಗಿದೆ ಸಂಘಪರಿವಾರದ-ರಾಮಸೇನೆಯ ದೇಶಭಕ್ತಿ-ಹಿಂದೂತ್ವ ರಕ್ಷಣೆ ದಂಧೆ? ಪೊಲೀಸ್ ಮೂಲದ ಪ್ರಕಾರ, ಅತ್ತಾವರನ ಹಿಂದೂತ್ವದ ಹಫ್ತಾ ಪಾತಕ ಯಾವ ಲೆಕ್ಕವೂ ಅಲ್ಲ, ಈತನಿಗಿಂತ ದೊಡ್ಡ ಪಾಪಿ ಇನ್ನೂ ಮೂವರು ಹಿಂದೂ ಡಾನ್‌ಗಳು ಮಂಗಳೂರಲ್ಲಿದ್ದಾರಂತೆ. ಇವರೆಲ್ಲಾ ಸಂಘ ಪರಿವಾರದ ಒಂದಲ್ಲ ಒಂದು ಛದ್ಮವೇಷಧಾರಿಗಳೇ! ಇವರಿಗೆಲ್ಲಾ ಭೂಗತ ಲೋಕದ ಸ್ನೇಹ ಸಂಬಂಧವಿದೆ. ಆ ಮೂಲಕವೇ ಈ ಹಿಂದೂ ಮುಂದಾಳುಗಳು ದೇಶವಿರೋಧಿ ದಂಧೆ ಮಾಡಿದ್ದಾರಂತೆ.

ಇನ್ನಾದರೂ ಕರಾವಳಿಯ ಶೂದ್ರರು ಹಿಂದೂತ್ವದ ಹರಾಮಿಗಳ ಮುಖವಾಡಕ್ಕೆ ಬಲಿ ಬೀಳುವುದು ಬಿಟ್ಟಾರಾ?!

● ನಹುಶ


ರೌಡಿ ಅತ್ತಾವರನ ಕಾಮ-ಕಾವಿ ಖಯಾಲಿ!!

[illegible] ... ರಾಜ್ಯ ಸಹ ಸಂಚಾಲಕ ... [illegible] ... ಪೋಲಿ-ಪುಂಡರಿಗೆ ... [illegible] ...!!

[illegible] ...ನಲ್ಲಿ ಕನಿಷ್ಠ ಮೂವತ್ತು ಮಂದಿ ಮಂಗಳೂರು ಭಾಗದ ಬಿಲ್ಡರ್-ಬಿಸಿನೆಸ್‌ಮನ್‌ಗಳ ಫೋನ್ ನಂಬರುಗಳು [illegible] ಕಂಡುಬಂದಿವೆ. ಅವರ ಪೂರ್ಣ ವಿಳಾಸವೂ ಅದರಲ್ಲಿದೆ. ಆತನ ಲ್ಯಾಪ್‌ಟ್ಯಾಪ್‌ನಲ್ಲಿ ನೀಲಿಚಿತ್ರಗಳ ತುಣುಕುಗಳೇ ತುಂ... [illegible] ಬಳಸುವ ಐದ್ರೈದು ಪೆನ್ ಡ್ರೈವ್‌ಗಳಲ್ಲಿ ಸೆಕ್ಸ್ ವಿಡಿಯೋಗಳನ್ನು ಅತ್ತಾವರ ಸಂಗ್ರಹಿಸಿದ್ದಾನೆ. ಸದಾ [illegible]

ಆದರೆ ಅತ್ತಾವರನ 'ಗುರು' ... [illegible] ... ಮುತಾಲಿಕನ ವ್ಯರ್ಥಾಲಾಪ ಕಂಡು ಮಂಗಳೂರಿಗರು "ಯಥಾ ಗುರು ತಥಾ ಶಿಷ್ಯ" ಎಂದು ಮುಸಿ-ಮುಸಿ ನಗುತ್ತಿದ್ದಾರೆ.



ಇಂದಿರಾ ಲಂಕೇಶರಿಂದ ಪುಸ್ತಕಗಳ ಬಿಡುಗಡೆ



ವೈದೇಹಿ ಅವರಿಂದ 'ಲಂಕೇಶ್-75' ಉದ್ಘಾಟನೆ



ಸಮಾರೋಪ ಸಮಾರಂಭದಲ್ಲಿ ದೇವನೂರು, ಗೌರಿ ಮತ್ತು ಪಾರ್ವತೀಶ


ಬಂಜಗೆರೆ ಜಯಪ್ರಕಾಶ್ ಮತ್ತು ಕೆ. ಮರುಳಸಿದ್ದಪ್ಪ


ಕಟ್ಪಾಡಿ, ಸೋಮಯಾಜಿ ಮತ್ತು ರಘುನಂದನ


ಕವಿತಾ ಮತ್ತು ಪ್ರಕಾಶ್ ರೈರಿಂದ ಅತನು ಘೋಷ್ ಅವರಿಗೆ 'ಲಂಕೇಶ್ ಚಿತ್ರ ಪ್ರಶಸ್ತಿ' ಪ್ರದಾನ


ಕಾರ್ಯಕ್ರಮದಲ್ಲಿ ಜನ


ಕಟ್ಪಾಡಿ ಮತ್ತು ಎಚ್.ಎಲ್. ಕೇಶವಮೂರ್ತಿ

ಲಂಕೇಶ್-75

'ಲಂಕೇಶ್' ಮರಳಿ ಮರಳಿ ಬರುತಿದೆ ಹೊಸತು ಹೊಸತು ತರುತಿದೆ

"ಏನೇನೆಲ್ಲಾ ಹೊಸದು ಚಿಗುರುತ್ತಿದೆ...!"

-ಮೊನ್ನೆ ಮಾರ್ಚ್ 6, 7ರಂದು ಬೆಂಗಳೂರಿನಲ್ಲಿ ನಾವು-ನೀವೆಲ್ಲಾ ಸೇರಿ ನಡೆಸಿದ ಲಂಕೇಶ್-75ರ ಸಮಾವೇಶದ ಸಾರಾಂಶವಿದು.

ಚರ್ಚೆ, ಭಾಷಣಗಳು, ಭಾಗಿಯಾಗಿದ್ದವರ ಹುಮ್ಮಸ್ಸು ಇದೆಲ್ಲದರಿಂದ ಪಡೆದ ಹೊಸ ಸ್ಫೂರ್ತಿ. ಹೊಸ ಪುಸ್ತಕಗಳು... ಹೌದು... ಏನೇನೋ ಹೊಸತು ಚಿಗುರುತ್ತಿದೆ. ಎಂಬ ದಟ್ಟಭಾವನೆ ಮೂಡಿಸಿದ ಸಮಾವೇಶವದು. ಸಾಹಿತ್ಯ, ರಾಜಕೀಯ, ತತ್ವ-ಸಿದ್ಧಾಂತಗಳ, ಜನಪರ ಕಾಳಜಿ-ಹೋರಾಟಗಳ ಬಗ್ಗೆ ಎರಡೂ ದಿನ ಚೆನ್ನಾದ ವಿಚಾರ ಮಂಥನ ಆಯಿತು. ಗದಗ ಸಾಹಿತ್ಯ ಸಮ್ಮೇಳನ ಮುಗಿದ ಬೆನ್ನಲ್ಲೇ, ಹಂಪಿಯ ಕನ್ನಡದ ವಿವಿ ಭೂ ಪರಭಾರೆಯ ವಿವಾದ ಇನ್ನೂ ನಡೆದಿರುವಾಗಲೇ ಗೋಹತ್ಯೆ ನಿಷೇಧ ಕಾನೂನು ಇನ್ನಿತರ ವಿಚಾರಗಳು ಆವರಿಸಿಕೊಂಡಿದ್ದಾಗಲೂ, ಜನರ ಗಮನ ಅತ್ತ-ಇತ್ತ ಸರಿದಾಡುತ್ತಿದ್ದಾಗಲೂ 'ಲಂಕೇಶ್-75' ಕಾರ್ಯಕ್ರಮ ಅಭೂತಪೂರ್ವವಾಗಿ ನಡೆದು ಯಶಸ್ವಿಯಾಯಿತು.

ಹಿರಿಯ ವಿಮರ್ಶಕ, ಚಿಂತಕ ಪ್ರೊ. ಕಿ.ರಂ.ನಾಗರಾಜ, ಡಾ.ಎಂ.ಎಸ್. ಆಶಾದೇವಿಯವರ ಸಲಹೆ ಸೂಚನೆ ಪಡೆದು ಲಂಕೇಶ್ ಪತ್ರಿಕಾ ತಂಡ ರೂಪಿಸಿದ್ದ ಕಾರ್ಯಕ್ರಮಗಳ ಬೆಂಬಲಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯೂ ಬಂದು ಭಾಗಿಯಾಯಿತು. ಅಕಾಡೆಮಿಯ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ಹಾಗೂ ದಕ್ಷಿಣ ಭಾರತ ಪ್ರಾದೇಶಿಕ ಕಾರ್ಯದರ್ಶಿ ಗುಣಶೇಕರನ್ ನೀಡಿದ ಬೆಂಬಲ, ಸಹಕಾರ ಹಾಗೂ ಸಹಭಾಗಿತ್ವದಿಂದ ಕಾರ್ಯಕ್ರಮಕ್ಕೆ ಇನ್ನಷ್ಟು ಬಲ ಸಿಕ್ಕಿತು.

ಮಾರ್ಚ್ 6ರಂದು ಬೆಳಗ್ಗೆ **10-30**ಕ್ಕೆ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಉದ್ಘಾಟನಾ ಕಾರ್ಯಕ್ರಮ ಶುರುವಾಗುವ ವೇಳೆಗೆ ಭರ್ತಿ ಜನ. ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ ಮೈಸೂರು, ಹಾಸನ, ಮಂಗಳೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗಾ, ಬೀದರ್‌ನಿಂದ ಬಂದಿದ್ದ ಜನ. ಅಲ್ಲೊಂದು ಮಿನಿ ಕರ್ನಾಟಕದ ಛಾಪು ಮೂಡಿಸಿದ್ದರು. ಜೊತೆಗೆ ಹೈದರಾಬಾದ್ ಮತ್ತು ಚೆನ್ನೈನಿಂದಲೂ ಜನ ಬಂದಿದ್ದರು. ಸಮಾವೇಶದ ಸ್ವಾಗತ ಭಾಷಣ ಗುಣಸೇಕರನ್‌ರಿಂದ ಹಾಗೂ ಪ್ರಾಸ್ತಾವಿಕ ಮಾತು ಗೌರಿ ಲಂಕೇಶರಿಂದ. ನಂತರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತೆ ವೈದೇಹಿ ಉದ್ಘಾಟನಾ ಭಾಷಣ ಮಾಡಿದರು. ಕರ್ನಾಟಕದ ಬುದ್ಧಿ ಜೀವಿ ಸಾಹಿತಿಗಳಿಗಿರುವ ಜನಪರ ಕಾಳಜಿಗಳ ಪರಂಪರೆಯಂತೆಯೇ ವೈದೇಹಿಯವರೂ ಕೂಡ ಲಂಕೇಶ ಸಾಹಿತ್ಯ ಕೊಡುಗೆ ಹಾಗೂ ಹೊಸ ಲೇಖಕರನ್ನು ಅವರು ಉತ್ತೇಜಿಸಿ ಪೊರೆದ ಬಗ್ಗೆ ವಿವರಿಸಿ ನಂತರ ಸಾಮಾಜಿಕ ವಿಚಾರಗಳತ್ತ ಸಭೆಯ ಗಮನ ಸೆಳೆದರು. ಬಿಜೆಪಿ ಸರ್ಕಾರದ ಕೋಮುವಾದಿ ನೀತಿಗಳು, ಗಣಿಗಾರಿಕೆ, ಎಸ್‌ಇಝೆಡ್ ವಿಚಾರಗಳನ್ನು ಪ್ರಸ್ತಾಪಿಸಿದ ವೈದೇಹಿಯವರು ಜನ ಸಂಘಟಿತ ರಾಜಕೀಯ ಶಕ್ತಿಯಾಗಿ ರೂಪುತಳೆಯಬೇಕಾದ ಅನಿವಾರ್ಯತೆ ಕುರಿತು ತಮ್ಮ ದಿಟ್ಟ ಅನಿಸಿಕೆಗಳನ್ನು ಹೇಳಿದರು.

ಲಂಕೇಶ್ ಪ್ರಕಾಶನದ ಹನ್ನೆರಡು ಹೊಸ ಪುಸ್ತಕಗಳ ಬಿಡುಗಡೆ ಇಂದಿರಾ ಲಂಕೇಶರಿಂದ ಆದನಂತರ ಪ್ರೊ.ಕಿ.ರಂ.ನಾಗರಾಜರಿಂದ **Key Note Address.** ಲಂಕೇಶರ ಒಟ್ಟಾರೆ ಬರವಣಿಗೆಯ ಅಗಾಧತೆ ಹಾಗೂ ವೈವಿಧ್ಯತೆಯನ್ನು ಕುರಿತು ಕಿರಂ ಮಾತನಾಡಿದರು. ಲಂಕೇಶರ ಸೃಜನಶೀಲ ಬರವಣಿಗೆಯಲ್ಲಿನ ಸಂಚಾರಿ ಭಾವವು ಇಡೀ ಕನ್ನಡ ಸಾಹಿತ್ಯವನ್ನು ಅದರ ಏಕತಾನತೆಯಿಂದ ಹೇಗೆ ಬಿಡುಗಡೆಗೊಳಿಸಿ ಹೊಸತನ ತಂದಿತೆಂಬುದನ್ನು ನಿರೂಪಿಸಿದ ಕಿರಂ ಲಂಕೇಶರೊಂದಿಗಿನ ತಮ್ಮ ದೀರ್ಘಕಾಲದ ಒಡನಾಟದ ಹಲವು ಘಟನೆ, ಸಂದರ್ಭಗಳನ್ನು ವಿವರಿಸಿ ಲಂಕೇಶರ ವ್ಯಕ್ತಿತ್ವದ ಅನೇಕ ಆಯಾಮಗಳನ್ನೂ ಹೃದಯಸ್ಪರ್ಶಿಯಾಗಿ ತೆರೆದಿಟ್ಟರು.

ಅಲ್ಲಿಂದಾಚೆಗೆ ಲಂಕೇಶರ ಕಾವ್ಯ, ನಾಟಕ, ವಿಮರ್ಶೆ, ಕಾದಂಬರಿ ಕುರಿತ ಸಾಲುಸಾಲು ಗೋಷ್ಠಿಗಳು....

ಲಂಕೇಶರ ಕಾವ್ಯ ಕುರಿತು ಡಾ.ಬಂಜಗೆರೆ ಜಯಪ್ರಕಾಶ್ ಹಾಗೂ ಸೂಕ್ಷ್ಮತೆಗಳ ಬಗ್ಗೆ ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ವಿಷಯ ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಕೆ.ಮರುಳಸಿದ್ದಪ್ಪ ಲಂಕೇಶರೊಂದಿಗಿನ ತಮ್ಮ ಒಡನಾಟ ನೆನಪಿಸಿಕೊಳ್ಳುತ್ತಾ 'ನಾವು ಜಾತಿ ಚೌಕಟ್ಟನ್ನು ಹೇಗೆ ಪ್ರಜ್ಞಾಪೂರ್ವಕವಾಗಿ ಮುರಿದು ಬೆಳೆಯಬೇಕಿದೆ' ಎಂಬ ಬಗ್ಗೆ ಕೆಲ ಉದಾಹರಣೆಗಳೊಂದಿಗೆ ವಿವರಿಸಿದರು.

ಲಂಕೇಶ್ ಮತ್ತು ಕನ್ನಡ ಸಾಹಿತ್ಯ ಪರಂಪರೆಯ ಮುಂದುವರೆದ ಎರಡನೇ ಗೋಷ್ಠಿಯಲ್ಲಿ ಪ್ರೊ.ವಿ.ಎಸ್.ಶ್ರೀಧರ ಲಂಕೇಶರ ಕಾದಂಬರಿಗಳ ಬಗ್ಗೆ, ರಘುನಂದನ ಲಂಕೇಶರ ನಾಟಕಗಳ ಬಗ್ಗೆ, ಪಟ್ಟಾಭಿರಾಮ ಸೋಮಯಾಜಿ ಲಂಕೇಶರ ಸಾಹಿತ್ಯಕ ಬರಹಗಳ ಬಗ್ಗೆ ಹಾಗೂ ಕೆ.ಫಣಿರಾಜ್ ಲಂಕೇಶರ ರಾಜಕೀಯ ಚಿಂತನೆಗಳ ಬಗ್ಗೆ ಚರ್ಚಿಸಿದರು. ಅಧ್ಯಕ್ಷತೆ ವಹಿಸಿದ್ದ ಫಕೀರ್ ಮಹಮ್ಮದ್ ಕಟ್ಪಾಡಿ ಲಂಕೇಶ್ ಹೇಗೆ ಒಂದಿಡೀ ಸಮುದಾಯದ ಕಾಳಜಿಗಳನ್ನು ಪ್ರತಿನಿಧಿಸಿದ್ದರೆಂಬುದನ್ನು ಹೇಳಿದರು.

ಮೊದಲ ದಿನದ ಗೋಷ್ಠಿಗಳು ಕೊನೆಗೊಂಡಿದ್ದು 'ಲಂಕೇಶ್ ಮತ್ತು ನಾನು' ಎಂಬ ಅನಿಸಿಕೆಗಳಲ್ಲಿ, ಪತ್ರಿಕೆಯ ಅಂಕಣಕಾರ ಬಿ.ಚಂದ್ರೇಗೌಡ ಮಾತನಾಡಿ ಲಂಕೇಶರ ಮಾನವೀಯ ಗುಣ, ತಮಾಷೆ, ಹುಡುಗಾಟದ ಸ್ವಭಾವ ಕುರಿತು ಅನೇಕ ಪ್ರಸಂಗಗಳನ್ನು ದಮನಿತರಿಗೆ ಧೈರ್ಯ ತುಂಬಿದ, ಪ್ರಶ್ನಿಸುವುದನ್ನು ಕಲಿಸಿದ ಬಗ್ಗೆ ಹೇಳಿದರು. ಹೊಸ ತಲೆಮಾರಿನ ಲೇಖಕಿ ಶಿವಮೊಗ್ಗದ ಕೆ.ಅಕ್ಷತಾ ಅರ್ಥಗರ್ಭಿತವಾಗಿ ಮಾತನಾಡಿದರು. ಅವರಿಗೆ ಲಂಕೇಶ್ ಸಿಕ್ಕ ಹಾಗೂ ಸಿಗದಿದ್ದ ವಿದ್ಯಮಾನಗಳು ಕರ್ನಾಟಕದ ಸಾವಿರಾರು ಯುವಜನತೆಯ ಅನಿಸಿಕೆಗಳೇ ಆಗಿದ್ದವೆಂಬುದು ಖಚಿತ. ಕತೆಗಾರ ಸರ್ಜಾಶಂಕರ ಹರಳಿಮಠ ತಾನು ಜಾತಿವಾದಿಯೂ ಆಗದಂತೆ, ಕೋಮುವಾದಿ ಅಥವಾ ನಕ್ಸಲೈಟ್ ಆಗಿಬಿಡಬಹುದಾಗಿದ್ದ **Extreme**ಗಳಿಂದ ಲಂಕೇಶ್ ತಮ್ಮನ್ನು ಪಾರು ಮಾಡಿದ ಬಗೆ ವಿವರಿಸಿದ್ದು ಸೊಗಸಾಗಿತ್ತು. ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕಲ್ಕುಳಿ ವಿಠಲ ಹೆಗಡೆ ಮಲೆನಾಡಿನಲ್ಲಿ ತಮ್ಮ ಹೋರಾಟದ ಹಿಂದಿನ ದಿನಗಳ ನೆನಪು ಮಾಡಿಕೊಳ್ಳುತ್ತಾ ಅವುಗಳಿಗೆ ಲಂಕೇಶರು ದನಿಗೂಡಿಸಿದ್ದನ್ನು ವಿವರಿಸಿದರು. ಇವತ್ತಿನ ಕರ್ನಾಟಕದ ಭಯಾನಕ ಸಂದರ್ಭವನ್ನೂ ಪ್ರಸ್ತಾಪಿಸಿ 'ಹೋರಾಟಗಾರರು ಜೈಲಿನಲ್ಲಿದ್ದಾರೆ. ಉಳಿದವರು ಜಾಮೀನಿನ ಮೇಲೆ ಹೊರಗಿದ್ದಂತೆ ಭಾಸವಾಗುತ್ತಿದೆ' ಎಂದ ವಿಠಲ್ ಹೆಗಡೆ ಮಾತು ಎಲ್ಲರ ಮನಸ್ಸಿನಲ್ಲಿ ಉಳಿದುಬಿಟ್ಟಿತು.

ಮಾರ್ಚ್ 7ರ ಬೆಳಗ್ಗೆ 'ಲಂಕೇಶ್ ಬಗ್ಗೆ ಕೆಲವು ಅನಿಸಿಕೆಗಳು' ಗೋಷ್ಠಿಯಲ್ಲಿ ಕವಿ ಸುಬ್ಬು ಹೊಲೆಯಾರ್ ನಿರೂಪಿಸಿದ್ದು ಲಂಕೇಶರ ಔದಾರ್ಯ ಹಾಗೂ ಮಾನವೀಯ ಗುಣಗಳನ್ನು ನಂತರ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕಿಸ್ಟ್)ದ ನಾಯಕ ಎಸ್.ವೈ.ಗುರುಶಾಂತ ಮಾತನಾಡಿ ಕರ್ನಾಟಕದ ಜನಪರ ಆಂದೋಲನಗಳನ್ನು ಹಾಗೂ ವೈಚಾರಿಕ ಕಾಳಜಿಗಳನ್ನು ಹೇಗೆ ಲಂಕೇಶ್ ತಮ್ಮ ಬದುಕು ಮತ್ತು ಬರಹಗಳ ಮೂಲಕ ಬಲಪಡಿಸಿದರೆಂಬುದನ್ನು ವಿವರಿಸಿದರು. ಲಂಕೇಶರಿಂದ ಅನೇಕ ಬಾರಿ ಸಕಾರಣವಾಗಿ ಹಾಗೂ ಕೆಲವು ಬಾರಿ ವಿನಾಕಾರಣವಾಗಿ ಟೀಕೆಗೆ ಗುರಿಯಾಗುತ್ತಿದ್ದ ಸಿಪಿಎಂ ಪಕ್ಷದ ಪ್ರತಿನಿಧಿಯಾಗಿ ಬಂದಿದ್ದ ಗುರುಶಾಂತ್, ತಮ್ಮ ಕಾಳಜಿ ಹಾಗೂ ಭಿನ್ನಾಭಿಪ್ರಾಯಗಳನ್ನು ಸಂಯಮಪೂರ್ಣ ಮಾತುಗಳಲ್ಲಿ ಹೇಳಿದ್ದು ಸಭಿಕರಿಗೆ ಇಷ್ಟವಾಯಿತು. ನಂತರ ಲಂಕೇಶ್ ಪತ್ರಿಕಾ ಬಳಗದ ಪಾರ್ವತೀಶ ಮಾತನಾಡಿ 'ಜೀವನಮೌಲ್ಯ, ಸಾಮಾಜಿಕ ಕಾಳಜಿಗಳು, ಸಿದ್ಧಾಂತ ಹಾಗೂ ರಾಜಕೀಯ ಹೋರಾಟ ಕುರಿತಂತೆ ತಮ್ಮ ಒಂದು ಕಣ್ಣು ತೆರೆಸಿದ ವ್ಯಕ್ತಿ ಲಂಕೇಶ್' ಎಂದರು. ಎಡಪಂಥೀಯ ಮಿಲಿಟೆಂಟ್ ಹೋರಾಟಗಳ ಅನುಭವ ತಮ್ಮ ಎರಡನೇ ಕಣ್ಣನ್ನೂ ತೆರೆಸಿತೆಂದ ಅವರು ಕರ್ನಾಟಕದ ಜನಪರ ದನಿಯಾಗಿದ್ದ ಲಂಕೇಶ್ ಹೇಗೆ ದುಷ್ಟ ವಿಗ್ರಹ ಭಂಜಕರಾಗಿದ್ದರೋ ಅದೇ ವೇಳೆಗೆ ಸಾವಿರಾರು ಉತ್ತಮ ಮನುಷ್ಯರ ವಿಗ್ರಹಗಳನ್ನು ಕೆತ್ತಿದ ಶಿಲ್ಪಿಯೂ ಆಗಿದ್ದರೆಂದರು.

ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಜಿ.ರಾಜಶೇಖರ್ ತಮ್ಮ ಲಿಖಿತ ಭಾಷಣ ಓದಿ ಕರ್ನಾಟಕದಲ್ಲಿ ಬೆಳೆಯುತ್ತಿರುವ ಕೋಮುವಾದದ ಭಯಾನಕ ಕೈಗಳ ಬಗ್ಗೆ ಅನೇಕ ಉದಾಹರಣೆಗಳ ಮೂಲಕ ವಿವರಿಸಿದರು. ಜೊತೆಗೆ ಲಂಕೇಶರ ಬರವಣಿಗೆಯಲ್ಲಿ ಕಂಡು ಬರುವ ವ್ಯವಸ್ಥೆಯ ವಿರೋಧಿ ನಿಲುವುಗಳನ್ನು ನಿರೂಪಿಸಿದರು. ಅದೇ ಗೋಷ್ಠಿಯಲ್ಲಿ ಮಾತನಾಡಿದ ಲಂಕೇಶರ ಒಡನಾಡಿ ಎಚ್.ಎಲ್.ಕೇಶವಮೂರ್ತಿ 'ಪ್ರಗತಿರಂಗ'ದ ಅನುಭವಗಳನ್ನೂ ಹಾಗೂ ಲಂಕೇಶ್ ತಮ್ಮ ಗೆಳೆಯರೊಂದಿಗೆ ಕರ್ನಾಟಕ ಪೂರ್ತಿ ಸುತ್ತಾಡುತ್ತಾ ಜನರಲ್ಲಿ ಪ್ರತಿಭಟಿಸುವ ಶಕ್ತಿ ತುಂಬಿದ್ದನ್ನು ನೆನೆದರು.

ಕವಿಗೋಷ್ಠಿ ಮತ್ತು ಚಂಪಾ



ಚಂಪಾ


ಮಾರ್ಚ್ 6ರ ಸಂಜೆ [illegible]



ಸೀತಾರಾಮ್



ಬಿ. ಚಂದ್ರೇಗೌಡ



ಬಂಜಗೆರೆ ಜಯಪ್ರಕಾಶ್


ಕೆ. ಫಣಿರಾಜ್


ಜಿ. ರಾಮಕೃಷ್ಣ


ಕಲ್ಕುಳಿ ವಿಠಲ ಹೆಗ್ಡೆ


ಡಾ. ವಾಸು


ಆಶಾದೇವಿ


ಗೌರಿ ಮತ್ತು ಅಗ್ರಹಾರ ಕೃಷ್ಣಮೂರ್ತಿ

ಲಂಕೇಶರ ಮುಗುಳ್ನಗೆ ನಮ್ಮೊಡನೆ ಇದೆ

'ಲಂಕೇಶ್-75' ಕಾರ್ಯಕ್ರಮದಲ್ಲಿ ದೇವನೂರು ಮಹಾದೇವ ಅವರ ಸಮಾರೋಪ ಭಾಷಣದ ಪಠ್ಯ

Lovely darlingಗೆ 75 ವರ್ಷ ಆಯ್ತು. ಯಾಕೆಂದರೆ ಲಂಕೇಶ್ ಲವ್ಲಿ ಲವ್ಲಿ ಲವ್ಲಿ ಡಾರ್ಲಿಂಗ್. ಈ ಮಾತನ್ನು ಪದೇ ಪದೇ ಬಳಸುತ್ತಿದ್ದೇನೆ. ಅವರ ಸಾರ್ಥಕತೆ, ಕಾಣಿಕೆ ನೆನಪಿಸುವ ಎಷ್ಟೆಷ್ಟೋ ಇವೆ. ಅವುಗಳನ್ನೆಲ್ಲಾ ಒಕ್ಕಡೆ ಇಟ್ಟು-ಸಂಕ್ರಾಂತಿ, ಗುಣಮುಖ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ ಮತ್ತು ಕವನಗಳನ್ನು ಕೂಡ ತೆಗೆದುಕೊಂಡರೆ – ಲಂಕೇಶ್ ಸಾಹಿತ್ಯದ ಎಲ್ಲೆಗಳನ್ನು ವಿಸ್ತರಿಸುವ ಸೃಷ್ಟಿಕರ್ತರಾಗಿ ನನಗೆ ಕಾಣುತ್ತಾರೆ. ಇವು ಕನ್ನಡಕ್ಕೆ ಬೆಲೆ ಹೆಚ್ಚಿಸಿದ ಕೃತಿಗಳು.

ತೇಜಸ್ವಿ ಅಥವಾ ರಾಮದಾಸ್, ಯಾರೋ ಒಬ್ಬರು ಇರಬೇಕು – ಲಂಕೇಶರನ್ನು ಲೇವಡಿ ಮಾಡುತ್ತಿದ್ದರು. ಏನಂತಾ? ಲಂಕೇಶ್ ಒಂದು 'ಹುಚ್ಚು ಫಿರಂಗಿ' ಅಂತ ಲೇವಡಿ ಮಾಡುತ್ತಿದ್ದರು. 'ಈ ಸಹವಾಸ, ಸಹವಾಸ ಅಲ್ಲಕಣ್ರಿ – ಎತ್ತಕಡೆಗೋ ಢಮಾರ್ ಅನ್ನಿಸಿಬಿಡುತ್ತೆ, ಗೊತ್ತಾಗಲ್ಲ' ಅಂತಿದ್ದರು. ಈ ಲೇವಡಿಯಲ್ಲಿ ಲಂಕೇಶರ ವ್ಯಕ್ತಿತ್ವವೂ ಇದೆ, ಸತ್ಯ ಕೂಡ ಇದೆ. ಲಂಕೇಶ್ ಒಂದು ಎನರ್ಜಿ ಆಗಿದ್ದು ಅದನ್ನು ಎತ್ತಕಡೆಗೋ ಢಮಾರ್ ಅನ್ನಿಸುತ್ತಿದ್ದರು. ಯಾಕೆಂದರೆ ಲಂಕೇಶ್ ತರ್ಕಾತೀತರಾಗಿದ್ದರು. ನೀವು ಇಂಗ್ಲಿಷ್‌ನಲ್ಲಿ –**unpredictable** ಅಂತೀರಲ್ಲ – ಆ ರೀತಿ ಲಂಕೇಶ ತರ್ಕಾತೀತರಾಗಿದ್ದರು.

ಇದನ್ನೇ ನಾನು ಬಹಳ ಹಿಂದೆ ತುಂಬಾ ಸಭ್ಯವಾಗಿ ಅವರ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯ ಮೊದಲನೆ ಆವೃತ್ತಿಗೆ ಬೆನ್ನುಡಿಯಲ್ಲಿ ಬರೆದಿದ್ದೆ. ನನಗೀಗ ನೆನಪಿರುವ ಮಟ್ಟಿಗೆ ಹೇಳುವುದಾದರೆ ಅದರಲ್ಲಿ "ಲಂಕೇಶರನ್ನು ಇಷ್ಟೇ ಎಂದು ಹೇಳಿ – ಅಂದರೆ ಕತೆಗಾರ, ಕಾದಂಬರಿಕಾರ, ಕವಿ, ನಟ ಇನ್ನೂ ಹತ್ತಾರು ಪಟ್ಟಕೊಟ್ಟು ಕಟ್ಟಿ ಕಟ್ಟುಗಾಜು ಹಾಕಿದರೆ ಅದು ನಮ್ಮ ಮೂರ್ಖತನವಾಗುತ್ತದೆ" ಎಂದು ಬರೆದಿದ್ದೆ. ತರ್ಕಾತೀತವಾದ, ಸೃಷ್ಟ್ಯಾತ್ಮಕತೆ ಅವರದ್ದಾಗಿತ್ತು.


ನನಗೀಗಲೂ ಒಂದು ತಮಾಷೆಯಾಗಿ ಕಾಣಿಸುತ್ತದೆ. ಏನಪ್ಪ ಅಂದರೆ ಇಷ್ಟೊಂದು ಎನರ್ಜಿಯಾಗಿದ್ದ ಲಂಕೇಶರ ಚೈತನ್ಯ ಯಾವಾಗ ಚಿಮ್ಮುತ್ತಿತ್ತು, ಉಕ್ಕುತ್ತಿತ್ತು, ಅಭಿವ್ಯಕ್ತಿಗೊಳ್ಳುತ್ತಿತ್ತು ಅಂದರೆ ಅವರ ಎದುರುಗಡೆ ಒಂದು ಎದುರಾಳಿ ಇರಬೇಕಾಗುತ್ತಿತ್ತು. ಅವರು, ಇವರು ಅಂತಲ್ಲ, ಒಂದು ಹುಲ್ಲುಕಡ್ಡಿ ಆದರೂ ಅವರ ಮುಂದೆ ನಿಂತು ತಲೆ ಕುಣಿಸಿ, ತೊಡೆ ತಟ್ಟಿದರೆ ಇವರ ಎನರ್ಜಿ ಜಾಸ್ತಿ ಆಗುತ್ತಿತ್ತು. ಇದು ಯಾಕೆ ಅಂತ ನನಗೆ ಈಗಲೂ ಅರ್ಥವಾಗಿಲ್ಲ.

ಯಾವುದೇ ಭಾಷೆಯ, ಯಾವುದೇ ಲೇಖಕರು ಬಹುತೇಕ ಬಾಲ್ಯವನ್ನೇ ಹೆಚ್ಚಾಗಿ ಬಂಡವಾಳ ಮಾಡಿಕೊಂಡಿರುತ್ತಾರೆ. ನಾನೂ ಸೇರಿದಂತೆ. ಆದರೆ ಲಂಕೇಶ್ ಇದಕ್ಕೆ ಹೊರತಾದ ಲೇಖಕರಾಗಿದ್ದರು, ಅಪರೂಪದ ಲೇಖಕರಾಗಿದ್ದರು. ಅವರು ಹೆಚ್ಚಾಗಿ ವರ್ತಮಾನದ ಲೇಖಕ ಆಗಿದ್ದರು.

ಒಂದು ತಮಿಳು ಹಾಡಿದೆ–ನಾಳೈ ನಮದೈ ಅಂತ. ಅಂದರೆ ನಾಳೆ ನಮ್ಮದು ಅಂತ. ಸಾಮಾನ್ಯವಾಗಿ ಹೋರಾಟಗಾರರು 'ನಾಳೆ ನಮ್ಮದು' ಅಂತ 'ನಾಳೆ'ಗಳಲ್ಲಿ ಅಂದರೆ **future**ನಲ್ಲಿ ಜೀವಿಸುತ್ತಿರುತ್ತಾರೆ. 'ಇಂದು' ಅಲ್ಲಿ ಅಂದರೆ '**present**'ನಲ್ಲಿ ಅವರು ಹೆಚ್ಚಾಗಿ ಜೀವಿಸುತ್ತಿರುವುದಿಲ್ಲ. ಹಾಗೇ 'ನಿನ್ನೆ ನಮ್ಮದು' ಅಂತ ಜೀವಿಸುವವರೂ ಇದ್ದಾರೆ. ಸಾಮಾನ್ಯವಾಗಿ ಮೂಲಭೂತವಾದಿಗಳು 'ನಿನ್ನೆ'ಗಳಲ್ಲಿ ಜೀವಿಸುತ್ತಿರುತ್ತಾರೆ. ಅವರು ಕೂಡ 'ಇಂದು' ಅಂದರೆ **present**ನಲ್ಲಿ ಜೀವಿಸುತ್ತಿರುವುದಿಲ್ಲ. ಅಂದರೆ 'ನಾಳೆ'ಗಳಲ್ಲಿ ಜೀವಿಸುತ್ತಿರುವ ಹೋರಾಟಗಾರರಿಗೆ ಕಾಲಲ್ಲಿ ಪಾದವಿರುವುದಿಲ್ಲ. ತುಂಬ ಕಷ್ಟಪಟ್ಟು ಅವರು ದುಡಿಯುತ್ತಿರುತ್ತಾರೆ. 'ನಿನ್ನೆ'ಗಳಲ್ಲಿ ಜೀವಿಸುವ ಮೂಲಭೂತವಾದಿಗಳ ಪಾದ ಹಿಂದಕ್ಕೆ ಇರುತ್ತದೆ. ಆಂದರೆ ಅವರು ಹಿಂದಕ್ಕೆ ಚಲಿಸುತ್ತಿರುತ್ತಾರೆ.

ಲಂಕೇಶರಿಗೆ ಈ ಗೋಳುಗಳು ಬೇಕಿರಲಿಲ್ಲ. 'ಈ ಕ್ಷಣದಲ್ಲೇ ಇಡಿಯಾಗಿ ಇರುವುದೇ ಧ್ಯಾನ' ಅಂತ ಎಲ್ಲೋ ಓದಿದ ನೆನಪು. ಇದು ನಿಜವೇ ಆಗಿದ್ದರೆ ಲಂಕೇಶ್ ಧ್ಯಾನಿಯಾಗಿದ್ದರು. ಇದೇ ಮಾತನ್ನು ಬಹಳ ಹಿಂದೆ – ಆಂದೋಲನ ಪತ್ರಿಕೆಯ ವಿಸ್ತರಣೆ ಸಂದರ್ಭದಲ್ಲಿ ಹೇಳಿದ್ದೆ – ಪತ್ರಿಕೋದ್ಯಮ ಕ್ಷೇತ್ರದಲ್ಲಿ ರಾಜಶೇಖರ ಕೋಟಿ ಒಂಟಿ ಕಾಲಿನ ತಪಸ್ವಿಯಾದರೆ ಲಂಕೇಶ್ ಧ್ಯಾನಿಯಂತೆ. ಈ ತಪಸ್ಸು ಮತ್ತು ಧ್ಯಾನದಿಂದ ಈ ಇಬ್ಬರೂ ಯಶಸ್ವಿಯಾಗಿ ಅನೇಕ ಪತ್ರಿಕೆಯ ಹುಟ್ಟಿಗೂ ಸಾಹಸಗಳಿಗೂ ಪ್ರೇರಕರಾಗಿದ್ದಾರೆ. ಅದೇ ಸಂದರ್ಭದಲ್ಲಿ ಈ ಧ್ಯಾನಿ ಮತ್ತು ತಪಸ್ವಿಗಳೊಂದಿಗೆ ಸ್ಪರ್ಧೆ ಮಾಡುವವರು ಕೂಡ ಇವರನ್ನು ಗುರುವಾಗೇ ಸ್ವೀಕರಿಸಬೇಕು ಎಂದು ಹೇಳಿದ್ದೆ. ಈ ಕೃತಜ್ಞತೆಯು ಪತ್ರಿಕೋದ್ಯಮ ಕ್ಷೇತ್ರಕ್ಕೆ ಇರಬೇಕಾಗಿದೆ. ಏಕೆಂದರೆ ಅಸಾಧಾರಣತೆಯನ್ನು ತಮ್ಮೊಳಗೆ ಹುದುಗಿಸಿಕೊಂಡವರಿಗೆ ಮಾತ್ರ ಯಶಸ್ಸು ಸಿಗುತ್ತದೆ.

ಮೊದಲೇ ಹೇಳಿದೆ, ಲಂಕೇಶರದು ವರ್ತಮಾನದ ಪ್ರಜ್ಞೆ ಆಗಿದ್ದರು. ತೀಕ್ಷ್ಣತೆಯ ಎಚ್ಚರದ ಪ್ರಜ್ಞೆ ಅವರದ್ದು. ಹಾಗಾಗಿ ಅವರು ತನ್ನ ಕಾಲದ ಸಮುದಾಯವನ್ನು ಎಚ್ಚರದಿಂದ ಇಡುತ್ತಿದ್ದರು, ಪ್ರಭಾವಿಸುತ್ತಿದ್ದರು. ಈ ಬಗೆಯಲ್ಲಿ ವರ್ತಮಾನದ ತಲ್ಲಣಗಳಿಗೆ ಪ್ರತಿಕ್ರಿಯಿಸಿ ಪ್ರಭಾವಿಸಿದ ಲೇಖಕ ಕನ್ನಡದಲ್ಲಿ ಇವರೊಬ್ಬರೇ. ಪತ್ರಿಕೋದ್ಯಮದಲ್ಲಿ ಇವರ ಯಾವುಯಾವುದೋ ಕಾಣಿಕೆಯನ್ನು ಗುರುತಿಸುತ್ತಾರೆ ಆದರೆ ಒಂದು ಕಾಣಿಕೆಯನ್ನು ಗುರುತಿಸುವುದಿಲ್ಲ. ಆದ್ದರಿಂದ ಉಳಿದಿದ್ದನ್ನು ಬಿಟ್ಟು ಇದೊಂದನ್ನು ಹೇಳುತ್ತೇನೆ.



ಸಮಾಜದಲ್ಲಿ ದಲಿತರನ್ನು ಅವಮಾನಿಸಿ ನೋಡುತ್ತಾರೆ, ಮುಸ್ಲಿಮರನ್ನು ಅನುಮಾನಿಸಿ ನೋಡುತ್ತಾರೆ. ಲಂಕೇಶ್ ಇದನ್ನು ಮೀರಿ ನೋಡುವ ಒಂದು ಆರೋಗ್ಯಕರವಾದ ದೃಷ್ಟಿಕೋನವನ್ನ ನಾಡಿಗೆ ಕೊಟ್ಟಿದ್ದಾರೆ. ಇದು ಸಾಮಾನ್ಯ ಕೊಡುಗೆಯಲ್ಲ ಅಂದುಕೊಂಡಿದ್ದೇನೆ.

ಒಂದು ಜೋಕ್ ಹೇಳಿ (ಯಾಕೆಂದರೆ ತುಂಬಾ ಸೀರಿಯಸ್ ಆಯ್ತು ನೀವು ಯಾರೂ ನಗುತ್ತಿಲ್ಲ) ಮತ್ತೆ ವರ್ತಮಾನದ ತಲ್ಲಣಗಳತ್ತ ಬರುತ್ತೇನೆ.

ಲಂಕೇಶ್ ಯಾವಾಗಲೂ ಜಯಮಾಲರನ್ನು 'ನನ್ನ ತಮ್ಮ' ಎಂದು ಕರೀತಾ ಇದ್ದರು. ನನಗೆ ಚೇಷ್ಟೆ ಮಾಡಬೇಕು ಅನಿಸಿತು. ಪತ್ರಿಕೆಯ ಪ್ರಶ್ನೋತ್ತರ ವಿಭಾಗಕ್ಕೆ ಒಂದು ಹುಡುಗಿ ಹೆಸರಲ್ಲಿ ಒಂದು ಪ್ರಶ್ನೆ ಕಳಿಸಿದೆ. ಆದರೆ ನಾನೇ ಈ ಪ್ರಶ್ನೆ ಕಳಿಸಿದೆ ಎಂದು ಜೊತೆಗೆ ಸೇರಿಸಿದ್ದೆ.

ಪ್ರಶ್ನೆ ಈ ರೀತಿ ಇತ್ತು: ಜಯಮಾಲರನ್ನು ತಾವು ತಮ್ಮ ಎಂದು ಕರೆಯುವಂತೆ ನಾನು ನಿಮ್ಮನ್ನು 'ಲಂಕೇಶ್ ಅತ್ತೆ' ಅಂತ ಕರೆಯಬಹುದೇ?

ನಾನು ಈ ಪ್ರಶ್ನೆ ಬಹುಮಾನಿತ ಪ್ರಶ್ನೆಯಲ್ಲಿ ಆಚ್ಚಾಗಿ ನನಗೆ ಹಣದ ಬಹುಮಾನ ಕೂಡ ಬರುತ್ತೆ ಅಂತ ನಿರೀಕ್ಷೆಯಲ್ಲಿದ್ದರೆ ಲಂಕೇಶ್ ಆ ಪ್ರಶ್ನೆಯನ್ನೇ ರೂಪಾಂತರಿಸಿ ಬಿಟ್ಟಿದ್ದರು.

ಅವರು ರೂಪಾಂತರಿಸಿದ ಪ್ರಶ್ನೆ ಹೀಗಿತ್ತು: ನಾನು ನಿಮ್ಮನ್ನು ಆ್ಯಂಟಿ ಎಂದು ಕರೆಯಬಹುದೇ?

ಉತ್ತರ : ಆ್ಯಂಟಿ ಎಂದು ಕರೆಯಿರಿ, ಆದರೆ ಯಾಂಡಿ ಆಗದಿದ್ದರೆ ಸಾಕು.

ಹೀಗೆ ಲಂಕೇಶ್ ನನ್ನ ಪ್ರಶ್ನೆಯನ್ನೇ ಮುಚ್ಚಿಹಾಕಿ ಬಿಟ್ಟಿದ್ದರು. ನಾನು 'ಲಂಕೇಶ್ ಅತ್ತೆ' ಎಂಬುದನ್ನು ಲಂಕೇಶ್ ಪತ್ರಿಕೆ ಮೂಲಕ ಎಲ್ಲೆಡೆ ಬಿತ್ತನೆ ಮಾಡಬೇಕೆಂದಿದ್ದೆ. ಆದರೆ ಲಂಕೇಶ್ ಪತ್ರಿಕೆಯ ಸಿಬ್ಬಂದಿಯ ಮೇಲೆ ನನಗೆ ವಿಶ್ವಾಸ ಬರಲಿಲ್ಲ. ಕಚೇರಿ ಸಿಬ್ಬಂದಿ ನಾಡಿನಾದ್ಯಂತ ಇದನ್ನು ಬಿತ್ತನೆ ಮಾಡಿ ಎದುರಾಳಿ ಮಾಧ್ಯಮಗಳು ಇದನ್ನೇ ಅಗ್ಗದ ರಂಜನೆ, ವ್ಯಂಗ್ಯಚಿತ್ರ ಮಾಡಿಬಿಡಬಹುದು. ಲಂಕೇಶ್‌ಗೆ ಇದರಿಂದ ಕಸಿವಿಸಿ ಆಗಬಹುದು ಎಂಬ ಆತಂಕದಿಂದ ಆಗ ಸುಮ್ಮನಾದೆ.


ಮತ್ತೆ ತಲ್ಲಣಕ್ಕೆ ಬಂದರೆ–ಲಂಕೇಶ್ ಮೂಲತಃ ತಲ್ಲಣಿಸುವ ಜೀವ. ಅವರು ತೀರಿಕೊಂಡಮೇಲೆ ನಾಡಿನ ತಲ್ಲಣ ಯದ್ವಾತದ್ವಾ ಹೆಚ್ಚಾಗಿ ಬಿಟ್ಟಿವೆ. ಲಂಕೇಶ್ ಇದ್ದಾಗ ಯಾರೇ ಏನೇ ಮಾಡಿದರೂ ಎರಡೆರಡು ಸಲ ಯೋಚನೆ ಮಾಡಿ ಮಾಡಬೇಕಾದ ಭಯವನ್ನು ಅವರ ಇರುವಿಕೆ ಉಂಟುಮಾಡಿತ್ತು. ಈ ಭಯದಿಂದಲೇ ಒಳ್ಳೆದೂ ಆಗಿದೆ, ಕೆಟ್ಟದ್ದೂ ಆಗಿದೆ. ಆದರೆ ಆಗಿರುವ ಒಳ್ಳೆಯದರ ಮುಂದೆ ಕೆಟ್ಟದ್ದು ನಗಣ್ಯ. ಲಂಕೇಶ್ ಇದ್ದಿದ್ದರೆ ಹಂಪಿಯಲ್ಲಿ ಭೂತಕಾಲದ ಸ್ಮಶಾನ ನಿರ್ಮಿಸಲು ಹೊರಟಿರುವ ಸರ್ಕಾರ ಸ್ವಲ್ಪ ಕಾಲ ತಡೆದು ನಿರ್ಧಾರ ತೆಗೆದುಕೊಳ್ಳುತ್ತಿತ್ತೇನೋ. ಮತಾಂತರ ನಿಷೇಧ ಕಾನೂನು ತರುವ ಸರ್ಕಾರದ ಬಯಕೆ ಸ್ವಲ್ಪವಾದರೂ ಅಳುಕುತ್ತಿತ್ತೇನೋ. ಈ ಸರ್ಕಾರಕ್ಕೆ ಏನಾಗಿದೆ ಅಂತ ನನಗೆ ಅರ್ಥವಾಗುತ್ತಿಲ್ಲ. ಒಂದು ಜಾತಿಯಿಂದ ಇನ್ನೊಂದು ಜಾತಿಗೆ ವರ್ಗಾವಣೆ ಮಾಡಿ ಅಂತ ನಾವು ಅರ್ಜಿ ಹಾಕಿದರೆ – ಓರ್ವ ಶೂದ್ರ ನಾನು ಬ್ರಾಹ್ಮಣ ಆಗಬೇಕೆಂದು ಅರ್ಜಿ ಕೊಟ್ಟರೆ – ಸರ್ಕಾರ ಏನು ಮಾಡುತ್ತೆ? ಇದು ತನ್ನ ವ್ಯಾಪ್ತಿಗೆ ಬರಲ್ಲ ಅನ್ನುತ್ತೆ. ತನ್ನ ವ್ಯಾಪ್ತಿಗೆ ಬರದಿರುವುದಕ್ಕೆ ಇವರು ಯಾಕೆ ಕೈ ಹಾಕುತ್ತಿದ್ದಾರೆ? ಇವರ ಉದ್ದೇಶವಾದರೂ ಏನು? ಕೆಲ ಮಠಾಧಿಪತಿಗಳು, ಸ್ವಾಮಿಗಳು ಮತಾಂತರ ನಿಷೇಧಕ್ಕೆ ಒತ್ತಾಯಿಸುತ್ತಿದ್ದಾರೆ. ಆದರೆ ಅದಕ್ಕೂ ಮೊದಲೆ ಅವರು ಒಂದು ನಿರ್ಧಾರ ತೆಗೆದುಕೊಳ್ಳಬೇಕೆ. ಸ್ವಜಾತಿ ಮದುವೆ ಧರ್ಮಬಾಹಿರ ಎಂದಾಗಲಿ ಅಥವಾ ಸರ್ವ ಜಾತಿಗೂ ತಮ್ಮ ಮಠದಲ್ಲಿ ಪರ್ಯಾಯ ಸ್ಥಾನಮಾನ ಇದೆಯೆಂದಾಗಲಿ ಅವರು ನಿರ್ಧರಿಸಿದರೆ ಮತಾಂತರವನ್ನು ನಿಷೇಧ ಮಾಡಲಿ ಎಂದು ಹೇಳುವ ಹಕ್ಕು ಅವರಿಗೆ ಬರುತ್ತದೆ. ಇಲ್ಲವೆಂದರೆ ಆ ಹಕ್ಕು ಅವರಿಗೆ ಬರುವುದಿಲ್ಲ. ಆದರೆ ಅಂತಹ ನಿರ್ಧಾರ ತೆಗೆದುಕೊಳ್ಳದೇ ಮತಾಂತರ ಬೇಡ ಎಂದು ಹೇಳಿ ನಮಗೆ ತುಂಬಾ ಕಷ್ಟ ಕೊಡುತ್ತಿದ್ದಾರೆ. ಎಂತಹ ಕಷ್ಟವೆಂದರೆ ನಿಮ್ಮ ಮಠಾಧಿಪತಿಗಳನ್ನು ಮನುಷ್ಯರು ಎಂದು ಕರೆಯಲು ಕಷ್ಟವಾಗುತ್ತಿದೆ. ಹಾಗೆಯೇ ಪ್ರೇತಗಳು ಎಂದು ಕರೆಯುವುದಕ್ಕೆ ಮನಸ್ಸಾಗದು. ಇಂತಹ ಇಕ್ಕಟ್ಟಿನಲ್ಲಿ ನಮ್ಮನ್ನು ಸಿಗಿಸಬಾರದೆಂದು ಮಠಾಧಿಪತಿಗಳಿಗೆ ನಾನು ಪ್ರಾರ್ಥಿಸುವೆ.

ಲಂಕೇಶ್ ಇದ್ದಿದ್ದರೆ 'ಗೋಹತ್ಯೆ ನಿಷೇಧ' ಎಂಬ ನರಹತ್ಯೆಯ ಹಿಡನ್ ಅಜೆಂಡಾದ ಕಾನೂನು ಬಗ್ಗೆ ಹೀಗೆ ಪ್ರತಿಕ್ರಿಯಿಸುತ್ತಿದ್ದರು ಎಂದು ಒಂದುಕ್ಷಣ ಲಂಕೇಶರನ್ನು ಆವಗಾಯಿಸಿಕೊಂಡರೆ ನನಗೆ ಹೀಗೆ ಅನ್ನಿಸಿತು – ಲಂಕೇಶ್ ಗೋಮಾಂಸ ಸೇವನೆಗೆ ವಾಜಪೇಯಿ ಖಾದ್ಯ ಎಂದು ಹೆಸರಿಡುತ್ತಿದ್ದರು. ಅದನ್ನು ರಾಜ್ಯದ ತುಂಬಾ ಪ್ರಸಿದ್ಧಿಗೆ ತರುತ್ತಿದ್ದರು. ಸಮಸ್ಯೆ ಅರ್ಧ ಬಗೆಹರಿಯುತ್ತಿತ್ತು. ಯಾಕೆಂದರೆ ಆ ಹೆಸರಲ್ಲಿ ಅರ್ಥಪೂರ್ಣತೆಯೂ ಇರುತ್ತಿತ್ತು. ಯಜ್ಞಗಳಲ್ಲಿ ಗೋಮಾಂಸ ಅರ್ಪಿಸುತ್ತಿದ್ದರೆಂದೂ ಮತ್ತು ವಾಜಪೇಯಿ ಗೋಮಾಂಸ ಸೇವನೆ ಮಾಡಿದ್ದರಿಂದ ವಿವಾದಕ್ಕೆ ಒಳಗಾಗಿದ್ದರು ಎಂದೂ, ಇವೆಲ್ಲ ಕೂಡಿಕೊಂಡು ಒಂದು ಬಾಂಬ್ ಆಗುತ್ತಿತ್ತು.


ಹಾಗೆಯೇ ಇನ್ನೊಂದು ಲೇವಡಿ ಮಾಡುತ್ತಿದ್ದರು ಎನಿಸುತ್ತದೆ. ಗೋಮೂತ್ರ ಔಷಧಿ ಆಗುವುದಾದರೆ, ಗೋಸಗಣಿ ಔಷಧಿ ಆಗುವುದಾದರೆ, ಗೋಮಾಂಸ ಯಾಕಾಗಲ್ಲಾ ಎನ್ನುತ್ತಿದ್ದರು.

ಕೊನೆಯದಾಗಿ – ಎಂಬತ್ತರ ದಶಕದಲ್ಲಿರಬೇಕು – ಗುಜರಾತಿನಲ್ಲಿ ಮೀಸಲಾತಿ ವಿರುದ್ಧ ಹೋರಾಟ ನಡೆದು ಸಾವುನೋವುಗಳು ಸಂಭವಿಸಿದ್ದವು. ಆ ಸಂದರ್ಭದಲ್ಲಿ ಮೀಸಲಾತಿ ಬಗ್ಗೆ ಕರ್ನಾಟದಲ್ಲಿ ಒಂದು ಸೆಮಿನಾರ್ ನಡೆದಿತ್ತು. ಅದಕ್ಕೆ ಲಂಕೇಶ್ ಸೇರಿದಂತೆ ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲ ಬಂದಿದ್ದರು. ಅಂದು ಲಂಕೇಶ್ ಹೇಳಿದ ಮಾತು ನನಗೆ ಇವತ್ತಿಗೂ ನೆನಪಿದೆ. ಲಂಕೇಶ್ ಅವತ್ತು 'ದಲಿತರು ಸಮಾಜದ ಕಡೆ ನೋಡುತ್ತಿರುವುದು ಪ್ರೀತಿಗಾಗಿಯೂ ಕೂಪ–ಇವಕ್ಕೆ ಒಂದು ಮುಗುಳ್ನಗೆ ಸಾಕು' ಎಂದಿದ್ದರು. ಆ ಸೆಮಿನಾರ್‌ನ ವಿವರಗಳು, ಒತ್ತಾಯಗಳು ಎಲ್ಲವೂ ಇಂದು ನನಗೆ ಮರೆತುಹೋಗಿದೆ. ಆದರೆ ಅವರ ನುಡಿ, 'ಒಂದು ಮುಗುಳ್ನಗೆ ಸಾಕು' ಎಂಬ ನುಡಿ ಇವತ್ತಿಗೂ ನನಗೆ ನೆನಪಿದೆ.

ಲಂಕೇಶರ ಮುಗುಳ್ನಗೆ ನಮ್ಮೊಡನೆ ಇದೆ.



ದೇವನೂರು ಮಹಾದೇವ





...ಮು ಗೋಷ್ಠಿಯಾಗಿ 'ಲಂಕೇಶ್ ಮತ್ತು ...ಸವಾಲುಗಳು'ನಲ್ಲಿ ಕನ್ನಡ ವಿವಿಯ ಬಿ.ಎಂ. ...ಕೋಮುವಾದ ಮತ್ತು ಜಾಗತೀಕರಣದ ಕುರಿತು ಅನೇಕ ಒಳನೋಟಗಳಿರುವ ಭಾಷಣ ...ಕರ್ನಾಟಕ ಜನಪರ ವೇದಿಕೆಯ ಮುಖಂಡ ...'ಲಂಕೇಶರಿಂದ ತಾನು ಹೇಗೆ ಪ್ರಭಾವಿತನಾದೆ' ...ಹೇಳಿ ಇವತ್ತಿನ ಸಂದರ್ಭವು ಅವರನ್ನು ...ಹಾಗೂ ವಿಮರ್ಶೆಯೊಂದಿಗೆ ಪಡೆಯುತ್ತಾ ...ಬೇಕಿದೆ' ಎಂದರು. ಅಧ್ಯಕ್ಷತೆ ವಹಿಸಿದ್ದ ...ಕೃಷ್ಣ ಕೋಮುವಾದಿ ಬಿಜೆಪಿ ಸರ್ಕಾರದ ...ಗಳ ಬಗ್ಗೆ ಸಭಿಕರ ಗಮನ ಸೆಳೆದು ತೀವ್ರ ...ಟೀಸಿದರು.

...ಸಂಜೆ ನಡೆದ ಸಮಾರೋಪ ಸಮಾರಂಭದ ...ಥಿಯಾಗಿದ್ದ ಬಿಜಾಪುರ ಚಾಣಕ್ಯ ಕೆರಿಯರ್ ...ಮು ಎನ್.ಎಂ. ಬಿರಾದಾರ್, ಗೈಡ್ ...ಮು ಕುರಿತು ಮೆಚ್ಚುಗೆಯ ಮಾತನಾಡಿದರು. ...ೋಪ ಭಾಷಣ ಮಾಡಿದ ಸಾಹಿತಿ ದೇವನೂರ ...ಲಂಕೇಶರನ್ನೂ 'ಲವ್ಲಿ ಡಾರ್ಲಿಂಗ್' ಎಂದರು. ...ಣದ ಪೂರ್ಣಪಾಠವನ್ನು ಇಲ್ಲಿ ಮುದ್ರಿಸಲಾಗಿದೆ. ...'75' ಒಟ್ಟು ಎರಡೂ ದಿನವೂ ನಡೆದ ... ಅಲ್ಲಿ ಸಾಹಿತ್ಯ ರಾಜಕೀಯ, ಹೋರಾಟಗಳ ...ಲ್ಲಿ ಬಂದುಹೋದವು. ಸೆನೆಟ್ ಹಾಲ್ ಪೂರ್ತಿ ...ಡಿದ್ದ ನಾನೂರಕ್ಕೂ ಹೆಚ್ಚು ಜನ ಇಡೀ ಎರಡು ...ಎಲ್ಲರ ಮಾತು ಕೇಳಿದರು. ಬಿಡುವು ...ತಮ್ಮಲೇ ವಿಚಾರ ವಿನಿಮಯ ಮಾಡಿಕೊಂಡರು. ...ಸ್ತಕ ಕೊಂಡುಕೊಂಡರು.

...ದುದಾಗಿ,


...ಯಾಗಿದ್ದವರ ಹಿನ್ನೆಲೆ ಬಗ್ಗೆ ಹೇಳಬೇಕೆಂದರೆ.... ...ಶರ ಸಮಕಾಲೀನರಾಗಿರುವ ಹಿರಿಯ ...ದ್ಧಿಜೀವಿಗಳ ವಲಯ ಒಂದೆಡೆ ಇದ್ದರೆ, ಹೊಸ ...ದಾರಪತ್ರಿಕೆ'ಯ ಓದುಗ ವಲಯ ಇನ್ನೊಂದೆಡೆ ...ವಂತೆ ಅಲ್ಲಿದ್ದವರು 20–30ರ ವಯೋಮಿತಿಯ ...ದ್ಯಾರ್ಥಿ ವೃಂದ ಹಾಗೂ ಆ್ಯಕ್ಟಿವಿಸ್ಟ್ ಗೆಳೆಯರು. ...ಸಮಾವೇಶವು ಗಾಂಧಿವಾದಿಗಳು, ಸಮಾಜ ...ಮಾರ್ಕ್ಸ್‌ವಾದಿಗಳು ಹಾಗೂ ಅಂಬೇಡ್ಕರ್‌ವಾದಿ ...ತ್ಯುತ್ತಮ ಸಂಯೋಜನೆಯಾಗಿತ್ತು.

... ಆಶಿಸುತ್ತಿರುವ ಸಮಾನತೆಯ, ಆರೋಗ್ಯ ...ಪಸ ಕರ್ನಾಟಕ ಕಟ್ಟಲು ಈ ಎಲ್ಲಾ ರಾಜಕೀಯ ...ವುಗಳ ಜನ ಒಂದೆಡೆ ಬರಲು 'ಲಂಕೇಶ್–75' ...ಕೆಯಾಗಿದ್ದು ಆಶಾದಾಯಕ ಬೆಳವಣಿಗೆಯಾಗಿದೆ. ...' ಎಂಬ ಪದ ಬಂಡುಕೋರ ಹಾಗೂ ...ರೋಧಿತನದ ಸಂಕೇತವಾಗಿ ಜನರ ಮನಸ್ಸಿನಲ್ಲಿ ...ರಳಿ ಬಂದು ಸ್ಥಾಪಿತವಾಗುತ್ತಿದೆ. ಇದು ...ಲ್ಲೋ ತರುತ್ತಿದೆ.

... 7ರ ರಾತ್ರಿ ಕಾರ್ಯಕ್ರಮಗಳೆಲ್ಲಾ ...ರ 'ಲಂಕೇಶ್ ಬಳಗಕ್ಕೆ' ಒಂದು ಫೋನ್ ...ಆಗ ರಾತ್ರಿ ಹನ್ನೊಂದೂವರೆ. "ಕಾರ್ಯಕ್ರಮ ...ಟ್ತು. ಸಭಿಕರಲ್ಲಿ ಎಲ್ಲಾ ಹಿನ್ನೆಲೆ, ವಯಸ್ಸಿನ ... ಅರ್ಧಕ್ಕೂ ಜಾಸ್ತಿ ಹೊಸ ಮುಖಗಳಿದ್ದವು.. ...ರಲ್ಲೂ ಹೊಸ ಕನಸು ಹುಟ್ಟಿಸುತ್ತಿದೆ. ಏನೋ ...ಸಿಗುರುತ್ತಿದೆ. ಇದನ್ನೆಲ್ಲಾ ಉಳಿಸಿ, ಬೆಳೆಸಿ ...ಕಟ್ಟುವ ಜವಾಬ್ದಾರಿ ಲಂಕೇಶ್ ತಂಡದ

...ಮಾತು ಹೇಳಿದ್ದು ನಮ್ಮೆಲ್ಲರ ಪ್ರೀತಿಯ ...ಜ.

• ಲಂಕೇಶ್ ಬಳಗ



...ಮುಲ್ಲ, ರಾಜು ಮತ್ತು ಕುಮಾರ್ ಸಮೂಹಳ

ಕರ್ನಾಟಕವನ್ನು ಗುಜರಾತ್ ಮಾಡಲಿರುವ ಹೊಸ ಕಾಯಿದೆ!

2 ▸▸

ಅಂಥಾ ಒಂದು ಕರಾಳ ಮತ್ತು ಅತ್ಯಂತ ಪ್ರಜಾತಂತ್ರ ವಿರೋಧಿ ಅಂಶವನ್ನು ಸರ್ಕಾರ ಈ ಕಾಯಿದೆಯಲ್ಲಿ ಸೇರಿಸುತ್ತಿದೆಯೆಂದರೆ ಬಿಜೆಪಿ ಸರ್ಕಾರದ ಹಿಡೆನ್ ಕೇಸರಿ ಅಜೆಂಡಾ ಏನೆಂಬುದು ಸ್ಪಷ್ಟವಾಗುತ್ತದೆ. ಹೀಗಾಗಿಯೇ ಪ್ರಜಾತಂತ್ರವಾದಿಗಳು ತಮ್ಮ ನಡುವೆಯ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಫ್ಯಾಸಿಸ್ಟ್ ಕಾನೂನಿನ ವಿರುದ್ಧ ಹೋರಾಡಲು ಮುಂದೆ ಬರಬೇಕಿದೆ.

-ಐದನೆಯದಾಗಿ ಕಾಯಿದೆಯ ಸೆಕ್ಷನ್ (9)ರ ಪ್ರಕಾರ ದನದ ಸಾಗಾಟಕ್ಕೆ ಬಳಸಲಾಗುತ್ತಿದ್ದ ವಾಹನವನ್ನು ಮತ್ತು ಈ ಕಾಯಿದೆಯ ಪ್ರಕಾರ ಅಪರಾಧ ಮಾಡಲು ಬಳಸುತ್ತಿದ್ದ ಸಾಮಗ್ರಿಗಳನ್ನು ಅಧಿಕಾರಿಗಳು ವಶಪಡಿಸಿಕೊಂಡು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಬಹುದು. "ಸಾರ್ವಜನಿಕ ಹಿತಾಸಕ್ತಿ"ಯಿಂದ ಅಗತ್ಯ ಎಂದು ಕಂಡುಬಂದಲ್ಲಿ ಅವರು ಆ ವಾಹನವನ್ನು ಹರಾಜು ಹಾಕಬಹುದು. ಆ ನಂತರ ಕೋರ್ಟಿನಲ್ಲಿ ಅವರು ನಿರಪರಾಧಿ ಎಂದು ಸಾಬೀತಾದರೆ ಹರಾಜು ಮಾಡಿದ ಬಂದ ಹಣದಲ್ಲಿ ಹರಾಜು ಪ್ರಕ್ರಿಯೆಗೆ ವೆಚ್ಚವಾದ ಹಣವನ್ನು ಕಡಿತ ಮಾಡಿ ಉಳಿದದ್ದನ್ನು ಕೊಡಬಹುದೆಂದು ಹೇಳುತ್ತದೆ. ಇದು ಮುಸ್ಲಿಮರ ಆರ್ಥಿಕ ಮೂಲದ ಮೇಲೆ ಎಂಥಾ ಪೆಟ್ಟನ್ನು ಕೊಡಬಹುದೆಂಬುದು ಯಾರು ಬೇಕಾದರೂ ಊಹಿಸಬಹುದು. ಒಂದು ವೇಳೆ ಹರಾಜು ಹಾಕದಿದ್ದರೂ ಕೋರ್ಟಿನ ಅಪ್ಪಣೆಮೇರೆಗೆ ಸರಿಸಮನಾದ ಬ್ಯಾಂಕ್ ಗ್ಯಾರಂಟಿ ಒದಗಿಸಿದಲ್ಲಿ ಮಾತ್ರ ವಶಪಡಿಸಿಕೊಂಡ ವಾಹನವನ್ನು ವಾಪಸ್ ನೀಡಲಾಗುತ್ತದೆ. ಆದೇನೇ ಇದ್ದರೂ ಸಾಮಾನ್ಯವಾಗಿ ನಡೆಯುವುದು ಹರಾಜೇ ಎಂಬುದು ಬಿಜೆಪಿಯ ಅಂತರ್ಯವನ್ನು ಬಲ್ಲವರಿಗೆ ಗೊತ್ತಿರುವ ವಿಷಯವೇ.



ಕೃಪೆ:ಪ್ರಜಾವಾಣಿ

– ಆರನೆಯದಾಗಿ ಈ ಕಾಯಿದೆಯಡಿ ಸಂಭವಿಸುವ ಅಪರಾಧಕ್ಕೆ ನೀಡಲಾಗುವ ಶಿಕ್ಷೆಗಳ ಪ್ರಮಾಣ. ಈ ಕಾಯಿದೆಯ ಸೆಕ್ಷನ್ (12)ರಲ್ಲಿ ನಿಗದಿಪಡಿಸಿರುವಂತೆ ಈ ಕಾಯಿದೆಯ ಸೆಕ್ಷನ್ 4 ರಡಿ ಎಸಗಲಾಗುವ ಅಪರಾಧಕ್ಕೆ ಅಂದರೆ ಜಾನುವಾರು ಹತ್ಯೆ ಮಾಡಿದ ಅಪರಾಧಕ್ಕೆ ಒಂದು ವರ್ಷದಿಂದ ಏಳು ವರ್ಷದವರೆಗೆ ಜೈಲು ಶಿಕ್ಷೆ ಮತ್ತು 25,000 ರೂ.ಗಳಿಂದ 1,00,000 ರೂ.ವರೆಗೆ ಜುಲ್ಮಾನೆಯನ್ನೂ ವಿಧಿಸಬಹುದಾಗಿದೆ. ಭಯೋತ್ಪಾದನೆ, ಉದ್ದೇಶಪೂರ್ವಕ ಕೊಲೆ, ಬಲಾತ್ಕಾರ, ಕಳ್ಳಸಾಗಣೆ, ಭ್ರಷ್ಟಾಚಾರಗಳಿಗೂ ಈ ಪ್ರಮಾಣದ ಶಿಕ್ಷೆಯನ್ನು ಇಂಡಿಯನ್ ಪೀನಲ್ ಕೋಡ್ ವಿಧಿಸುವುದಿಲ್ಲ, ಅದೇ ರೀತಿ ಈ ಕಾಯಿದೆಯಡಿ ಎಸಗಲಾಗುವ ಇತರ ಅಪರಾಧಗಳಿಗೆ – ಅಂದರೆ ದನದ ಸಾಗಾಟ ಮಾಡುವುದು, ದನದ ಪರಭಾರೆ ಮಾಡುವುದು, ದನದ ಮಾಂಸ ತಿನ್ನುವುದು, ತಿನ್ನಲು ಪ್ರೋತ್ಸಾಹಿಸುವುದು ಹಾಗೂ ಇನ್ನಿತರ. ಅಪರಾಧಗಳಿಗೆ – ಒಂದು ವರ್ಷದಿಂದ ಮೂರು ವರ್ಷದ ಸಜೆ ಮತ್ತು 10,000 ರೂ -25,000 ರೂ.ವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

– ಏಳನೆಯದಾಗಿ ಈ ಕಾಯಿದೆಯ ಪ್ರಕಾರ ದನಗಳ ಸಾಗಾಟಕ್ಕೆ ಅನುಮತಿಯನ್ನಲ್ಲದೆ ಇನ್ನು ಮುಂದೆ ಶುಲ್ಕವನ್ನೂ ಪಾವತಿಸಬೇಕಾಗುತ್ತದೆ. ಅದೇ ರೀತಿ ಗೊಡ್ಡುದನಗಳನ್ನು ಸಾಕಲು ರೈತರು ಶುಲ್ಕ ಪಾವತಿಸಬೇಕಾಗುತ್ತದೆ!

1964ರ ಕಾಯಿದೆಯಲ್ಲಿ ಸರ್ಕಾರವೇ ಕೆಲವು "ಅಧಿಕೃತ ವ್ಯಕ್ತಿ"ಗಳನ್ನು ಈ ಕಾಯಿದೆಯ ಅನುಷ್ಠಾನ ಮಾಡಲು ನೇಮಕ ಮಾಡಲು ಇದ್ದ ಅವಕಾಶವನ್ನು ಹಿಂತೆಗೆದುಕೊಂಡು ಸರ್ಕಾರಿ ಅಧಿಕಾರಿಗಳನ್ನೊಳಗೊಂಡ ಸಕ್ಷಮ ಪ್ರಾಧಿಕಾರವನ್ನು ನೇಮಕ ಮಾಡುವ ಪ್ರಸ್ತಾಪ ಮತ್ತು 2009ರ ತಿದ್ದುಪಡಿಯಲ್ಲಿ ಜಿಲ್ಲಾ ಕೋರ್ಟುಗಳು ನೀಡುವ ಆದೇಶವೇ ಅಂತಿಮ ಎಂಬುದನ್ನು ಕೈಬಿಟ್ಟಿರುವುದು– ಇವೆರಡನ್ನು ಬಿಟ್ಟರೆ ಈ ಹೊಸ ಕಾಯಿದೆ ಇಡೀ ಸಮಾಜವನ್ನು ಸಂಭವನೀಯ ಅಪರಾಧಿಗಳನ್ನಾಗಿಸುತ್ತದೆ.

ಇಂಥಾ ಒಂದು ಅತ್ಯಂತ ಕರಾಳ ಕಾಯಿದೆ ಯಾವುದೇ ರಾಜ್ಯದಲ್ಲೂ ಇಲ್ಲ. ಟಾಡಾ, ಪೋಟಾ ಕಾಯಿದೆಗಿಂತಲೂ ಭೀಕರವಾದ ಈ ಕಾಯಿದೆ ಮುಸ್ಲಿಮರ ಮೇಲೆ ನಡೆಯುತ್ತಿರುವ ದಮನಕ್ಕೆ ಕಾನೂನು ಸಮ್ಮತಿ ಒದಗಿಸುವುದು ಮಾತ್ರವಲ್ಲದೆ ಅವರ ಆರ್ಥಿಕ ಆಧಾರದ ಮೇಲೆ ದಾಳಿ ಮಾಡಿ, ದಿವಾಳಿಗೊಳಿಸಿ ಮುಸ್ಲಿಂ ಸಮುದಾಯವನ್ನು ಶಾಶ್ವತ ಪರಾವಲಂಬಿ ಸ್ಥಿತಿಗೆ ದೂಡುವ ಹುನ್ನಾರವನ್ನು ಹೊಂದಿದೆ. ಇದು ಪಕ್ಕಾ ಗುಜರಾತ್ ಅಜೆಂಡಾ! ಆದರೆ ಇದು ಕೇವಲ ಮುಸ್ಲಿಮರನ್ನು ಮಾತ್ರ ಟಾರ್ಗೆಟ್ ಮಾಡುತ್ತಿಲ್ಲ, ದನದ ಮಾಂಸವನ್ನು ಹೊಂದುವುದು ಮತ್ತು ತಿನ್ನುವುದನ್ನು ಸಹ ಇದು ಅಪರಾಧವನ್ನಾಗಿಸುತ್ತದೆ. ಇದು ಅಗ್ಗದ ದರದಲ್ಲಿ ಸಿಗುವ ದನದ ಮಾಂಸವನ್ನು ತಿನ್ನುತ್ತಿದ್ದ ದಲಿತ ಮತ್ತು ಶೂದ್ರ ಸಮುದಾಯವನ್ನೇ ಅಪರಾಧಿಗಳನ್ನಾಗಿಸುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ದನಗಳನ್ನು ಪರಭಾರೆ ಮಾಡುವುದನ್ನೇ ಅಪರಾಧವನ್ನಾಗಿಸುವ ಮೂಲಕ ಈ ಕಾಯಿದೆ ಈ ನಾಡಿನ ಇಡೀ ರೈತಾಪಿ ಸಮುದಾಯವನ್ನೇ ಸಂಭವನೀಯ ಅಪರಾಧಿಗಳನ್ನಾಗಿಸುತ್ತದೆ. ಈಗಾಗಲೇ ಸಾಮೂಹಿಕ ಆತ್ಮಹತ್ಯೆಯ ಅಂಚಿಗೆ ಬಂದು ತಲುಪಿರುವ ರೈತ ಸಮುದಾಯವನ್ನು ಇನ್ನಷ್ಟು ಬೇಗನೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತದೆ. ಈ ಕಾಯಿದೆಯನ್ನು ವಿರೋಧಿಸುವುದನ್ನೇ ಶಿಕ್ಷಾರ್ಹ ಅಪರಾಧವನ್ನಾಗಿಸುವುದರ ಮೂಲಕ ಪ್ರಜಾತಂತ್ರದ ಬಾಯಿಗೇ ಬೀಗ ಹಾಕುತ್ತಿದೆ.

ಹೀಗಾಗಿ **The Karnataka Prevention Of Slaughter And Preservation Of Cattle Bill, 2010** ಎಂಬ ಈ ಮಸೂದೆ ಈ ನಾಡಿನಲ್ಲಿ ಬ್ರಾಹ್ಮಣಶಾಹಿ ಸಮಾಜವನ್ನು ಸಾಕಾರಗೊಳಿಸಲು ಬಯಸುವ ಅತ್ಯಂತ ಅಲ್ಪಸಂಖ್ಯಾತ ಜನರನ್ನು ಬಿಟ್ಟರೆ ಉಳಿದ ಬಹುಸಂಖ್ಯಾತ ಜನರ ಬದುಕು ಮತ್ತು ಸಂಸ್ಕೃತಿಗಳ ಮೇಲೆ ನಡೆಸುತ್ತಿರುವ ಫ್ಯಾಸಿಸ್ಟ್ ಆಕ್ರಮಣವಾಗಿದೆ. ಪ್ರಜಾತಂತ್ರದ ಮೇಲಿನ ಆಕ್ರಮಣವಾಗಿದೆ. ಇದರ ವಿರುದ್ಧ ಸದನದ ಒಳಗೆ ಮತ್ತು ಹೊರಗೆ ಬೃಹತ್ ಜನಾಂದೋಲನವೊಂದು ನಡೆಯಬೇಕಿದೆ. ಇದು ರೈತಾಪಿಯ, ದಲಿತ-ಅಲ್ಪಸಂಖ್ಯಾತರ ಜೀವನ್ಮರಣದ ಸಮಸ್ಯೆಯಾಗಿದೆ. ಕಾಲದ ಕರೆಗೆ ಓಗೊಡಬೇಕಾದ ಸವಾಲು ಇಂದು ನಾಡಿನ ಜನರ ಮುಂದಿದೆ. ●

ನಮ್ಮನ್ನೆಲ್ಲಾ ಜೈಲಿಗಟ್ಟಿ!

ಒಂದು ಪತ್ರ

ಈ ನೆಲದ ಜನರ ಆಹಾರ ಪದ್ಧತಿಯ ಮೇಲೆ ಪ್ರಹಾರ ಮಾಡುವ, ಹಕ್ಕು ಚಲಾಯಿ... ದಾರ್ಷ್ಟ್ಯವನ್ನು ಬಿಜೆಪಿ ಮತ್ತು ಸಂಘಪರಿವಾರದ ಶಕ್ತಿಗಳು ಎಳ್ಳಷ್ಟೂ ಎಗ್ಗಿಲ್ಲದೆ ತೋರಿಸಬಹು... ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡ ಈ ದೇಶದಲ್ಲಿ ನಮ್ಮ ಹಕ್ಕುಗಳಿ... ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ನಡೆಸಬಾರದು! ಇದೆಂತಹ ಕಾಡಿನ ನ್ಯಾಯ...

ಕರ್ನಾಟಕದ ಕೋಮು ಸೌಹಾರ್ದ ವೇದಿಕೆಯ ರಾಜ್ಯ ಕಾರ್ಯದರ್ಶಿ ಕೆ.ಎ... ಅಶೋಕ್ ಮತ್ತು ಸಂಗಡಿಗರ ಮೇಲೆ ಸಂಘ ಪರಿವಾರದ ಮಂದಿಗಳು ಜಾಮೀನುರ... ಕೇಸು ದಾಖಲಿಸಿ ವಾರಂಟ್ ಹೊರಡಿಸಿದ್ದಾರೆ. ಅಷ್ಟಕ್ಕೂ ಅಶೋಕ್ ಮತ್ತು ಸಂಗಡಿ... ಮಾಡಿದ ತಪ್ಪಾದರೂ ಏನು? ರಾಜ್ಯ ಸರ್ಕಾರದ ಪ್ರಸ್ತಾವಿತ ಸಂಪೂರ್ಣ ಗೋಹತ್ಯೆ ನಿ... ಮಸೂದೆಯನ್ನು ವಿರೋಧಿಸಿ ಜನಾಂದೋಲನ ಸಂಘಟಿಸಿದ್ದೇ? ದನದ ಮಾಂಸ ತಿಂದು...

ಜನಾಂದೋಲನ ಸಂಘಟಿಸುವುದು ತಪ್ಪಾದರೆ ಇದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯೆ... ಸಾಧ್ಯವೇ? ಜನರು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಪ್ರತಿಭಟಿಸುವುದು ತಪ್ಪೇ? ದ... ಮಾಂಸ ತಿನ್ನುವುದು ಅದನ್ನು ತಿನ್ನುವವರ ಸಂವಿಧಾನದತ್ತ ಹಕ್ಕು. ಅಶೋಕ್ ವ... ಸಂಗಡಿಗರು ಯಾರಿಗಾದರೂ ಬಲವಂತಪಡಿಸಿ ದನದ ಮಾಂಸ ತಿನ್ನಿಸಿದ್ದರೆ ಅ... ತಿನ್ನುವಂತೆ ಒತ್ತಾಯಿಸಿದ್ದರೆ ಯಾರದಾದರೂ ಧಾರ್ಮಿಕ ಭಾವನೆಗಳಿಗೆ ಚ್ಯುತಿಯುಂಟಾ... ಎನ್ನಬಹುದಿತ್ತು, ರಾಜ್ಯ ಸರ್ಕಾರವು ಸಂಪೂರ್ಣ ಗೋಹತ್ಯೆ ನಿಷೇಧದ ಪ್ರಸ್ತಾವನೆ... ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಿ ಅದು ಅಂಗೀಕೃತವಾದರೆ ಆ ಬಳಿಕವೇ ಅದು ಒ... ಮಸೂದೆಯಾಗಿ ಜಾರಿಗೆ ಬರುತ್ತದೆ. (ಮಸೂದೆ ಜಾರಿಗೆ ಬಂದರೆ ಅದನ್ನು ಉಲ್ಲ... ನಾವು ಬಹಿರಂಗವಾಗಿ ದನದ ಮಾಂಸ ತಿಂದು ನಮ್ಮ ಹೋರಾಟವನ್ನು ಉಗ್ರಗೊಳಿಸುತ್ತೇವೆ).

ಯಾರು ಏನು ತಿನ್ನಬೇಕು, ಏನನ್ನು ತಿನ್ನಬಾರದು ಎನ್ನುವ ಹಕ್ಕು ಸರ್ಕಾರಕ್ಕಿಲ್ಲ, ಈ ದೇಶದ ಬಹುಜನರ ಆಹಾರವಾದ ದನದ ಮಾಂಸವನ್ನು ಈ ದೇಶದ ಮೂರನೇ ಒಂದು ಭಾಗಕ್ಕಿಂತಲೂ ಮಿಕ್ಕಿದ ಜನರು ಯಾವುದೇ ಪವಿತ್ರ-ಅಪವಿತ್ರತೆಯ ಪರಿಕಲ್ಪನೆಯಿಲ್ಲದೇ ತಿನ್ನುತ್ತಿದ್ದಾರೆ. ಸದ್ಯ ಅಶೋಕ್ ಮತ್ತು ಸಂಗಡಿಗರು ಪ್ರಸ್ತಾವಿತ ಮಸೂದೆ ಜಾರಿಗೆ ಬರುವುದಕ್ಕಿಂತ ಮುಂಚೆ ದನದ ಮಾಂಸ ತಿಂದದ್ದಕ್ಕೆ ಬ... ಮತ್ತು ಅವರ ಪರಿವಾರದವರು ಅವರ ವಿರುದ್ಧ ಜಾಮೀನುರಹಿತ ವಾರೆಂಟ್ ಹೊರಡಿಸಿ... ಹಾಗೇನಾದರೂ ದನದ ಮಾಂಸ ತಿಂದದ್ದಕ್ಕೆ ಜಾಮೀನುರಹಿತ ಕೇಸು ದಾಖಲಿಸಬಹುದಾ... ಈ ನಾಡಿನ ಮೂರನೇ ಒಂದು ಭಾಗದಷ್ಟು ಜನರ ಮೇಲೆ ಕೇಸು ಜಡಿದು ಜೈ... ಅಟ್ಟಬಹುದು.

ಅಶೋಕ್‌ರನ್ನು ಗಡೀಪಾರು ಮಾಡಲು ಒತ್ತಾಯಿಸಿರುವ ವಕೀಲರು ಬಿಜೆಪಿ ... ಸಂಘಪರಿವಾರದವರೇ ಹೊರತು ಇನ್ಯಾರಲ್ಲ, ಅಶೋಕ್ ಯಾವುದೇ ಕೋಮಿನ, ಜಾ... ಮೇಲೆ ದ್ವೇಷ ಬಿತ್ತುವ ಒಂದೇ ಒಂದು ಪದವನ್ನಾದರೂ ಆಡಿದ್ದಿದ್ದರೆ ಅಶೋಕ್‌ರ ಗಡೀಪ... ಒತ್ತಾಯಿಸಿರುವ ವಕೀಲರು ಸಾಬೀತುಪಡಿಸಿ ತೋರಿಸಲಿ. ಜೆಡಿಎಸ್-ಬಿಜೆಪಿ ಸ... ಸರ್ಕಾರ ಅಸ್ತಿತ್ವಕ್ಕೆ ಬಂದಂದಿನಿಂದ ಅಶೋಕ್ ಮಾಡಿದಂತಹ ಪ್ರತಿಯೊಂದು ಸಾರ್ವ... ಭಾಷಣವನ್ನು ಸಂಬಂಧಪಟ್ಟ ಇಲಾಖೆಯು ರೆಕಾರ್ಡ್ ಮಾಡಿಟ್ಟುಕೊಂಡಿದೆ. ... ಇಲಾಖೆಯಾಗಲೀ, ವಿರೋಧಿಗಳಾಗಲೀ ಸಾಬೀತುಪಡಿಸಿ ತೋರಿಸಲಿ.

ಯಾವುದೇ ಕೋಮು ಪ್ರಚೋದಕ ಮಾತುಗಳನ್ನಾಡದೇ ಸರ್ವ ಜನಾಂಗಗಳ ಮನ-ಬೆಸೆಯುವ ಮಾತುಗಳನ್ನಾಡುವ ಅಶೋಕ್‌ರ ಮೇಲೆ ಕೇಸು ದಾಖಲಿಸಬಹುದಾ... ಬಾಯಿ ತೆರೆಯುವುದೇ ಕೋಮು ದ್ವೇಷದ ಮಾತುಗಳಿಂದ ಎಂದು ಪ್ರಸಿದ್ಧಿ ... ಪ್ರಮೋದ್ ಮುತಾಲಿಕ್‌ರ ಮೇಲೆ ದಿನವೊಂದಕ್ಕೆ ಡಜನ್‌ಗಟ್ಟಲೆ ಕೇಸು ದಾಖಲಿ... ಇರಬೇಕಾಗಬಹುದು. ಹಾಗೆ ನೋಡಹೋದರೆ ಈ ಗೋಹತ್ಯೆ ವಿರೋಧಿ ಮಸೂ... ಸದ್ಯದ ಪ್ರಸ್ತಾವಕ್ಕಿಂತ ಸುಮಾರು ಎರಡು ವರ್ಷ ಮುಂಚೆಯೇ ದನದ ಮಾಂಸ ತಿನ್ನ... ನಾಲಿಗೆ ಕತ್ತರಿಸಲು ಫತ್ವಾ ನೀಡಿದ್ದ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪನವರ ಮೇಲೆ ಎ... ಕೇಸು ದಾಖಲಿಸಬೇಕಿತ್ತು? ಬಹಿರಂಗವಾಗಿ ದನದ ಮಾಂಸ ತಿಂದದ್ದಕ್ಕೆ ಕೇಸು ಜಡಿಯಬಹುದಾ... ಈಶ್ವರಪ್ಪರ ಹೇಳಿಕೆ ವಿರೋಧಿಸಿ ಬೆಂಗಳೂರಿನಲ್ಲಿ ಬಹಿರಂಗವಾಗಿ ದನದ ಮಾಂಸ ತಿ... ಈಶ್ವರಪ್ಪರಿಗೆ ಸವಾಲು ಒಡ್ಡಿದ್ದ ಸಮತಾಸೈನಿಕ ದಳದ ಎಂ. ವೆಂಕಟಸ್ವಾಮಿ ಸೇರಿ ಸಾವಿರಾರು ಪ್ರತಿಭಟನಾಕಾರರ ಮೇಲೆ ಕೇಸು ದಾಖಲಿಸಬೇಕಾಗಿತ್ತು, ಸದ್ಯ ಪ್ರ... ಮಸೂದೆಯನ್ನು ವಿರೋಧಿಸಿ ರಾಜ್ಯದ ಮೂಲೆಮೂಲೆಗಳಲ್ಲಿ ಪ್ರತಿಭಟನೆ ನಡ... ಪ್ರತಿಭಟನಾರ್ಥವಾಗಿ ದನದ ಮಾಂಸ ತಿಂದ ಸುಮಾರು ಇಪ್ಪತ್ತು ಸಾವಿರಕ್ಕೂ ... ನಮ್ಮೆಲ್ಲರ ವಿರುದ್ಧ ಕೇಸು ದಾಖಲಿಸಿ ನಮ್ಮನ್ನೆಲ್ಲಾ ಜೈಲಿಗಟ್ಟಲಿ.

-ಇಸ್ಮತ್ ಪಜೀರ್, ಮಂಗಳ...

ಕರ್ಫ್ಯೂ ವಿಧಿಸಲಾಗಿದೆ


ನಗರವಿಂದು ತಣ್ಣಗಿದೆ
ಕಾರಣ: ಕರ್ಫ್ಯೂ ವಿಧಿಸಲಾಗಿದೆ.

ರಸ್ತೆಯಲಿ ಜನಜಂಗುಳಿಯಿಲ್ಲ
ಹೊಗೆಯುಗುಳುವ ವಾಹನಗಳಿಲ್ಲ
ಮೈದಾನಗಳಲಿ ಮಕ್ಕಳಿಲ್ಲ
ನಗರವಿಂದು ನಿಶ್ಯಬ್ಧವಾಗಿದೆ

ಆಸ್ಪತ್ರೆಯ ಹಾಸಿಗೆಗಳು ತುಂಬಿವೆ
ಬಸ್‌ಸ್ಟ್ಯಾಂಡ್‌ಗಳು ಬಿಕೋ ಅನ್ನುತಿವೆ
ಕರಿಬೂಟುಗಳು ಕವಾಯತು ನಡೆಸಿವೆ
ನಗರವಿಂದು ನಿಶ್ಯಬ್ಧವಾಗಿದೆ

ಜನರಿರದ ಮಾರುಕಟ್ಟೆಯಲಿ ಬರಿ ನೊಣಗಳು
ಮಾರ್ಚುರಿಯಲಿ ಗುಂಡೇಟು ತಿಂದ ಹೆಣಗಳು
ಶಾಂತಿಸಭೆಯೊಳಗೆ ಪಿತೂರಿ ನಡೆಸಿವೆ ಎರಡು ಬಣಗಳು
ನಗರವಿಂದು ನಿಶ್ಯಬ್ಧವಾಗಿದೆ.

ನಗರವಿಂದು ತಣ್ಣಗಿದೆ
ಕಾರಣ: ಕರ್ಫ್ಯೂ ವಿಧಿಸಲಾಗಿದೆ.



● ಕು.ಸ. ಮಧುಸೂದನ

ಹಿಳಾ ಮೀಸ್ಲಾತಿಯಿಂದ ಗಂಡನ ಬದ್ಲಿಗೆ ಹೆಂಡ್ತಿ ನಿಂತಗತ್ತಳೆ

ಬತ್ತು ಗಂಟಿಗೇ ಬಿಸ್ಲು ಚುರುಗುಡ್ತದಲ್ಲಾ ಗೇ" ಎಂದು ಸೀರ ಚಿಂತಾಕ್ರಾಂತನಾಗುತ್ತಿದ್ದಾಗ ಪಿಸಿಕೊಂಡು,

ಮಾವ ನೀನು ಡೆಲ್ಲಿಗೋಗಬೇಕಾಗಿತ್ತು ಕಣೊ"

ಬೇನು ಕೇವು ನನಿಗೇ?"

ಟೈಮ್ಸ್ ಪುರಾಣ

ಬಿ. ಚಂದ್ರೇಗೌಡ

ಲೇನು ಕೇವು ಅನ್ನಂಗೆ ಸುಲಭವಾಗಿ ದುಲ್ಲೊ ಮಾವ. ದಿಲ್ಲಿ ಅಂದ್ರೆ ಇಲ್ಲೇ ಇದ್ದತೆ. ದ್ಯಾವೇಗೌಡ್ರು ಯರಡು ಸಾವುರ ಜನ ಕ್ಯವುರೆ ಅಂದ್ರೆ ಲೃಕ್ಕ ಹಾಕು."

ಡು ಮತ್ತೆ, ಅವ್ರುಂದು ಸಾಸ ಬುಡು."

ರೆ ಯರಡು ಸಾವುರ ಜನ ತಗಂಡೋಗಿದ್ದನೇ" ಳಮಾವ ಕಣ್ಣುಬಿಟ್ಟ.

ಕಣ ಮಾವ, ನಯಸ್ ರಸ್ತೆಲಿ ಯಾರ್‍ಯಾರು ತ್ತರೊ ಅವುರನ್ನಲ್ಲ ವಂಡಿಸಿಗಂಡು ಖಾತೆಪಟ್ಟೆ ಲ್ಲಿಗೆ ಕರಂಡೋಗಿ ಪ್ರತಿಭಟನೆ ಮಾಡ್ತನೆ ಅಂದ್ರೆ ಮಾತೇ."

ರ್‍ಯಲ್ಲ ಮನಗದೆಲ್ಲೀ, ಬಯಿರ್ದೆಸೆ ಕ್ಯಲಸ ಮುಗಿಸಿ ಕಳದೆಲ್ಲೀ" ಎಂದು ಸೀರ ನಗಾಡಿದ.

ಮಾವನ್ನೋಡು, ಯಲ್ಲಾನು ಬುಟ್ಟು ಯಾವುದ "?" ಎಂದಳು ಜುಮ್ಮಿ.

ಊಕಂಡ್ರೆ, ಯರಡುಸಾವುರ ಜನ ಯರಡಕ್ಕೋಗ ಯಲ್ಲಾನು ತ್ವಳಕಳದೆಲ್ಲೀ ಅನ್ನದ ಯೋಚನೆ ಪಿ" ಎಂದ.

ಕ್ಯಲ್ಲ ಗೌಡ್ರು ಯವಸ್ಥೆ ಮಾಡಿರತರೆ ಕಣೊ ಕೂಜಿ ಪ್ರಧಾನಿ ಮನೆ ಅಂದ್ರೆ ಒಸಿ ಅಗಲ ಅದೂ ಅಲ್ದೆ ಈಗ ಕಾಸು ಕೊಟ್ಟು ಎಲ್ಲೀ ರುರಡಕ್ಕೋಗಬವುದು" ಎಂದ ಉಗ್ರಿ.

ರ್ಲೀ, ದಿಲ್ಲಿಗ್ಯಾಕೆ ರೈತರ ತಗಂಡೋಗಿದ್ದನ್ನ?" ಳಮಾವ.

ಊ, ನಯಸ್ ರಸ್ತೆ ಮಾಡಕ್ಕೆ ಕೇಂದ್ರ ೋರು ಸಹಾಯ ಮಾಡಿದ್ದರಂತೆ. ಅದ್ಕೆ ೂ ದೂರೇಳಕ್ಕೆ ರೈತರ ಕರಕಂಡೋಗಿದ್ದನಂತೆ."

"ಆ ರಸ್ತೆ ಮಾಡೋನ್ನ ತಂದೋನು ದ್ಯಾವೇಗೌಡ್ನೆ ಅಂತಲ್ಲ?" ಎಂದ ಸೀರ.

"ಅದು ನಿಜ. ದ್ಯಾವೇಗೌಡ ಮದ್ಲಿಂದ ಅಂಗೆ ಅಲವೇನೊ. ವಳೆನರಸೀಪುರದ ಪುಡಸಾಮಿಗೌಡನ್ನ ಬ್ಯಳಿಸ್ತ, ಕಡಿಗೆ ಅವುನ ವಿರುದ್ಧ ಹೋರಾಡಿದ. ಅಲ್ಲಿಂದ ಸುರುವಾಯ್ತು ಅವುನ ಹೋರಾಟ. ಯಾರ್‍ಯಾರ್ನೊ ಹಿಡಕಳದು, ಬ್ಯಳಸದು ಅಮ್ಯಾಲೆ ಅವುನ ವಿರುದ್ಧ ಹೋರಾಟ ಹಚ್ಚಗಳದು. ಅವುನು ಮದ್ಲಿಂದ ಮಾಡಿರದು ಇದೇ ಕ್ಯಲಸಲವೇ."

"ನಿಜ ಬುಡು?" ಎಂದ ಕಾಳಮಾವ.

"ಈಗ್ಲು ಅಂಗೆಯ. ನಯಸ್ ರಸ್ತೆ ಮಾಡೋನ್ನ ಕರಕಂಡು ಬಂದು ಭೂಮಿ ಕೊಡ್ತಿನಿ ರಸ್ತೆ ಮಾಡು ಅಂದ. ಅವುನು ಸುರುಮಾಡಿಕಂಡ. ಇವುನು ಹೋರಾಟ. ಸುರು ಮಾಡಿಕಂಡ ಅಷ್ಟೆ."

"ದ್ಯಾವೇಗೌಡ್ರ ಹೋರಾಟದ ಹಿನ್ನೆಲೆ ಗೊತ್ತೇನೊ ನಿನಿಗೇ?" ಎಂದುಕೊಂಡು ವಾಟಿಸ್ಸೆ ಹಾಜರಾದ.

"ಹಿನ್ನೆಲೆ ಬ್ಯಾರೆ ಇದ್ದತೇನೊ?"

"ಊ ಕಣೊ. ದ್ಯಾವೇಗೌಡನ ಮಗ ಬಾಲಕೃಷ್ಣೇಗೌಡ ಅಂತ ಅವುನೆ. ಅವುನು ಒಂಥರಾ ಗುರುವಿನ ತ್ವಾಡಿದ್ದಂಗೆ. ಅವುನ ಪುತಾರ ಬೆಂಗಳೂರಿಂದ ಹಿಡುದು ಮೈಸೂರುಗಂಟ ಇದ್ದತಂತೆ."

"ದೇನು ಸರಿಯಾಗೇಳ್ಳ. ಇಲಿತ್ವಾಡನ ಸುದ್ದಿ ಹೇಳಬ್ಯಾಡ" ಎಂದಳು ಜುಮ್ಮಿ.

"ಆ ತರದ ಎಗ್‌ಜಾಂಪಲ್ಲೇ ಸರಿ ಕಣಕ್ಕಾ. ಈ ತ್ವಾಡನ್ನೆ ತಗೊ. ನಿನ್ನ ಕಣ್ಣಿಗೆ ಕಾಣಂಗೆ ಒಂದು ಬಿಲ ಇರತದೆ. ಆದ್ರೆ ವಳಗಡೆ ಪುತಾರ ಎಷ್ಟಿರತವೆ ಗೊತ್ತೆ? ಅದೇ ತರ ಈ ಬಾಲಕೃಷ್ಣೇಗೌಡ ಅನ್ನೊನು ಎ.ಸಿ. ಯಾಗಿದ್ದಾಗ ಸಂಬಳದ ದುಡ್ಡನ್ನಲ್ಲ ಕೂಡಾಕಿ ಬೆಂಗಳೂರಿಂದ ರಾಮನಗರ ಗಂಟ ಜಮೀನು ತಗೊಂಡು ಹೆಡತಿ ಸವಂಂದಿಕರ ಹೆಸರಿಗ್ಯಲ್ಲಾ ಖಾತೆ ಮಾಡಿಸಿದ್ದನಂತೇ."

"ಯಾಕ್ಲ ಅಂತ ಅನ್ಯಾಯದ ಮಾತಾಡಿ?" ಎಂದ ಕಾಳಮಾವ.

"ದ್ವಡಪ್ಪ, ನಾನೇಳ್ತಯಿರದು ರೂಮರ್ರ ಇರಬವುದು. ಆದ್ರೆ ಬಾಲಕೃಷ್ಣೇಗೌಡನ ಹೆಡತಿ ಸುಮಂದಿಕರೆಸರಲ್ಲಿ ಏನೇನದೆ ಅಂತ ನಿನಿಗೊತ್ತ? ನೆನ್ನ ಮೊನ್ನೆವರಿಗೂ ಅವರು ಜಮೀನು ಕೊಂಡು ಪೇಪರ್‌ನೋರ ಕೈಗೆ ಸಿಕ್ಕಿ ತಿರಗ ವಾಪಸ್ ಬರಕೊಟ್ಟಿದ್ರು."

"ಅದೇನೆ ಇರ್ಲಿ ಕಣೊ ವಾಟಿಸ್ಸೆ, ಆದ್ರೆ ದ್ಯಾವೇಗೌಡನ ದ್ಯಸಿಂದ ಭೂಮಿ ಕಳಕತಿದ್ದ ರೈತರು ಬಚಾವಾದ್ರೊ" ಎಂದ ಉಗ್ರಿ.

"ಅಂಗಲ್ಲ ಕಣೊ, ರೈತರ ದ್ಯಸಿಂದ ದ್ಯಾವೇಗೌಡನ ಮಗನ ಜಮೀನು ಉಳಿತು ಅನ್ನಬವುದು. ದ್ಯಾವೇಗೌಡ ಕಳ್ಳುಬಳ್ಳಿ ಕಾಪಾಡಕ್ಕೆ ಎಷ್ಟು ಕಷ್ಟ ಪಡತನೆ ಅನ್ನದು ಈ ಹೋರಾಟದಲ್ಲಿ ಕಾಣ್ತಾ ಅದೆ."

"ಅದೇನಾರ ಆಗ್ಲಿ, ಮಯಿಳಾ ಮೀಸ್ಲು ಏನಾಯ್ತು ಹೇಳ್ಳ" ಎಂದಳು ಜುಮ್ಮಿ.

"ಯಲ್ಲಾ ನಿನ್ನ ಕಡೆಗೆ ಆಯ್ತು ಕಣಕ್ಕ ನೀನು ಯಾವುದ್ಕು ಎಮ್ಮೆಲ್ಲೆ ಅಥವಾ ಎಂ.ಪಿ. ಆಗಕ್ಕೆ ರೆಡಿಯಾಗಬೇಕು."

"ಅದ್ಯಂಗ್ಲಾ?"

"ನೋಡಕ್ಕಾ, ಥರ್ಟಿ ತ್ರೀ ಪರಸೆಂಟ್ ಮಹಿಳಾ ರಿಜರ್‌ವೇಶನ್ ಬತ್ತಾಯಿರದರಿಂದ, ಸುಮಾರು ಜನ ಎಂಪಿಗಳು, ಎಮ್ಮೆಲ್ಲೆಗಳು ಕ್ಷೇತ್ರ ಕಳಕತ್ತಾ ಅವ್ರುರೆ. ಅದರಲ್ಲಿ ನಮ್ಮ ಜಿಲ್ಲೆ ತಾಲೋಕು ಹೆಂಗುಸರ ಪಾಲಾಯ್ತಾ ಅವೆ. ಯಾಕಪ್ಪಾ ಅಂದ್ರೆ ಮೊದ್ಲಿಂದ ನಮ್ಮ ಜಿಲ್ಲೆಲಿ



ಹೆಂಗಸರೇ ಜಾಸ್ತಿ"

"ನೀನ್ಯಾವಾಗ ಲೃಕ್ಕ ಹಾಕಿದ್ದೇ?"

"ನಾನಾಕಿಲ್ಲ, ಆದ್ರೆ ಹಿಂದೆ ಒಂದು ಸಮೀಕ್ಷೆನೆ ಹೇಳಿತ್ತು, ಓಟು ಮಾಡೋರಲ್ಲಿ ಗಂಡಸರಿಗಿಂತ ಹೆಂಗಸರು ಮೂರು ಸವುರ ಜಾಸ್ತಿ ಅವುರೆ ಅಂತ. ಆ ಸಂಖ್ಯೆ ಈಗ ಇನ್ನು ಜಾಸ್ತಿಯಾಗಿರತದೆ."

"ಅದ್ಯಂಗೇಳ್ತೀ?"

"ಸುಮಾರು ಜನ ಡ್ರಿಂಕ್ಸ್ ಹ್ಯಾಬಿಟ್ಟಿರೋರು ಹೋಗಿಬುಟ್ಟಿರತರೆ. ಅಮ್ಯಾಲೆ ಆಕ್ಸಿಡೆಂಟ್‌ಗಳಲ್ಲಿ ಬರೀ ಗಂಡಸರೇ ಸಾಯ್ತರೆ. ಗಂಡುಸುರು ಸತ್ತೆ ಏನಾಯ್ತದೇಳು?"

"ನೀನೇ ಹೇಳ್ಳ."

"ವಿಡೋಸ್ ಜಾಸ್ತಿಯಾಯ್ತರೆ. ಅಂದ್ರೆ ಗಂಡ ಸತ್ತವರ ಸಂಖ್ಯೆ ಜಾಸ್ತಿಯಾಯ್ತಾ ಹೋಯ್ತದೆ. ಆದ್ರಿಂದ ನಮ್ಮ ಜಿಲ್ಲೇಲಿ ಮತ್ತೆ ನಮ್ಮ ತಾಲೂಕಲ್ಲಿ ಇನ್ನುಮುಂದೆ ನಿಮ್ಮದೇ ರಾಜ್ಯಭಾರ. ನೀವು ಹೇಳಿದಂಗೆ ನಾವು ಕೇಳಬೇಕು. ನಿಮ್ಮಿಂದೆ ನಾವು ತಿರುಗಬೇಕು ಕಣಕ್ಕ"

"ಮಹಿಳಾ ಮೀಸ್ಲು ಬಂದ್ರೂ ಜುಮ್ಮಿಯಂಥೋರು ಯಲಕ್ಷನ್ನಿಗೆ ನಿಲ್ಲಕ್ಕಾಗದಿಲ್ಲ ಕಣೊ ವಾಟಿಸ್ಸೆ" ಎಂದ ಉಗ್ರಿ.

"ಯಾಕಾಗದಿಲ್ಲ? ನಾವೇ ನಿಲ್ಸನ."

"ವಸೀದುಡ್ಡು ಬೇಕೇನೊ? ಅದ್ಕೆ ಮುಂದೆ ಎಮ್ಮೆಲ್ಲೆಗಳು ತಮ್ಮ ಹೆಂಡತೀರ ನಿಲ್ಲಿಸಿಗತ್ತರೆ. ಎಂಪಿಗಳು ತಮ್ಮ ಹೆಂಡತಿರ ನಿಲ್ಲಿಸಿಗತ್ತರೆ. ಆಗ ಗಂಡಲ್ಲ ಹೆಂಡತಿ ಅನ್ನೊ ರಾಜಕಾರಣ ಸುರುವಾಯ್ತದೆ."

"ಏನಾರ ಆಗ್ಲಿ, ನಾವೀಗ ಮಹಿಳಾ ಕ್ಯಾಂಡೇಟ್ ತಯಾರು ಮಾಡ್ಬೇಬೇಕು ಕಣೊ ಉಗ್ರಿ."

"ಕ್ಯಾಂಡೇಟಿಗೇನು ಬರಿಲ್ಲ, ದುಡ್ಡಿಗೆ ಬರ ಕಣೊ."

"ನೋಡೋ ಉಗ್ರಿ, ಚುನಾವಣೆಯ ಬಗ್ಗೆ ಲಂಕೇಶ್ ಹೇಳಿದ್ರಲ್ಲ ಅಂಗೆ ಮಾಡಿದ್ರಾಯ್ತು ಕಣೊ. ಸಿಂಬಲ್ಲಿರೋ ಹ್ಯಾಂಡಬಿಲ್ಲ ಹ್ವಡಿಸಿಗಳದು. ಯಲ್ರು ಕೈಗೂ ಕೊಡದು. ಕೈ ಮುಗಿಯದು. ಮುಂದ ಕೋಗದು. ಜನ ಬೇಕಾದ್ರೆ ಆರಿಸಿಗತ್ತರೆ, ಇಲ್ಲ ಬುಡ್ತರೆ. ಯಂಗದೆ ದ್ವಡಪ್ಪ ಯಲಕ್ಷನ್ನು."

"ಅದೂ ನಿಜವೆ ಬುಡು. ಹಿಂದ್ಯಲ್ಲ ಅಂಗೆ ಕಂಡ್ರ ನ್ಯಡಿತಿದ್ದುದು. ಇದೇ ನಮ್ಮ ಹೆಚಟಿ ಕೃಷ್ಣಪ್ಪ ಊರು ಮುಂದಕೆ ಬಂದು ಯಲ್ಲಾರಿಗೂ ಕೈಮುಗುದು ಹೋಗೋನು. ನಾವು ಓಟು ಕೊಡವು. ಗೆಲ್ತಿದ್ರು. ಯಲಕ್ಷನಿಗೆ ನಿಂತಿದ್ದಿನಿ ತಗಳಿ ಅರೆತ ಅವುರೂ ಏನ್ನು ಕೊಡ್ತಿಲ್ಲ, ನಾವು ಕೇಳ್ತಿಲ್ಲ, ಅಗೊ ಅಂಗೆ ಯಲಕ್ಷನ್ ನ್ಯಡಿಯವು" ಎಂದ ಕಾಳಮಾವ.

"ಈಗ್ಲು ಅಂಗೆ ಮಾಡನ ರೆಡಿಯಾಗಕ್ಕ, ಯಾವುದ್ಕು ಮದ್ಲು ಸೋನಿಯಾಗಾಂಧಿಗೆ ಥ್ಯಾಂಕ್ಸ್ ಹೇಳಕ್ಕ."


"ಯಾಕ್ಲ?"

"ಅವುಳು ಮಹಿಳಾ ರಾಷ್ಟ್ರಪತಿ ಮಾಡಿದ್ಲು ಮಹಿಳಾ ಸ್ಪೀಕರ್ ಮಾಡಿದ್ಲು, ಈಗ ಮಹಿಳಾ ಮೀಸಲಾತಿ ಪಾಸ್ ಮಾಡ್ಯವುಳೆ. ಸಿ ಈಸ್ ಗ್ರೇಟ್."

" !?"

ಬಹುಸತೀತ್ವ





'ಸಹಬಾಳ್ವೆಯನ್ನೆ ಇಷ್ಟಪಡದ ನೀಚರು', 'ಪುರೋಹಿತಶಾಹಿಯನ್ನು ತರಲು ತುದಿಗಾಲ ಮೇಲೆ ನಿಂತವರು' ಇತ್ಯಾದಿಯಾಗಿ ಬಿಜೆಪಿ, ಆರೆಸೆಸ್‌ಗಳ ಬಗ್ಗೆ ಟೀಕೆ, ಆಕ್ಷೇಪಣೆ ಇದೆ. ಅವೆಲ್ಲ ನಿಜ. ಅದೆಲ್ಲಕ್ಕಿಂತ ಗಂಭೀರವಾದದ್ದು ಈ ಆರೆಸೆಸ್, ಬಿಜೆಪಿಗಳು ಹೇಳುವ ಸುಳ್ಳು. ಮುಸ್ಲಿಮರು ಅನೇಕರನ್ನು ಮದುವೆಯಾಗುತ್ತಾರೆ; ನೂರಾರು ಜನ ಮಕ್ಕಳನ್ನು ಮಾಡುತ್ತಾರೆ ಎಂದು ಹೇಳುವ ಸುಳ್ಳಿಗೆ ಒಮ್ಮೆ ಅಂಕಿಅಂಶಗಳ ಮೂಲಕ ಉತ್ತರಿಸಿದ್ದೇವೆ. ಮೊನ್ನೆ ಒಂದು ಕುತೂಹಲಕರ ವಿಷಯ ತಿಳಿಯಿತು. ಅದೇನೆಂದರೆ, ಭಾರತದ ಜಾತಿಗಳು ಮತ್ತು ಬಹುಪತ್ನಿತ್ವವನ್ನು ಗಮನಿಸಿದರೆ ಇಲ್ಲಿ ಒಬ್ಬ ಹೆಂಗಸಿಗಿಂತ ಹೆಚ್ಚು ಜನರನ್ನು ಮದುವೆಯಾಗುವವರು ಜೈನರು; ಆಮೇಲೆ ಬೌದ್ಧರು; ಆಮೇಲೆ ಹಿಂದೂಗಳು; ಇವರೆಲ್ಲ ಆದಮೇಲೆ ಮುಸ್ಲಿಮರು. ಇದು ವಿಚಿತ್ರ. ನಮ್ಮಲ್ಲಿ ಅತ್ಯಂತ ಸಾಧುವಾದ ಧರ್ಮ ಜೈನಧರ್ಮ. ಆ ಗುಣಕ್ಕೂ ಈ ಮದುವೆಗಳಿಗೂ ಏನಾದರೂ ಸಂಬಂಧವಿದೆಯೆ? ಗೊತ್ತಿಲ್ಲ. ಇದರ ಜೊತೆಗೇ ಇನ್ನೊಂದು ವಿಷಯ. ನಾನು ಭಾರತದಲ್ಲಿ ಬೌದ್ಧರಿಗಿಂತ ಜೈನರು ಜಾಸ್ತಿ ಇದ್ದಾರೆಂದು ತಿಳಿದಿದ್ದೆ. ಅದು ತಪ್ಪು, ಇಲ್ಲಿ ಬೌದ್ಧರ ಸಂಖ್ಯೆ ಅರವತ್ತೂವರೆ ಲಕ್ಷ; ಜೈನರ ಸಂಖ್ಯೆ ನಲವತ್ತೊಂದು ಲಕ್ಷ.

ನಾನು ಹೋಗದ ಜಾಗ


ನಾನು ಈ ಪಾರ್ಟಿಗಳನ್ನು ಇಷ್ಟಪಡುತ್ತೇನೋ ಇಲ್ಲವೋ? ಬಹಳ ವರ್ಷಗಳ ಹಿಂದೆ ಈ ಗುಂಡಿನ ಪಾರ್ಟಿಗಳಿಗೆ ಯಾರಾದರೂ ಕರೆಯದಿದ್ದರೆ ಬೇಸರವಾಗುತ್ತಿತ್ತು. ಕ್ರಮೇಣ ಇವೆಲ್ಲ ನನ್ನ ನರಗಳ ಮೇಲೆ ಪರಿಣಾಮ ಬೀರತೊಡಗಿದವು; ಅಸಹ್ಯ ಹುಟ್ಟಿಸತೊಡಗಿದವು. ಕ್ಲಬ್‌ಗಳಿಗೆ ನಾನು ಸದಸ್ಯನಾಗುವುದಿಲ್ಲ; ಪಾರ್ಟಿಗಳಿಗೆ ಹೋಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಕುಡಿದು **non-stop** ಮಾತಾಡುವವರನ್ನು ನನಗೆ ಕಂಡರಾಗುವುದಿಲ್ಲ, ಅದನ್ನು ಹೇಗಾದ್ರೂ ಸಹಿಸಬಲ್ಲೆ ಒಂದು ವೇಳೆ ನಾನೇ ಹಾಗೆ ಮಾತಾಡಿಬಿಟ್ಟಿದ್ದರೆ? ಕೆಟ್ಟ ವರ್ತನೆಯ ಮಾತು ಬೇರೆ; ನನ್ನ ವ್ಯಕ್ತಿತ್ವಕ್ಕೆ ಹೊಂದದ ಮಾತು ಬಂದಿದ್ದರೆ ತುಂಬ ಮುಜುಗರವಾಗುತ್ತದೆ; ಆ ಬಗ್ಗೆ ಕ್ಷಮೆ ಕೇಳಲೂ ಆಗುವುದಿಲ್ಲ, ಎಲ್ಲವೂ ಕ್ಲಿಷ್ಟ. ಅಲ್ಲದೆ ಪಾರ್ಟಿಗಳಲ್ಲಿ ನಮಗೆ ಗೊತ್ತಿಲ್ಲದ, ವಿಚಿತ್ರ ಜನರೆಲ್ಲ ಬಂದಿರುವುದು ಸಾಧ್ಯವಿರುತ್ತದೆ. ಒಮ್ಮೆ ಹಾಗೇ ಆಯಿತು. ಒಂದು ಪಾರ್ಟಿಗೆ ಕಾರ್ ರೇಸ್‌ನ ಛಾಂಪಿಯನ್ ಒಬ್ಬ ತನ್ನ ಪತ್ನಿ ಸಮೇತ ಬಂದುಬಿಟ್ಟಿದ್ದ ...ನ ಅನುಭವವನ್ನು ಮತ್ತೆಮತ್ತೆ ಪುನರಾವರ್ತಿಸಿ ಈತ ಹೇಳತೊಡಗಿದ. ಇನ್ನೊಂದು ಪಾರ್ಟಿಗೆ ತನ್ನ ನಾಲ್ಕು ವರ್ಷದ ಮಗುವನ್ನು ಕರೆತಂದ ತಾಯಿ, "ಅಂಕಲ್‌ಗೆ ನಮಸ್ಕಾರ ಮಾಡು, ನೀನು ನಾಟಕದಲ್ಲಿ ಆಡಿದ್ದು ತೋರಿಸು" ...ಳಿದಳು. ಇನ್ನೇನು ಮಗು ಮಾನೋ ಆಕ್ಟಿಂಗ್ ಶುರು ಮಾಡಬೇಕು. "ಮಕ್ಕಳನ್ನು ಹಾಗೆ ಗೋಳಾಡಿಸಿ ಜಡೆಗೊಳಿಸಬಾರದು. **That's sickening**" ಅಂದೆ. ಅದೇನೂ ಮಕ್ಕಳ ಬಗ್ಗೆ ಕರುಣೆ, ಪ್ರೀತಿ ಅಲ್ಲ. ಮಕ್ಕಳನ್ನು ...ದು, ಮಕ್ಕಳು ನಮ್ಮನ್ನು ಇಷ್ಟಪಡುವುದು ಸಹಜವಾಗಿರಬೇಕು. ಓಡ್‌ಹೌಸ್‌ನಲ್ಲಿ ಈ ಮಕ್ಕಳದೇ ದೊಡ್ಡ ಕತೆ. 'ಅವನ್ನು ಮುಗ್ಧ ಸಾರ್ವಜನಿಕರ ಮೇಲೆ ಪ್ರಯೋಗಿಸಬಾರದು' ಎಂದು ಆತ ಹೇಳುತ್ತಾನೆ. ಅಲ್ಲಿ ಬರುವ ಎಡ್ವಿನ್, ...ಮುಂತಾದ ಮಕ್ಕಳು ಬೆಂಕಿಯಲ್ಲಿ ಕಾಲಿಟ್ಟು ಬಂದ ಗುಳ್ಳೆಗಳಂತೆ ಅಥವಾ **blisters.....** ಹಾಗೆಯೇ ಇನ್ನೊಬ್ಬ ಹೇಳಿದ್ದಾನೆ, "ಹೆಂಗುಸರು ಒಳ್ಳೆಯವರು. ಅವರನ್ನು ಕಂಡರೆ ಯಾರಿಗೆ ಇಷ್ಟವಿಲ್ಲ? ಆದರೆ **they should ...n at sixteen and die at thirty.....**" ಹುಡುಗಿಯರು ಬೇಸರಪಟ್ಟುಕೊಳ್ಳಬಾರದು. ಗಂಡಸರ ಬಗ್ಗೆ ಕೂಡ (ಅವರನ್ನು ಬಲ್ಲವರು!) ಹಾಗೇ ಹೇಳಬಹುದು.

-ಜುಲೈ 21, 1993

ನಿತ್ಯಾನಂದನ ಅಪ್ಪಿಕೋ ಆಶೀರ್ವಾದ

ಮದುವೆ ಮನೆಗಳ ಅನುಭವ ಎಲ್ಲರಿಗೂ ಆಗಿರುತ್ತೆ ಆ ಮಂತ್ರ ಪತ್ರ ಬಂದಿದೆಯಲ್ಲಾ ಎಂಬ ಸಂಕಟಕ್ಕೆ ಮದುವೆ ಮೂಹೂರ್ತದಲ್ಲಿ ಹಾಜರಾಗುವವರು ಬಹಳ ಮಂದಿಯೇ ಇರುತ್ತಾರೆ. ಮದುವೆ ಮನೆಗಳಲ್ಲಿ ಮದುವೆ ಗಂಡಿಗೆ ಹೆಣ್ಣಿನ ಮೇಲೆ ಆಸೆ, ಮದುವೆ .... ಗಂಡಿನ ಮೇಲೆ ಆಸೆ. ಆ ಬಾಕಿ ಇರುತ್ತಾರಲ್ಲ ನಮ್ಮಂತಹವರು ಅವರಿಗೆ ಊಟದ ಮೇಲೆ ಆಸೆ ಎನ್ನುವ ಸಂಪ್ರದಾಯವೇ ಬೆಳೆದು ಬಂದಿದೆ. ಕೆಲವರು ಮದುವೆಗೆ ಬಂದಿರುತ್ತಾರಲ್ಲ ಅವರಿಗೆ ಒಂದು ಒಲವತ್ತರವಾದ ಒಳಾಸೆ ಇರುತ್ತೆ. ಅದೇನು ಅಂದರೆ ಮಧುವವರು ಬಂದು ತಮ್ಮ

ಅಣಕ



ಎಚ್.ಎಲ್. ಕೇಶವಮೂರ್ತಿ

ಆಶೀರ್ವಾದ ಪಡೆಯಲಿ ಎಂಬುದು. ಈ ಸೀನು ಆರಂಭ ಆಗುವುದು ಧಾರಾಮೂಹೂರ್ತವೆಲ್ಲ ಸಾಂಗವಾಗಿ ನೆರವೇರಿದ ಮೇಲೆ. ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವ ಸಂದರ್ಭದಲ್ಲಿ, ನೂತನ ವಧುವರರು ಬಂದು ಹಿರೀಕರ ಪಾದಗಳಿಗೆ ಸಮಸ್ಕಾರ ಮಾಡಿ ಅವರ ಆರ್ಶೀವಾದ ಪಡೆಯಬೇಕು. ಆಗಲೇ ಅವರ ಮುಂದಿನ ಬಾಳು ಆನಂದಮಯವಾಗಿರುತ್ತದೆ ಎಂಬ ನಂಬಿಕೆ ಇದೆ. ಹೀಗೆ ಆರ್ಶೀವಾದ ನೀಡುವ ಹಕ್ಕು ತಮಗಿದೆ ಎಂದೇ ಹಲವು ಹಿರಿಯರ ಅಭಿಪ್ರಾಯ. ಒಂದು ವೇಳೆ ಹೀಗೆ ಯಾರಿಗಾದರೂ 'ಪಾದ ನಮಸ್ಕಾರ' ಮಾಡಿದೆ ಆರ್ಶೀವಾದ ತೆಗೆದುಕೊಳ್ಳದಿದ್ದರೆ ಮುದಿಯರಿರದೆ ಅಸಮಾಧಾನದ ದೊಡ್ಡ ರಾದ್ಧಾಂತವೇ ಆಗಿಹೋಗುತ್ತದೆ. ಮುಂದಿನ ಬಾಳು ಹಾಗಿರಲಿ, ಅವತ್ತೇ ನರಕದರ್ಶನ ಮಾಡಿಸುತ್ತಾರೆ. ಇದನ್ನು ಅನುಭವದಿಂದ ಅರಿತವರೊಬ್ಬರು ಯಾರ, ಯಾರ ಕಾಲಿಗೆ ಬೀಳಬೇಕು ಎಂಬುದಕ್ಕೆ ಮಾರ್ಗ ದರ್ಶಿ ಪಾತ್ರ ವಹಿಸುತ್ತಾರೆ. ಆತ ನಿರ್ದೇಶಿಸಿದ ವ್ಯಕ್ತಿ ಕೊಳಕ ಮಹಾಶಯರೇ ಆಗಿರಬಹುದು; ದೇಹದಾದ್ಯಂತ ವಿಷವನ್ನೇ ತುಂಬಿಕೊಂಡಿರಬಹುದು; ಇನ್ನೊಬ್ಬರ ಏಳ್ಗೆಯನ್ನು ಸಹಿಸದವನೇ ಆಗಿರಬಹುದು. ಆದರೆ ಹಿರೀಕರು ಎಂಬ ಹೆಚ್ಚುಗಾರಿಕೆ ಇದೆಯಲ್ಲಾ... ಅವರೆಲ್ಲರ ಪಾದಕ್ಕೆ ನಮಿಸ್ಕರಿಸಲೇಬೇಕು, ಆರ್ಶೀವಾದ ಪಡೆಯಲೇ ಬೇಕು. ಕಾಲು ತೊಳೆದು ಎಷ್ಟು ಶತಮಾನಗಳ ಕಳೆದುವೋ, ಕಾಲೆಲ್ಲ ಧೂಳುಮಯ ಆಗಿದೆ, ಅದನ್ನು ಮುಟ್ಟದರೆ ಯಾವ ರೋಗ ಬಡಿಯುತ್ತೊ ಅನ್ನುವ ಸ್ಥಿತಿಯಲ್ಲಿದ್ದರೂ ಆ ಕೊಳಕು ಕಾಲುಗಳಿಗೂ ನಮಸ್ಕಾರ ಮಾಡಲೇಬೇಕು. ಆಗ ನೋಡಿ ಕೊಳಕು ಕಾಲುಗಳ ಮುದಿಯರಿಗೆ ಸಮಾಧಾನ ನಮಸ್ಕಾರ ಮಾಡಲೇಬೇಕು. ಆಗ ನೋಡಿ ಕೊಳಕು ಕಾಲುಗಳ ಮುದಿಯರಿಗೆ ಸಮಾಧಾನ ಎಂಬುದು ತಾಂಡವವಾಡುತ್ತದೆ. 'ನನಗ್ಯಾಕಪ್ಪ ನಮಸ್ಕಾರ ಮಾಡ್ತೀರಿ' ಎಂದು ಬಾಯಲ್ಲಿ ಹೇಳುತ್ತಾ 'ದೇವರಿಗೆ ದೇವರಿಗೆ' ಎಂಬ ಒಂದು ಮಾತನ್ನು ಬಿಸಾಕಿ ಎದೆ ತುಂಬಿ ಆಶೀರ್ವಾದಿಸುತ್ತಾರೆ.

ಇದು ಆಶೀರ್ವಾದ ಪಡೆಯುವ ಒಂದು ರೀತಿಯ ಮಾರ್ಗವಾಯಿತು. ಮಠಾಧೀಶರ, ಜಗದ್ಗುರುಗಳ ಆಶೀರ್ವಾದ ಪಡೆಯುವ ನಾನಾ ವಿಧಾನಗಳುಂಟು. ಪಾದ ಪೂಜೆಯ ಸಂಪ್ರಾದಯ ಅವರ ಬಳಿಯೂ ಉಂಟು. ಆದರೆ ಆಶೀರ್ವಾದದ ಖಾತರಿ ಇರಲ್ಲ, ಅವರ ಪಾದಗಳೇನು ಸಾಮಾನ್ಯವಾ... ಮುಟ್ಟದವರಿಗೆಲ್ಲ ಆರ್ಶೀವಾದ ಮಾಡೋಕೆ. ಅದಕ್ಕೆ ಕಾಣಿಕೆ ನೀಡಬೇಕು– ಗುರುಕಾಣಿಕೆ ಅಂತಾವ.... ಗುರುಮಠಕ್ಕೇ ಹಾಜರಾಗಿ ಆಶೀರ್ವಾದ ಪಡೆಯಬೇಕಾದರೆ ಎಷ್ಟು ಕಾಣಿಕೆ ಅಂತಾವ. ಗುರುಮಠಕ್ಕೇ ಹಾಜರಾಗಿ ಆಶೀರ್ವಾದ ಪಡೆಯಬೇಕಾದರೆ ಎಷ್ಟು ಕಾಣಿಕೆ ನೀಡಬೇಕು, ಗುರುಗಳನ್ನು ಭಕ್ತರು ತಮ್ಮ ಮನೇಗೆ ಕರಸಿಕೊಂಡು ಪಾದಪೂಜೆ ಮಾಡಿದರೆ ಅದರ ರೇಟೆಸ್ಟು ಎಂಬವುಗಳೆಲ್ಲ ನಿರ್ಧಾರ ಆಗಿರುತ್ತಂತೆ. ಇಂತಹವಕ್ಕೆಲ್ಲ 'ಪಾದ ಕಾಣಿಕೆ ಆಶೀರ್ವಾದ' ಅನ್ನಬಹುದು.

ಇತ್ತೀಚೆಗೆ ಆಶೀರ್ವಾದ ಪಡೆಯುವ ನೂತನ ಅವಿಷ್ಕಾರಗಳು ಬಳಕೆಗೆ ಬರುತ್ತಿವೆ. ಅದರಲ್ಲಿ ಒಂದು 'ಅಪ್ಪಿಕೊ ಆಶೀರ್ವಾದ.' ಈ ವಿಧಾನದ ಗೌರವ ಸಲ್ಲಬೇಕಾದ್ದು ಮಾತೆ ಅಮೃತಾಮಯಿ ಅವರಿಗೆ. ಮಾತೆಯವರು 'ಕಾಣಿಕೆ ಪಾದಪೂಜೆಗೆ' ಸೀಮಿತರಾಗಿಲ್ಲ. ಕರುಣಾಮಯಿ ತಾಯಿಯ ಕೃಪಾಕಟಾಕ್ಷಕ್ಕೆ ಪಾತ್ರರಾದವರನ್ನು ವೇದಿಕೆಗೆ ಕರೆಸಿಕೊಳ್ಳುತ್ತಾರೆ. ಅವರನ್ನು ತಬ್ಬಿಕೊಂಡು ಆಶೀರ್ವಾದಿಸುತ್ತಾರೆ. ದೇಹ ದೇಹ ಸಮ್ಮಿಳನ ಆದರೆ ಭಕ್ತರ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂಬ ನಂಬಿಕೆಯಿಂದ ಇರಬೇಕು. ಎಲ್ಲೋ ಕೆಲವು ಪೋಲಿಪುಂಡರು ಇದಕ್ಕೇ ಅಪಾರ್ಥ ಕಲ್ಪಸುತ್ತಾವೆ ಇದು ಒಂದು ರೀತಿಯ ಮಾನಸಿಕ ರೋಗ ಅಂತವೆ. ಇಂತಹ ಹುಚ್ಚರಿಗೆಲ್ಲ ಉತ್ತರ ಹೇಳೋಕೆ ಸಾಧ್ಯ ಇಲ್ಲ ಬಿಡಿ.

ಈ ಮಾತೆ ಎಷ್ಟು ಕರುಣಾಮಯಿ ಅನ್ನುವುದಕ್ಕೆ ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ಮನೆಮಠ ಕಳೆದುಕೊಂಡರಲ್ಲ ಅವರ ನೋವು ಕಂಡು ಮರುಗಿದರು. ಸಂತ್ರಸ್ತರಿಗೆ ಐದು ನೂರು ಮನೆಗಳನ್ನು ಕಟ್ಟಿಸಿಕೊಡ್ತೇನೆ ಎಂದು ವಾಗ್ದಾನ ಮಾಡಿದರು. ಅದರಂತೆಯೇ ನೂರು ಮನೆಗಳನ್ನು ಕಟ್ಟಿಸಿಯೂ ಕಟ್ಟಿಸಿದರು. ಅದರ ಉದ್ಘಾಟನೇನೂ ಮಾಡಿಸಿದರು. ಯಾರಿಂದ ಅಂತೀರಿ ಮಾನ್ಯ ಮುಖ್ಯಮಂತ್ರಿ ಯಡ್ಯೂರಪ್ಪನವರಿಂದ.

ಒಂದೂವರೆ ಕೋಟಿ ಹಣ ಖರ್ಚು ಮಾಡಿ ಮನೆಗಳನ್ನು ನಿರ್ಮಿಸಿ ಬಡ ಜನತೆಗೆ ನೀಡಿದರು ಅಂದರೆ ಹುಡುಗಾಟಾನಾ. ಅದೇನೋ ಯಾವಾಗಲೋ ಒಂದು ಸಲ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರಂತೆ.... ಬೆಂಗಳೂರಿನಲ್ಲಿ ಸಂಸಜ್ಜಿತ ಆಸ್ಪತ್ರೆ ಕಟ್ಟಿಸ್ತೀವಿ ಒಂದು ಹದಿನೈದು ಎಕರೆ ಜಮೀನು ಕೊಡಿ ಅಂತಾವ. ಯಾವ ಜಾಗದಲ್ಲಿ ಕೊಡಬೇಕು ಅಂತಾನೂ ತಿಳಿಸಿದ್ದರಂತೆ. 'ಅಮ್ಮ' 'ಅಪ್ಪಿಕೊ ಆಶೀರ್ವಾದ' ಮಾಡಿದ್ದರಿಂದ ಪುಳಕಿತರಾದರೇನೋ ಯಡ್ಯೂರಪ್ಪನವರು. ಅವರು ಕೇಳುತ್ತಿರುವುದು ಹೆಚ್ಚೋ, ನಾವು ನೀಡುವುದು ಹೆಚ್ಚೋ, ನಾವು ನೀಡುವುದು ಹೆಚ್ಚೋ, ಭಗವತಿ ಸ್ವರೂಪಿಣಿಗೆ ಇಲ್ಲ ಅಂದರೆ ಲೋಪ ಆಗುತ್ತೆ ಅಂತಾವ ತಗಳಿ ಹದಿನೈದೆಕರೆಯ ಅಂತ ನಿಂತ ನಿಲುವಿನಲ್ಲೇ ಒಪ್ಪಿಗೆ ಸೂಚಿಸಿದರು. ಇಷ್ಟಾದರೂ ಯಡ್ಯೂರಪ್ಪಗೆ ಇದೂ ಸಾಲದು ಅನ್ನಿಸಿತು. ಇದರ ಜೊತೆಗೆ ಐದು ಕೋಟಿ ರೂಪಾಯಿಗಳನ್ನು ಕೊಡ್ತೀನಿ ಅಂತ ಭರವಸೆ ನೀಡಿದರು. ಈ ಆಶ್ವಾಸನೆಗಳನ್ನು ಕೃತಿಗೆ ಇಳಿಸಬೇಕು ಎಂದು ಸನ್ಮಾನ್ಯರು ಏನು ಮಾಡಿದರು ಅಂದರೆ ಬಡ್ಜೆಟ್‌ನಲ್ಲಿ ಇದ ಸೇರಿಸಿಯೂಬಿಟ್ಟರು. ಮಠಮಾನ್ಯಗಳಿಗೆ ಬಡ್ಜೆಟ್‌ನಲ್ಲಿ ಐವತ್ತೇಳು ಕೋಟೀನೆ ನೀಡ್ತಿರುವಾಗ ಇದು ಯಾವ ಜುಜುಬಿ ಬಿಡಿ.

ಅಂತೂ ಇಂತೂ 'ಅಪ್ಪಿಕೋ ಆಶೀರ್ವಾದ'ದಿಂದ ಯಾರಿಗೂ ನಷ್ಟ ಆಗಲಿಲ್ಲ, ಯಡ್ಯೂರಪ್ಪನವರ ಖಾತೆಗೆ ದಾನ ಮಾಡಿದ ಪುಣ್ಯ ದಾಖಲಾಯಿತು. 'ಅಮ್ಮ' ಅವರ ಖಾತೆಗೆ ಆಸ್ತಿ ದಾಖಲಾಯಿತು. ಬಡವರ ಗೋಳು ಇದ್ದದ್ದೇ ಬಿಡಿ. ಅವರು ಯಾವ ಕಾಲದಲ್ಲಿ ನೆಮ್ಮದಿಯಾಗಿದ್ದರು ಅಂತಾವ. ಇಂತಹವನ್ನೆಲ್ಲ ಆಡಳಿತ ನಡೆಸುವವರು ನೆನೆಸಿಕೊಳ್ಳುತ್ತಿದ್ದರೆ ವಿಷ ಕುಡೀಬೇಕು ಅಷ್ಟೇಯೆ.

'ಅಮ್ಮ'-ಯಡ್ಯೂರಪ್ಪ ವ್ಯವಹಾರ ಲೌಕಿಕ ಹಾಗೂ ಪಾರಮಾರ್ಥಿಕ ಸಿದ್ಧಿಯನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತಷ್ಟೇ. ಇದನ್ನು ಒಂದು ರೀತಿಯಲ್ಲಿ ವಿನ್‌ವಿನ್ ಸಮಾಚಾರ ಅನ್ನಬಹುದು. ಈ 'ಅಪ್ಪಿಕೊ ಆಶೀರ್ವಾದ' ಕೆಲವು ಸಲ ಯಡವಟ್ಟಾಗಿ ಬಿಡುತ್ತೆ.



ಪಾಪ ನಿತ್ಯಾನಂದ ಸ್ವಾಮಿಗೆ ಆದದ್ದು ನೋಡಿ. ಸಾಕ್ಷಾತ್ ಕೃಷ್ಣನ ಅವತಾರವಂತೆ ಅವರು. ಅವರ ಕೃಪಾಕಟಾಕ್ಷ ಭಕ್ತೆಯರ ಮೇಲೇ ಬೀಳುತ್ತಿತ್ತಂತೆ. ಮಹಾಭಾರತದ ಶ್ರೀಕೃಷ್ಣನೂ ಹಂಗೇ ಅಲ್ವ. ಯಾವಾಗಲೂ ದ್ರೌಪದಿಯ ಪರವಾಗೇ ಇರುತ್ತಿರಲಿಲ್ವಾ. ಈ ಆಧುನಿಕ ಕೃಷ್ಣನೂ ಹಂಗೇ ಅಂತೆ. ತಮ್ಮ ಕೃಪಾಕಟಾಕ್ಷ ಬಿದ್ದ ಹೆಣ್ಣುಮಗಳಿಗೆ 'ಅಪ್ಪಿಕೋ ಆಶೀರ್ವಾದ' ನೀಡುತ್ತಿದ್ದರಂತೆ. ಆಶೀರ್ವಾದ ಪಡೀತ್ತಿದ್ದಂಗೆ ವಿದ್ಯುತ್ ಸಂಚಾರವಾಗಿ ತಾವು ಗೋಪಿಕಾಸ್ತ್ರೀಯರು ಎಂಬ ಭಾವನೆ ಮೂಡುತ್ತಿತ್ತಂತೆ. ಒಮ್ಮೊಮ್ಮೆ ಭಕ್ತೆಯರು ಪರಾಕಾಷ್ಠೆ ತಲುಪುತ್ತಿದ್ದರಂತೆ. ಒಂದು ಕಡೆ ಆಧುನಿಕ ಕೃಷ್ಣ ಮತ್ತೊಂದು ಕಡೆ ಗೋಪಿಕಾಸ್ತ್ರೀಯರ ಪರಾಕಾಷ್ಠೆ ತಲುಪಿದ ಭಕ್ತೆಯರು. ಎಂತಹ ದಿವ್ಯಾನಂದದ ಮುಹೂರ್ತ ಅದು! ನಂತರ ಇದ್ದದ್ದೆ, ಮಹಾಭಾರತದ ಕೃಷ್ಣ ಏನೇನು ಮಾಡುತ್ತಿದ್ದನೋ, ಅಷ್ಟೊಂದು ಪರಿಪೂರ್ಣತೆ ಸಾಧಿಸಲು ಸಾಧ್ಯವಾಗಿಲ್ಲವಾದರೂ ಯಥೋಶಕ್ತಿ ಆಧುನಿಕ ಕೃಷ್ಣನೂ ಶ್ರಮಿಸಿದ!

ಹಾಳಾದ ಈ ಲೋಕವೇ ಹೀಗೆ. ಯಾರಾದರೂ ಸುಖವಾಗಿದ್ರೆ ತಡೆದುಕೊಳ್ಳಲಾರರು. ಆಶ್ರಮದಲ್ಲೇ ಇದ್ದ ಕಡುಪಾಪಿಯೊಬ್ಬ ಇದನ್ನೆಲ್ಲ ಚಿತ್ರೀಕರಿಸಿ ಬಿಡೋದೆ!

ಟಿವಿ ಚಾನೆಲ್‌ನವರಿಗೆ ಇಂತಹ ವಿಷಯಗಳು ದೊರೆತರೆ ರಸುಗುಲ್ಲ ಸಿಕ್ಕಿದಂಗೋ, ಸಕತ್ ಬಿರ್‍ಯಾನಿ ಸಿಕ್ಕಿದಂಗೋ ಆಗುತ್ತೆ, ರೇಟಿಂಗ್ ಏರಿಸಿಕೋಬೇಕು ಅಂದರೆ ಇಂತಹ ಮಸಾಲೆಗಳು ಬೇಕೇಬೇಕು. ಯಾಕೆಂದರೆ ಬ್ಲೂ ಫಿಲಂ ತೋರಿಸೋ ಹಂಗಿಲ್ಲವಲ್ಲ. ಇಂತಹವು ಸಿಕ್ಕದರೆ ಸುದ್ದಿ ಅನ್ನೊ ಹೆಸರಲ್ಲಿ 'ಸ್ವಾಮಿಯ ರಾಸಲೀಲೆ' ಯನ್ನು ಸಕಲೆಂಟು ಮಿಥುನ ಭಂಗಿಗಳಲ್ಲೂ ತೋರಿಸ ಬಹುದು. ವೀಕ್ಷಕರು ರೋಮಾಂಚನಗೊಳ್ಳುವಂತೆ ಸುದ್ದಿಯ ವಿಶ್ಲೇಷಣೆ ಎಂಬ ಹೆಸರಲ್ಲಿ ಪದೇಪದೇ ಪ್ರದರ್ಶಿಸಬಹುದು. ಚರ್ಚೆಯ ಕೊನೆಯಲ್ಲಿ ಬಹಳಷ್ಟು ಕಾವಿಧಾರಿಗಳು ಮತ್ತು ಸರ್ವಸಂಗಪರಿತ್ಯಾಗಗಳೇ ಎಂಬುದು ಸತ್ಯವಾದರೂ ಇಂತಹ ಒಬ್ಬ ಕಳಂಕಿತನಿಂದ ಹಿಂದೂ ಧರ್ಮಕ್ಕೇ ಕೆಟ್ಟ ಹೆಸರು ಬರುತ್ತದೆ ಎಂಬ ತೀರ್ಪು ಹೇಳಿ ಕಾವಿಧಾರಿಗಳ ಆ ಮೂಲಕ ಹಿಂದೂ ಧರ್ಮದ ರಕ್ಷಣೆಯನ್ನು ಮಾಡಬಹುದು!

ಈ ನಿತ್ಯಾನಂದ ಸ್ವಾಮಿಗೆ ದೇಶ ವಿದೇಶಗಳಲ್ಲಿ ಆಶ್ರಮಗಳು ಬಿಡದಿ ಆಶ್ರಮದಂತೆಯೇ ಇವೆಯಂತೆ. ಸ್ಥಳ ಬದಲಾವಣೆಗೆ ಇರಲಿ ಎಂದು ತನ್ನ ರಾಸಲೀಲೆಗ ಈ ರೀತಿ ಆಶ್ರಮ ತೆರೆದಿದ್ದನೋ ಏನೋ ಗೊತ್ತಿಲ್ಲ. ಆಡಳಿತ ಪಕ್ಷದವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿ ರೇನೋ ಸ್ವಾಮಿಗಳು. ಬೆಂಗಳೂರಿನಲಲಿ ಆಶ್ರಮ ಸ್ಥಾಪಿಸುವುದು ಸುಲಭ. ಒಂದು ಫೋನ್ ಕರೆ ಮಾಡಿದರೆ ಸಾಕು ಬೇಕಾದ ಸೌಲಭ್ಯ ಒದಗಿಸುತ್ತಾರ ಅನ್ನುವ ಮಾತನ್ನು ಹೇಳಿದ್ದರಂತೆ ಅವರು ಕಾವಿ ಕಂಡೇಟಿಗೆ ಕಾಲಿಗೆ ಬೀಳೋ ಯಡ್ಯೂರಪ್ಪನವರನ್ನೂ ಎರಡು ಮೂರು ತಿಂಗಳ ಹಿಂದೆ ಆಶ್ರಮಕ್ಕೆ ಆಹ್ವಾನಿಸಿದ್ದರಂತೆ. ಯಾಕೋ ಏನೋ ಮಾನ್ಯರು ಬಿಡದಿ ಆಶ್ರಮಕ್ಕೆ ಹೋಗಲಾಗಲಿಲ್ಲವಂತೆ. ರಾಸಲೀಲೆಗೆ ಅವಕಾಶ ಇದೆ ಎಂದು ಮೊದಲೇ ತಿಳಿದಿದ್ದರೆ ಗೌರವಾನ್ವಿತರು ತಪ್ಪಿಸಿಕೊಳ್ಳುತ್ತಿರಲಿಲ್ಲವೋ ಏನೋ! ಅವಕಾಶ ಮಿಂಚಿ ಹೋಯಿತು ಬಿಡಿ.

ನಿತ್ಯಾನಂದ ಭೂಗತ ಆಗಿದ್ದಾನೆ ಅಂತ ಕೆಲವರ ಅನ್ನುತ್ತಿದ್ದಾರೆ. ಇಲ್ಲ ಸ್ವಾಮಿಗಳು ಭೂಗತರಾಗಿಲ್ಲ ಕುಂಭಮೇಳಕ್ಕೆ ದಯ ಮಾಡಿಸಿದ್ದಾರೆ ಎಂದು ಕೆಲವ ಅಂಬೋಣ. ಸ್ವಾಮಿಗಳಾಗಲಿ ಆಶ್ರಮವಾಗಲಿ ನಿಷ್ಕಳಂಕ ಇದರಲ್ಲಿ ಯಾವುದೋ ಒಳಸಂಚಿದೆ. ಗ್ರಾಫಿಕ್ಸ್ ತಂತ್ರ ಬಳಿಸಿ ಹೀಗೆ ಸ್ವಾಮಿಗಳ ಮುಖಕ್ಕೆ ಮಸಿ ಬಳಿಯುತ್ತಿದ್ದಾ ಎಂದೆಲ್ಲ ಕಾವಿಧಾರಿ ಸ್ವಾಮಿಗಳನೇಕರು ಸಮಜಾಯಿ ಹೇಳುತ್ತಿದ್ದಾರೆ. ಇವತ್ತು ಇವನಿಗಾದದ್ದು ನಾಳೆ ನಮಗು ಆಗಬಹುದು ಎಂಬ ಆತಂಕ ಕ್ವಾಡುತ್ತಿರಬೇಕು!

ನನ್ನದೊಂದು ಪುಟ್ಟ ಸಲಹೆ. ಇಂಗ್ಲಿಷ್ ಮಾ ನಾಡುವ ಛಾತಿ, ಸಂಸ್ಕೃತ ಶ್ಲೋಕ ಹೇಳುವ ಕಲೆ ಯೋಗ್ಯಾಭ್ಯಾಸ ಮಾಡುವ ರೀತಿ ಇವು ಗೊತ್ತಿದ್ದ ಸಾಕು. ಎಂತಹವನಾದರೂ ಶಿಷ್ಯರ ದಂಡನ್ನೇ ಪಡೆಯ ಬಹುದು ಅನ್ನುವುದಕ್ಕೆ ಬೆಂಗಳೂರಿನ ಸುತ್ತಲೂ ಇರು ಆಶ್ರಮಗಳೇ ಸಾಕ್ಷಿಯಾಗಿವೆ. ಇಂತಹವರೆಲ್ಲರ ರಕ್ಷಣೆ 'ಕಾವಿ ಪಾರ್ಟಿ' ಪ್ರಾರಂಭಿಸಬಾರದ ಅಂತ.....!

ನಿಮ್ಮ ನಡೆ-ನುಡಿಗಳು ಅಕ್ಕರೆ ಉಕ್ಕುವಂತಿದ್ದವು....

'ಲಂಕೇಶ್ 75' ವಿಶೇಷಾಂಕದಲ್ಲಿ ಗೌರಿ ಮೇಡಂ ಅವರ ಅನುವಾದಿತ ಕಥೆ 'ಕ್ಷಾಮ' ಸಮಯೋಚಿತವಾಗಿತ್ತು, ಪ್ರಸ್ತುತ ಸರ್ಕಾರ ಮತ್ತವರ ಬೆಂಗಾಲಿನ ವರು ಹಾಗೂ ಇನ್ನೂ ಅನೇಕ ನೀಚರು, ಕೆಟ್ಟವರು ಇಂಥ ಕತೆಗಳನ್ನು, ಬರಹಗಳನ್ನು ಓದಬೇಕು. ವಿವೇಕ ಶೂನ್ಯತ್ವದಿಂದ ಹೊರಬರಬೇಕು ಎಂಬುದು ಕಳಕಳಿ.

-ಎಂ.ಜವರಾಜ್, ಮೈಸೂರು

'ಲಂಕೇಶ್-75' ವಿಚಾರ ಸಂಕಿರಣವನ್ನು ಸಂಪೂರ್ಣ ಯಶಸ್ವಿಗೊಳಿಸಿದ ನಿಮಗೆ-ನಿಮ್ಮ ತಂಡಕ್ಕೆ ಅಭಿನಂದನೆ ಸಲ್ಲಬೇಕು. ಅಪ್ಪ ಹೋದಾಗ ಅಪ್ಪನ ಪತ್ರಿಕೆಯನ್ನು ಮುಂದುವರೆಸಬೇಕೆಂಬ ಗೌರವದ ಜವಾಬ್ದಾರಿಯನ್ನು ಹೊತ್ತು ಅಪ್ಪನ ಕಚೇರಿಯಲ್ಲೇ ನೆಲೆ ನಿಂತು 'ಪತ್ರಿಕೆ'ಯ ಕಾಯಕವನ್ನು ಏಕಾಗ್ರವಾಗಿ ಕೈಗೊಂಡು 'ಅಪ್ಪನ ನಿಜವಾದ ವಾರಸುಧಾರಿಣಿ' ಎಂದು ಪ್ರೂವ್ ಮಾಡಿಬಿಟ್ಟರಿ. ಉತ್ಪ್ರೇಕ್ಷೆಗಾಗಿ ಹೇಳುತ್ತಿಲ್ಲ, ನೀವು ಈ 6,7 ಎರಡೂ ದಿನಗಳ 'ವಿಚಾರ ಸಂಕಿರಣ'ದಲ್ಲಿ -ಅದರ ಯಶಸ್ಸಿನ ಕಾಳಜಿಯಲ್ಲಿ ಮಗ್ನವಾಗಿದ್ದ ಪರಿಯನ್ನು ಪ್ರತ್ಯಕ್ಷ ಕಂಡು ಈ ಮಾತುಗಳನ್ನು ಬರೆಯಬೇಕೆನಿಸಿತು. ನಿಮ್ಮ ನಡೆ-ನುಡಿಗಳು ಅಕ್ಕರೆ ಉಕ್ಕುವಂತಿದ್ದವು.

'ಸಂಕಿರಣ'ದಲ್ಲಿ ಲಂಕೇಶರ ನಿಷ್ಪಕ್ಷವಾದ ಒಂದು ವ್ಯಕ್ತಿತ್ವದ ಪ್ರಸ್ತುತವಾದ ಸಮರ್ಥಕವಾದ ಶೋಧನೆಯಾಯ್ತು, ಲಂಕೇಶರಿಂದ ದೂರವಾಗಿದ್ದ ಚಂಪಾರವರನ್ನೂ ಆಹ್ವಾನಿಸಿ ಸಮನ್ವಯದ ಅಂಶಕ್ಕೆ ಒತ್ತುಕೊಟ್ಟರಿ. ನಮ್ಮನ್ನು 'ಕವಿಗೋಷ್ಠಿ'ಗಾಗಿ ಆರಿಸಿ ಆಹ್ವಾನಿಸಿ ಉತ್ತಮ ಸಹೃದಯತೆಯನ್ನು ತೋರಿದಿರಿ.

ಲಂಕೇಶರಿಗೆ 75 ತುಂಬಿದ ಸನ್ನಿವೇಶದ ನೆನಪು ಒಂದು ಅರ್ಥಪೂರ್ಣ event ಆಗಿತ್ತು, ಒಳ್ಳೊಳ್ಳೆಯ ಪುಸ್ತಕಗಳ ಮುದ್ರಣ, ಮರುಮುದ್ರಣ!, ಪುಸ್ತಕಗಳ ಪ್ರೀತಿಯ ಉಡುಗೊರೆ...! **Hats off to your integrity, Gouri! take care.**

-ಜ್ಯೋತಿ ಗುರುಪ್ರಸಾದ್, ಕಾರ್ಕಳ

ಲಂಕೇಶ್‌ರವರ ಹುಟ್ಟುಹಬ್ಬದ ಕಾರ್ಯಕ್ರಮ ಚೆನ್ನಾಗಿತ್ತು, ನಾವುಗಳು ಭಾನುವಾರ ಬಂದಿದ್ದರಿಂದ ಮೊದಲ ದಿನದ ಕಾರ್ಯಕ್ರಮದ ಬಗ್ಗೆ ಗೊತ್ತಾಗಲಿಲ್ಲ, ಎಚ್.ಎಲ್.ಕೇಶವಮೂರ್ತಿ, ಪಾರ್ವತೀಶ, ಕೆ.ಎಲ್.ಅಶೋಕ್, ವಾಸು, ಬಿ.ಎಂ.ಪುಟ್ಟಯ್ಯ, ಜಿ.ರಾಮಕೃಷ್ಣ, ಗೌರಿ, ದೇವನೂರ ಮಹಾದೇವ... ಎಲ್ಲರೂ ಚೆನ್ನಾಗಿ ಮಾತಾಡಿದರು. ಯಾವುದೇ ಮೂಢನಂಬಿಕೆಗಳನ್ನು ನಂಬದ 'ಪತ್ರಿಕೆ' ಲಂಕೇಶ್‌ರವರ ಫೋಟೋಕ್ಕೆ ಹೂವಿನ ಹಾರ ಹಾಕಿತ್ತು, ನನ್ನದೊಂದು ಮನವಿ. ನಿಮ್ಮ ಆರೋಗ್ಯ ನಮಗೆ ಮುಖ್ಯ. ಆದ್ದರಿಂದ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಲಂಕೇಶರು ತಮ್ಮ ಚಟಗಳಿಂದ ಜೀವಿತ ಕಾಲವನ್ನು ಕಡಿಮೆಗೊಳಿಸಿಕೊಂಡರು ಎಂದು ಕೇಳಿದ್ದೇನೆ. ವರ್ತಮಾನದಲ್ಲಿ ನೀವು ಮತ್ತು ನಿಮ್ಮ ಆರೋಗ್ಯ ಈ ನಾಡಿನ ಜನಕ್ಕೆ ಬೇಕಾಗಿರುವುದರಿಂದ ಈ ಮನವಿಯನ್ನು ಪುರಸ್ಕರಿಸಿ ತ್ಯಜಿಸಿಬಿಡುತ್ತೀರೆಂದು ನಂಬಿದ್ದೇನೆ.

-ಸಿ.ಶಿವಕುಮಾರ್, ತುಮಕೂರು



'ಲಂಕೇಶ್-75' ವಿಶೇಷಾಂಕ (17.03.2010) ತುಂಬಾ ಮೆಚ್ಚುಗೆಯಾಯಿತು. ಲಂಕೇಶ್‌ರ ಜೀವನ ಪ್ರೀತಿ, **Practical Common Sense** ಬಗೆಗಿನ ಒಲವುಗಳಿಗೆ ಪೂರಕವಾದ ಲೇಖನಗಳಿಂದ ತುಂಬಿದ್ದ ಈ ಸಂಚಿಕೆ, ಬದುಕು ಮತ್ತು ಭವಿಷ್ಯದ ಬಗ್ಗೆ ಹೆಚ್ಚು ಉತ್ಸಾಹ ಹುಟ್ಟಿಸಿತು.

ಆದರೆ ಒಂದೇ ಒಂದು ಕೊರತೆಯೆಂದರೆ, ದಿನೇಶ್ ಕುಕ್ಕುಜಡ್ಕರ ವ್ಯಂಗ್ಯಚಿತ್ರ ಕಾಣದಿದ್ದುದು.

ಸಮಸ್ತ ಕನ್ನಡಿಗರ, ಚಿಂತಕರ ಪ್ರತಿನಿಧಿಯಾಗಿ, ಪ್ರಭುತ್ವದ ಸರ್ವಾಧಿಕಾ ಧೋರಣೆಯ ವಿರುದ್ಧ ಒಂಟಿ ಹಾಗೂ ದಿಟ್ಟದನಿಯಾಗಿ ಹೊರಬರುತ್ತಿರುವ ಪತ್ರಿಕೆ, ಪತ್ರಿಕೋದ್ಯಮದ ಮೂಲ ಕರ್ತವ್ಯ ಹಾಗೂ ಆಶಯಗಳನ್ನು ಬಿಂಬಿಸು ಬಂದಿದೆ. ಈ ನಿಟ್ಟಿನಲ್ಲಿ ಸಾವಿರ ಪದಗಳ ಪ್ರತಿಭಟನೆ, ದುಮ್ಮಾನ, ಜಿಗು ಬಂಡಾಯ-ಮುಂತಾದವುಗಳಿಗಿಂತ ಒಂದು ಪರಿಣಾಮಕಾರಿ ವ್ಯಂಗ್ಯ ಚಿ ಇಂಥ ಪ್ರಗತಿಪರ, ಆರೋಗ್ಯಕರ ಧೋರಣೆಗಳನ್ನು ಸುಲಭವಾಗಿ ತಲುಪಿಸುತ್ತ ವ್ಯಂಗ್ಯಚಿತ್ರದ ಮೂಲವೇ ಲೇವಡಿಯ ಧ್ವನಿ. ಆದರಲ್ಲೂ ದೃಶ್ಯ ಮಾಧ್ಯಮ ಧ್ವನಿಸುವ ಸೂಕ್ಷ್ಮ ಅರ್ಥಗಳು, ಬಂಡಾಯದ ಸಂದರ್ಭದಲ್ಲಿ ವಾಚ್ಯವಾಗಿ ಬಿಡು ಲೇಖನಗಳ ಪರಿಣಾಮಗಳನ್ನು ಮೀರಿಸುತ್ತವೆ. ಶಿವಸುಂದರ್‌ರವರು ತಮ ಲೇಖನದಲ್ಲಿ ಹೇಳುವಂತೆ, ಬಂಡಾಯದ ಶಬ್ದದಲ್ಲಿ ಧಿಕ್ಕಾರವೇ ಕಮ್ಮಿಯಾಗಿ ಅನಿಸಿಬಿಡುತ್ತಿರುವ ಈ ಕಾಲದಲ್ಲಿ ಈ ಕೊರತೆಯನ್ನು ತುಂಬಬಲ್ಲ ಅತ್ಯ ಸೂಕ್ಷ್ಮ ರಾಜಕೀಯ **Wit** ಹಾಗೂ ಚುರುಕು ಬೆರಳಿನ ವ್ಯಂಗ್ಯ ಚಿತ್ರಕಾರರ ದಿನೇಶ್ ಕುಕ್ಕುಜಡ್ಕರೂ ಒಬ್ಬರು ಅಂತ ನನ್ನ ಭಾವನೆ. ಅವರ ವ್ಯಂಗ್ಯಚಿತ್ರವಿಲ್ಲ ಗೌರಿ ಲಂಕೇಶ್ ಪತ್ರಿಕೆ ಸೊರಗಿದೆ ಅಂತಲೇ ಅನಿಸಿತು. ದಮನ ವಿರೋ ಧ್ಯೇಯವಿರುವ ಪತ್ರಿಕೆ, ಎಲ್ಲ ಪರ್ಯಾಯ ಕಥನಗಳ ಬೆನ್ನೆಲುಬಾಗಿರುವ ವ್ಯಂ ಲೇವಡಿ, ಹಾಸ್ಯಗಳನ್ನು ಇನ್ನಷ್ಟು ಚೆನ್ನಾಗಿ ಬಳಸಿಕೊಳ್ಳಬೇಕು, ಎಂದು ನನ್ನ ಸಲ

(ಅಂದಹಾಗೆ, 'ಕ್ಷಾಮ' ಕಥೆಯ ಮೂಲ ಲೇಖಕ ಪ್ರೇಮಚಂದ್‌ರವರಲ್ಲವಾ

-ಸುಮಾ ಎಂಬಾರ್, ಮೈಸೂ


(ಕೆಲಸದ ಒತ್ತಡದಲ್ಲಿ ದುರದೃಷ್ಟವಶಾತ್ ದಿನೇಶ್ ಕುಕ್ಕುಜಡ್ಕ ಅವರ ವ್ಯಂಗ್ಯ ಪ್ರಕಟಗೊಳ್ಳಲಿಲ್ಲ, 'ಕ್ಷಾಮ' ಎಂಬ ಬೆಂಗಾಲಿ ಆ ಕತೆಯ ಮೂಲ ಲೇಖಕ ಚಂದ್ರ ಚಟರ್ಜಿ - ಜೆ.ಎಲ್)

ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು

ಕಿಚ್ಚ ಈಗ ಕನ್ವರ್‌ಲಾಲ್

...ದೀಪ್ ನಟಿಸಿ ನಿರ್ದೇಶಿಸಲಿರುವ ಹೊಸ ಚಿತ್ರದ 'ಕನ್ವರ್‌ಲಾಲ್'. ಈ ಹೆಸರು ಕೇಳಿದಾಕ್ಷಣ ...ಗೆ ಆದರೂ 'ಅಂತ' ಚಿತ್ರದ ಅಂಬರೀಷ್ ಪಾತ್ರ ... ಬರುವುದು ಸಹಜ. ಅಂದಹಾಗೆ, ಈ ಚಿತ್ರ ... ರಿಮೇಕ್ ಆಗಿರುವುದು ಮಾತ್ರ ವಿಶೇಷವಲ್ಲ! ...ದಿ ಹಬ್ಬದಂದು ಈ ಚಿತ್ರ ಸೆಟ್ಟೇರುವ ಸುದ್ದಿ ...ಂದಿದೆ.

...ಂತ' ಚಿತ್ರವನ್ನು ಸುದೀಪ್ ರಿಮೇಕ್ ಮಾಡಲು ...ಟಿರುವುದನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸ ...ಮು. ಕನ್ನಡದ ಉತ್ತಮ ಚಿತ್ರಗಳಲ್ಲಿ ಒಂದಾದ ...ವನ್ನು ರಿಮೇಕ್ ಮಾಡುವುದು ಸಾಹಸದ ...ೇ. ಹಾಗೆಯೇ ಸ್ವಲ್ಪ ಎಡವಿದರೂ ದುಸ್ಸಾಹಸ ...ನ ಅಪಾಯ ಇದೆ. ಸುದೀಪ್ ಸಾಹಸಿಗರಾಗು ...? ಅಥವಾ ದುಸ್ಸಾಹಸಕ್ಕೆ ಒಳಗಾಗುತ್ತಾರೋ? ...ಬೇಕು.



...ಪ್ಪತ್ತೆಂಟು ವರ್ಷಗಳ ಹಿಂದೆ ರಾಜೇಂದ್ರಸಿಂಗ್ ... ನಿರ್ದೇಶಿಸಿ, ಅಂಬರೀಷ್ ನಟಿಸಿದ 'ಅಂತ' ... ಚಿತ್ರರಂಗದ ಇತಿಹಾಸದಲ್ಲೇ ಒಂದು ಹೊಸ ...ಗೆ ಮುನ್ನುಡಿ ಬರೆದಿತ್ತು. ಅಲ್ಲಿಯತನಕ ...ರಣಿಗಳನ್ನೇ ವಿಲನ್‌ಗಳಂತೆ ನೋಡಿದ, ಚಿತ್ರಿಸಿದ ...ೀ ಬಂದಿರಲಿಲ್ಲ. ಯಾವಾಗ 'ಅಂತ' ಬಾಕ್ಸಾಫೀಸ್ ...ಭರ್ಜರಿ ಬೇಟೆಯಾಡಿತ್ತೋ, ಅಲ್ಲಿಂದಾಚೆಗೆ ...ರಣಿಗಳನ್ನು ಖಳನಾಯಕರಂತೆ ತೋರಿಸುವ ... ಸರಣಿಯೇ ಬರಲಾರಂಭಿಸಿತು.

... ಚಿತ್ರ ಯಶಸ್ಸು ಕಾಣುವಲ್ಲಿ ಅಂಬರೀಷ್ ...ಕೊಡುಗೆಯೂ ಬಹಳಷ್ಟು ಇತ್ತು. ಅಲ್ಲಿಯತನಕ ... ಖಳನಾಯಕನ ಪಾತ್ರಗಳಲ್ಲೇ ರಾರಾಜಿಸುತ್ತಿದ್ದ ... ಮುಖದ ಅಂಬರೀಷ್ ಈ ಚಿತ್ರದಲ್ಲಿ ...ನಾಗಿ ಕಾಣಿಸಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ...ತ್ರಕ್ಕೆ ಹೀರೋ ಇಮೇಜಿಲ್ಲದ ಒಬ್ಬ ನಟನನ್ನು ... ಮಾಡಿ ನಿರ್ದೇಶಕ ಸಿಂಗ್‌ಬಾಬು ತನ್ನ ...ತೆಯನ್ನು ಪ್ರದರ್ಶಿಸಿದ್ದರು.

...ೇಗಾಗಿ ಈ ಚಿತ್ರದ 'ಕನ್ವರ್‌ಲಾಲ್' ಪಾತ್ರ ...ೀಷ್‌ಗೆ ಎಲ್ಲಿಲ್ಲದ ಇಮೇಜ್ ಮತ್ತು ತಾರಾಮೌಲ್ಯ ...ತಂದುಕೊಟ್ಟಿತ್ತು, ಜೊತೆಗೆ ಈ ಚಿತ್ರದ ಪಾತ್ರವೇ ... 'ರೆಬೆಲ್ ಸ್ಟಾರ್' ಬಿರುದು ಬರಲು ಕಾರಣ ...ತು.

...ಜೇಂದ್ರಸಿಂಗ್ ಬಾಬು ನಿರ್ದೇಶನದಲ್ಲಿ ಮಾಡಿದ ...ಕ್ ಮತ್ತು ಅಂಬರೀಷ್ ನಟನೆಯಲ್ಲಿ ತೋರಿದ ...ವನ್ನು ಸುದೀಪ್ ಈಗ ಮಾಡುತ್ತಾರೆಯೇ ...ದು ಕುತೂಹಲಕಾರಿ ವಿಷಯ. ನಿಜ, ಇಂದಿನ ...ಯ ಪರಿಸ್ಥಿತಿಗೆ ಅನುಗುಣವಾಗಿ ಸುದೀಪ್ ...ರು ಬದಲಾವಣೆಗಳನ್ನು ಚಿತ್ರಕಥೆಯಲ್ಲಿ ...ದ್ದಾರಂತೆ. ಆದರೂ ಸಹ 'ಕನ್ವರ್‌ಲಾಲ್' ಮೂಲ ...ದ 'ಅಂತ'ದಿಂದ ಸಾಕಷ್ಟು ವಿಭಿನ್ನವಾಗಿರಲು ... ಇಲ್ಲ.

...ಪೇಂದ್ರ ಕೂಡಾ ಈ 'ಕನ್ವರ್‌ಲಾಲ್'ನ ಪಾತ್ರದ ...ಣೆಗೆ ಒಳಗಾದ ನಿರ್ದೇಶಕರೆಂಬುದನ್ನು ಇಲ್ಲಿ ಗಮನಿಸಬೇಕು. ಉಪ್ಪಿ ತನ್ನ ವೃತ್ತಿಯ ಆರಂಭದ ದಿನಗಳಲ್ಲಿ 'ಅಂತ' ಚಿತ್ರದ ಮುಂದುವರೆದ ಭಾಗವಾಗಿ 'ಆಪರೇಷನ್ ಅಂತ' ಎಂಬ ಚಿತ್ರವನ್ನು ನಿರ್ದೇಶಿಸಿದ್ದರು. ವಿಶೇಷವೆಂದರೆ ಸ್ವತಃ ಅಂಬರೀಷ್ ಈ ಚಿತ್ರದಲ್ಲಿ ಮತ್ತೊಮ್ಮೆ ಕಾಣಿಸಿಕೊಂಡು 'ಏ ಕುತ್ತೇ, ಕನ್ವರ್ ನಹೀ ಕನ್ವರ್‌ಲಾಲ್ ಬೋಲೋ...' ಎಂದು ಘರ್ಜಿಸಿದ್ದರು. ಆದರೆ ಅಷ್ಟೊತ್ತಿಗೆಲ್ಲಾ ಕನ್ವರ್‌ಲಾಲ್ ಬಗ್ಗೆ ಪ್ರೇಕ್ಷಕ ನಿರಾಸಕ್ತಿ ತೋರಿಸಿದ್ದ ಆದ್ದರಿಂದ ಭಾರೀ ನಿರೀಕ್ಷೆಯ 'ಆಪರೇಷನ್ ಅಂತ ಭಾಗ-2' ಗಲ್ಲಾಪೆಟ್ಟಿಗೆಯಲ್ಲಿ ಸಂಪೂರ್ಣ ಮುಗ್ಗರಿಸಿತು. ಅದನ್ನು ಕಂಡು ಅಂಬಿ ಕನ್ವರ್‌ಲಾಲ್ ಪಾತ್ರವನ್ನು ಮತ್ತೊಮ್ಮೆ ನಿರ್ವಹಿಸಲೇಬಾರದಿತ್ತೆಂದು ಅವರ ಅಭಿಮಾನಿಗಳು ಕೊರಗಿದ್ದರು. ಅಷ್ಟೇ ಅಲ್ಲದೆ, ಎರಡು ವರ್ಷಗಳ ಹಿಂದೆ ಅಂಬರೀಷ್ ಮತ್ತೊಮ್ಮೆ 'ತಿಪ್ಪಾರಹಳ್ಳಿ ತರ್ಲೆಗಳು' ಚಿತ್ರದಲ್ಲಿ ಕನ್ವರ್‌ಲಾಲ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈ ಚಿತ್ರದ ನಿರ್ದೇಶಕ ಮತ್ತೆ ಅದೇ ಸಿಂಗ್ ಬಾಬು. ತಾನೇ ಸೃಷ್ಟಿಸಿದ ಕನ್ವರ್‌ಲಾಲ್ ಪಾತ್ರವನ್ನು ಸಿಂಗ್‌ಬಾಬು ಇಪ್ಪತ್ತೈದು ವರ್ಷಗಳ ನಂತರ ಮತ್ತೆ ಹೇಗೆ ಮರುಸೃಷ್ಟಿಸಿದ್ದಾರೆಂಬ ಕುತೂಹಲ ಇದ್ದೇ ಇದೆ. ಆದರೆ ಅದ್ಯಾವುದೋ ಆರ್ಥಿಕ ಸಮಸ್ಯೆಯಿಂದಾಗಿ ಆ ಚಿತ್ರ ಇನ್ನೂ ಬಿಡುಗಡೆಯಾಗಿಲ್ಲ.

ಇದರರ್ಥ ಕನ್ವರ್‌ಲಾಲ್ ಎಂಬ ಈ ಪಾತ್ರ ಬರೀ ಸುದೀಪ್‌ಗೆ ಮಾತ್ರವಲ್ಲ; ಉಪ್ಪಿಗೂ ಆಕರ್ಷಣೆಯಾಗಿತ್ತು ಹಾಗೆಯೇ ಸ್ವತಃ ಸಿಂಗ್ ಬಾಬುಗೂ ಕೂಡಾ. ಇಂತಹ ಕನ್ವರ್‌ಲಾಲ್‌ನನ್ನು ತನ್ನ ಬೆನ್ನಿಗೆ ಕಟ್ಟಿಕೊಂಡ ಸುದೀಪ್ ಅತ್ಯಂತ ರಿಸ್ಕೀ ಕೆಲಸಕ್ಕೆ ಕೈ ಹಾಕಿದ್ದಾರೆ ಎಂದೇ ಹೇಳಬಹುದು.

'ಅಂತ' ಚಿತ್ರದ ಕಾದಂಬರಿಕಾರ ಬಿ.ಅನಂತರಾಮ್ ಕೆಲವು ವರ್ಷಗಳ ಹಿಂದೆ "ಈ ಚಿತ್ರದ ಮುಂದಿನ ಭಾಗವನ್ನು ಬರೆದಿದ್ದೇನೆ. 'ಅಂತ' ಭಾಗ-2ರ ಕಥೆ-ಚಿತ್ರಕಥೆ, ಸಂಭಾಷಣೆ ರೆಡಿಯಾಗಿದೆ. ಯಾರಿಗಾದರೂ ಈ ಚಿತ್ರ ಮಾಡುವ ಉತ್ಸಾಹವಿದೆಯೇ?" ಎಂದು ಫೈಲ್ ಹಿಡಿದುಕೊಂಡು ಪತ್ರಿಕಾ ಆಫೀಸುಗಳಿಗೆ, ಗಾಂಧೀನಗರದ ನಿರ್ಮಾಪಕರ ಕಚೇರಿಗಳಿಗೆ ಓಡಾಡಿದ್ದರು. ಆದರೆ ಯಾವುದೇ ನಿರ್ಮಾಪಕ ಈ ಮೂಲ ಕಾದಂಬರಿಕಾರ ಬರೆದ ಮುಂದುವರೆದ ಭಾಗವನ್ನು ಚಿತ್ರ ಮಾಡಲು ಮನಸ್ಸು ಮಾಡಲೇ ಇಲ್ಲ. ಅನಂತರಾಮ್ ಎಲ್ಲಾ ಕಚೇರಿಗಳಿಗೆ ಭೇಟಿ ಕೊಟ್ಟು ತನ್ನ ಚಪ್ಪಲಿ ಸವೆಸಿಕೊಂಡಿದ್ದಷ್ಟೇ ಬಂತು.

ಹೀಗೆ ಒಂದು ಯಶಸ್ವಿ ಚಿತ್ರ ಅನೇಕ ನಟರನ್ನು ಬೇರೆ ಬೇರೆ ರೀತಿಯಲ್ಲಿ ಕಾಡುತ್ತಾ ಬಂದಿದೆ. ಅಂತಹ ಆಕರ್ಷಣೆಯ ವರ್ತುಲದಲ್ಲಿ ಸಿಲುಕಿರುವ ಸುದೀಪ್ ಈ ಬಾರಿ ನಿರ್ದೇಶನ ಮತ್ತು ನಾಯಕ ಎರಡರ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡಿದ್ದಾರೆ. ಈ ಚಿತ್ರದ ಕಥಾವಸ್ತು ಭ್ರಷ್ಟ ರಾಜಕಾರಣಿಗಳ ಸುತ್ತ ಹೆಣೆದುಕೊಂಡಿದೆ. ಇಪ್ಪತ್ತೆಂಟು ವರ್ಷಗಳ ಹಿಂದಿನ ಭ್ರಷ್ಟತೆ ಮತ್ತು ಅದಕ್ಕೆ ಜನ ಸ್ಪಂದಿಸುತ್ತಿದ್ದ ರೀತಿ, ಈಗಿನ ರಾಜಕಾರಣಿಗಳ ಭ್ರಷ್ಟತೆಗೆ ಜನ ಪ್ರತಿಕ್ರಿಯಿಸುತ್ತಿರುವ ರೀತಿ ಸಂಪೂರ್ಣವಾಗಿ ಬದಲಾಗಿದೆ. ಅಂತಹ ಬದಲಾವಣೆ ಸುದೀಪ್ ನಿರ್ದೇಶನದ 'ಕನ್ವರ್‌ಲಾಲ್'ನಲ್ಲೂ ಸಮಾನವಾಗಿ ಕಾಣಿಸಿಕೊಂಡರೆ ಮಾತ್ರ ಪ್ರೇಕ್ಷಕರಲ್ಲಿ ಮತ್ತೊಮ್ಮೆ ಕನ್ವರ್‌ಲಾಲ್ ರೋಮಾಂಚನ ಮೂಡಿಸಬಹುದು.

ಅದೇನೇ ಇರಲಿ, ಸದಾ ಸಾಹಸಕ್ಕೆ ಮುನ್ನುಗ್ಗುವ, ಅದರ ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದ ಸುದೀಪ್ ಮಾಮೂಲಿ ಯಾವುದೋ ಚಿತ್ರವನ್ನು ರಿಮೇಕ್ ಮಾಡುವ ಬದಲು 'ಅಂತ'ವನ್ನು ಕೈಗೆತ್ತಿಕೊಂಡಿರುವುದನ್ನು ಮೆಚ್ಚೋಣ. ಈಗಾಗಲೇ ಹಿಂದಿಯಲ್ಲೂ ಒಂದು ಕಾಲನ್ನು ಭದ್ರವಾಗಿ ಊರಿರುವ ಈ ಸಂದರ್ಭದಲ್ಲಿ ಸುದೀಪ್ ಅಡ್ವೆಂಚರ್‌ಗೆ ಅಣಿಯಾಗಿರುವುದು ವಿಶೇಷವೇ ಸರಿ.

● ಶೆಣೈ

ಸಿನಿಮಾಗಳ ಡಿಸಾರ್ಡರ್!



ಭಾರತೀಯ ಸಿನೆಮಾಗಳ ಸ್ವರೂಪ ಮೆಲ್ಲಗೆ ಬದಲಾವಣೆಯ ಹಾದಿಯಲ್ಲಿರುವಂತಿದೆ...


ಹಿಂದೆಲ್ಲಾ ಸಿನೆಮಾವೆಂದರೆ, ಐದು ಹಾಡು, ನಾಲ್ಕು ಫೈಟು, ಒಂದಿಷ್ಟು ರೊಮ್ಯಾನ್ಸು, ಒಂದಷ್ಟು ಮುನಿಸು.... ಇವೆಲ್ಲಾ ಮಸಾಲೆ ಇರಲೇಬೇಕು ಎಂಬ ನಂಬುಗೆಯಿತ್ತು, ಆದರೆ ಇತ್ತೀಚಿನ ಬಹಳಷ್ಟು ಹಿಟ್ ಸಿನಿಮಾಗಳು ಈ ಎಲ್ಲ ಸಿದ್ಧಸೂತ್ರಗಳನ್ನು ಬ್ರೇಕ್ ಮಾಡಿರುವುದು ಗಮನಿಸಬೇಕಾದ ವಿಚಾರ.



ಪ್ರೀತಿ-ಪ್ರೇಮ, ನೈತಿಕತೆ, ಸಂಬಂಧಗಳು, ಹೊಡೆದಾಟ, ಬಡಿದಾಟ, ರಕ್ತದೋಕುಳಿ, ತಲೆ ಚಿಟ್ಟು ಹಿಡಿಸುವ ಅಬ್ಬರದ ಸಂಗೀತದ ದುಬಾರಿ ಚಿತ್ರಗಳು... ಇಂತಹ ಸಿನೆಮಾಗಳಿಂದ ಪ್ರೇಕ್ಷಕರು ಬೇಸತ್ತ ಸಮಯದಲ್ಲೇ ಈಗ ಹಿಂದಿ, ತಮಿಳು ಸೇರಿದಂತೆ ಇತರೆ ಭಾಷಾ ಚಿತ್ರಗಳಲ್ಲಿ ಹೊಸ ಟ್ರೆಂಡ್ ಒಂದು ಆರಂಭವಾಗಿದೆ.

ಅದು ಡಿಸಾರ್ಡರ್ ಕಥೆ...

ತಮಿಳಿನ 'ಅನ್ನಿಯನ್' ಮತ್ತು ತೆಲುಗು-ಹಿಂದಿಯ 'ಗಜಿನಿ' ಚಿತ್ರಗಳು ಬಾಲಿವುಡ್ ಮತ್ತು ಟಾಲಿವುಡ್‌ಗಳಲ್ಲಿ ಹಿಟ್ ಆಗಿ ಹಣ ಬಾಚುತ್ತಿದ್ದಂತೇ ಈಗ ಅಲ್ಲಿ ಬರೀ ಡಿಸಾರ್ಡರ್ ಸಿನಿಮಾಗಳೇ ನಿರ್ಮಾಣಗೊಳ್ಳುತ್ತಿವೆ. ಕಳೆದ ಎರಡು ಮೂರು ವರ್ಷಗಳಲ್ಲಿ ಏನಿಲ್ಲವೆಂದರೂ ಹತ್ತು ಹನ್ನೆರಡು ಚಿತ್ರಗಳು ಮಾನಸಿಕ ಸಮಸ್ಯೆಗಳ ಕುರಿತಂತೆ ಬಂದಿವೆ.



'ಅನ್ನಿಯನ್' ಚಿತ್ರದಲ್ಲಿ ನಟ ವಿಕ್ರಂ 'ಮಲ್ಟಿಪಲ್ ಪರ್ಸನಾಲಿಟಿ ಡಿಸಾರ್ಡರ್' ಕಾಯಿಲೆಗೆ ತುತ್ತಾದವನ ಪಾತ್ರದಲ್ಲಿ ನಟಿಸಿದ್ದರು. ವ್ಯವಸ್ಥೆಯ ಲೋಪಗಳ ವಿರುದ್ಧ ಸಿಡಿದುಬೀಳುವ ಕರ್ಮಠ ಮನುಷ್ಯನೊಬ್ಬ ತನಗರಿವೇ ಇಲ್ಲದಂತೆ ಸಮಾಜದ ಕ್ರಿಮಿಗಳನ್ನು ಬಲಿ ತೆಗೆದುಕೊಳ್ಳುವ ವಿಚಿತ್ರ ಕಥಾವಸ್ತುವನ್ನು ಹೊಂದಿದ್ದ, ಶಂಕರ್ ನಿರ್ದೇಶಿಸಿದ್ದ 'ಅನ್ನಿಯನ್' ಇಡೀ ದಕ್ಷಿಣ ಭಾರತ ಚಿತ್ರರಂಗವನ್ನೇ ಬೆಚ್ಚಿಬೀಳಿಸಿತ್ತು, ನಂತರ ನಿರ್ದೇಶಕ ಮುರುಗದಾಸ್ ಅವರ 'ಗಜನಿ' ಚಿತ್ರ ಬಿಡುಗಡೆಗೊಂಡು ಇದೇ ರೀತಿಯ ರೋಮಾಂಚನ ಮೂಡಿಸಿತ್ತು, ಈ ಚಿತ್ರ ಹಿಂದಿಗೂ ರಿಮೇಕ್ ಆಗಿ ನೂರಾರು ಕೋಟಿ ರುಪಾಯಿಗಳ ವಹಿವಾಟು ನಡೆಸಿತ್ತು.



ಆಮಿರ್ ಖಾನ್ ಮತ್ತು ದರ್ಶೀಲ್ ಸಫಾರಿ ನಟಿಸಿದ್ದ 'ತಾರೇ ಜಮೀನ್ ಪರ್' ಚಿತ್ರ ಡಿಸ್‌ಲೆಕ್ಸಿಅ ಎಂಬ ಪದಕುರುಡು ತೊಂದರೆ ಕುರಿತಾದ ಕತೆಯನ್ನು ಹೊಂದಿತ್ತು. ಈ ತೊಂದರೆಯಿಂದಾಗಿ ಪೋಷಕರ ನಿಂದನೆಗೆ ಒಳಗಾದ ಮಕ್ಕಳು ಅನುಭವಿಸುವ ಯಾತನೆ, ಓದುವಾಗ ಅಕ್ಷರಗಳೆಲ್ಲಾ ಕುಣಿದಂತಾಗುವುದು. ಅದರಿಂದ ಉಂಟಾಗುವ ಕೀಳರಿಮೆ... ಹೀಗೆ ಓದುವ ಮಕ್ಕಳಲ್ಲಿನ ಸಮಸ್ಯೆ ಮತ್ತದಕ್ಕೆ ಪರಿಹಾರವನ್ನು ಸೂಚಿಸಿದ್ದ ಆ ಸಿನೆಮಾ ಕೇವಲ ಮಕ್ಕಳ ಸಿನೆಮಾವಾಗದೆ ಎಲ್ಲ ಸ್ತರದ ಪ್ರೇಕ್ಷಕರನ್ನೂ ಆಕರ್ಷಿಸಿತ್ತು.

ಇದಾದನಂತರ ಇತ್ತೀಚೆಗೆ ಬಂದ 'ಮೈ ನೇಮ್ ಇಸ್ ಖಾನ್' ಚಿತ್ರ ಕೂಡಾ ಮನೋರೋಗಕ್ಕೆ ಸಂಬಂಧಿಸಿದ್ದೇ. ಈ ಚಿತ್ರದಲ್ಲಿ ಶಾರುಖ್ ಖಾನ್ ಅಸ್ಪರ್ಗರ್ ಫೋಬಿಯಾ(ಅಭಿವ್ಯಕ್ತಿ ಸಮಸ್ಯೆ)ಗೆ ಒಳಗಾದವನ ಪಾತ್ರದಲ್ಲಿ ನಟಿಸಿದ್ದಾರೆ.

ಇನ್ನು ಬಿಗ್ ಬಿ ಅಮಿತಾಬ್ ನಟಿಸಿರುವ 'ಪಾ' ಚಿತ್ರದ ಕತೆ ಕೂಡಾ ಪ್ರೊಗೆರಿಯಾ ಎಂಬ ರೋಗದ ಸುತ್ತ ತಿರುಗುತ್ತದೆ. ತೀರಾ ಚಿಕ್ಕ ವಯಸ್ಸಿಗೇ ವೃದ್ಧಾಪ್ಯ ಆವರಿಸಿ, ಶಾಲೆಗೆ ಹೋಗುವ ವಯಸ್ಸಿಗೇ ಮುದುಕನಂತಾಗುವ 13 ವರ್ಷದ ಹುಡುಗನ ಪಾತ್ರದಲ್ಲಿ ಅಮಿತಾಬ್ ನಟಿಸಿದ್ದರು.

ಈಗ ಹಿಂದಿಯಲ್ಲಿ 'ಕಾರ್ತಿಕ್ ಕಾಲಿಂಗ್ ಕಾರ್ತಿಕ್' ಎಂಬ ಚಿತ್ರವೊಂದು ರಿಲೀಸ್ ಆಗಿದೆ. ಫರ್ಹಾನ್ ಅಕ್ತರ್ ಮತ್ತು ದೀಪಿಕಾ ಪಡುಕೋಣೆ ನಟಿಸಿರುವ ಈ ಚಿತ್ರದ ಕೇಂದ್ರ ಬಿಂದು ಕೂಡಾ ಮನೋರೋಗವೇ. ಆಲ್ಟರ್ ಈಗೋ ಎಂಬ disorderಗೆ ಒಳಗಾದ ವ್ಯಕ್ತಿ ನಿದ್ರೆಗೆ ಜಾರಿದಾಗ ತನಗೆ ಅರಿವಿಲ್ಲದಂತೆ ಬದಲಾಗಿ ಬೇರೊಬ್ಬರ ರೀತಿ ವರ್ತಿಸುವ ವಿಲಕ್ಷಣ ರೋಗದ ಬಗ್ಗೆ ಈ ಚಿತ್ರದಲ್ಲಿ ತೋರಿಸಲಾಗಿದೆ. ಒಟ್ಟನಲ್ಲಿ ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ ಈಗ ಮನೋರೋಗ ಮತ್ತು ಮಾನಸಿಕ ಸಮಸ್ಯೆಯ ಸಿನೆಮಾಗಳೇ ಹೆಚ್ಚೆಚ್ಚು ನಿರ್ಮಾಣಗೊಂಡು ಯಶಸ್ವಿಯಾಗುತ್ತಿವೆ.

ಹಾಗೆಂದು ಕನ್ನಡ ಚಿತ್ರರಂಗದಲ್ಲಿ ಇಂಥ ಕಥಾಹಂದರದ ಸಿನೆಮಾಗಳು ಬಂದೇ ಇಲ್ಲ ಎನ್ನುವ ಹಾಗೇನೂ ಇಲ್ಲ. ವಿಷ್ಣು ಅಭಿನಯದ 'ಆಪ್ತರಕ್ಷಕ' ಮತ್ತು 'ಆಪ್ತಮಿತ್ರ' 'ಸೈಕೋ' ಚಿತ್ರಗಳು ಕೂಡಾ ಇದೇ ರೀತಿಯ ಮಾನಸಿಕ ರೋಗ ಮತ್ತು ಮೂಢ ನಂಬಿಕೆಗಳ ಕುರಿತಾದದ್ದೇ ಆಗಿವೆ. ಒಂದು ವರ್ಷದ ಹಿಂದೆ ರಮೇಶ್ ಸುರ್ವೆ ನಿರ್ದೇಶಿಸಿದ್ದ 'ಮಂದಾಕಿನಿ' ಎಂಬ ಚಿತ್ರ ಬಿಡುಗಡೆಗೊಂಡಿತ್ತು, ಅದರ ಕತೆ ಸ್ಕಿಟ್ಸೋಫ್ರೇನಿಯಾ ಎಂಬ ಕಾಯಿಲೆಯ ಸುತ್ತ ಹೆಣೆದುಕೊಂಡಿತ್ತು, ಆದರೆ ಈ ಚಿತ್ರದ ಕಥೆಯನ್ನು ಸುರ್ವೆ ನಿರೂಪಿಸಿದ ರೀತಿ ಸರಿಇರಲಿಲ್ಲವಾದ್ದರಿಂದ ಆ ಚಿತ್ರ ಹೇಳಹೆಸರಿಲ್ಲದಂತೆ ಮುಳುಗಿತ್ತು.

ಬೇರೆ ಬಾಷೆಯ ಚಿತ್ರಗಳಲ್ಲಾದರೆ ಅಲ್ಲಿಯ ಹೀರೋಗಳು ತಮ್ಮ ಇಮೇಜನ್ನು ಬದಿಗೊತ್ತಿ ಪಾತ್ರ ಯಾವುದೇ ಇದ್ದರೂ ಅದರಲ್ಲಿ ತನ್ಮಯತೆಯಿಂದ ನಟಿಸುತ್ತಾರೆ. ಶಾರುಖ್‌ನಂತ ನಟ ಕೈಕಾಲುಗಳನ್ನು ಊನವಾಗಿಸಿಕೊಂಡು ಕುತ್ತಿಗೆ ಸೊಟ್ಟಗೆ ಮಾಡಿ ನಟಿಸುತ್ತಾನೆ. ಮೇರು ನಟ ಅಮಿತಾಬ್ ಕೂಡಾ ಈ ಇಳೀ ವಯಸ್ಸಿನಲ್ಲೂ ತಮ್ಮ ದೇಹವನ್ನು ಪಾತ್ರಕ್ಕೆ ತಕ್ಕಂತೆ ಒಗ್ಗಿಸಿಕೊಳ್ಳುತ್ತಾರೆ. ಇನ್ನು ಕಮಲ್ ಹಾಸನ್‌ನಂಥ ಅದ್ಭುತ ನಟ ಮೂರು ದಶಕದ ಹಿಂದೆಯೇ 'ಹದಿನಾರು ವಯದಿನಿಲೆ' ಚಿತ್ರದಲ್ಲಿ ಸಣ್ಣ ಲಂಗೋಟಿ ಕಟ್ಟಿಕೊಂಡು ಅಂಗವಿಕಲನ ಪಾತ್ರದಲ್ಲಿ ನಟಿಸಿದ್ದರು.

ಆದರೆ ಕನ್ನಡದಲ್ಲಿ ತಮ್ಮ ಇಮೇಜಿನ ಚೌಕಟ್ಟಿನಿಂದ ಹೊರಬರಲು ನಮ್ಮ ನಾಯಕರು ಒಪ್ಪುವುದಿಲ್ಲ, ಬರೀ ಹೊಡಿ, ಬಡಿ, ಕಡಿ ಚಿತ್ರಗಳನ್ನೇ ಆರಾಧಿಸುವ ನಮ್ಮ ನಟರ ಮತ್ತು ಇಲ್ಲಿನ ನಿರ್ದೇಶಕರ ಅಭಿರುಚಿ ಬದಲಾಗದ ಹೊರತು ಸಿನೆಮಾಗಳ ಸ್ವರೂಪವೂ ಬದಲಾಗುವುದಿಲ್ಲ ಎಂಬುದನ್ನು ಅರಿಯಬೇಕಿದೆ.

● ಅರುಣ್

ಸುಗ್ರೀವನ ಸಂಕಟ!



'ಸುಗ್ರೀವ' ಚಿತ್ರ ಬಿಡುಗಡೆಗೊಂಡು ಕಲೆಕ್ಷನ್‌ನಲ್ಲಿ ಚೇತರಿಸಿಕೊಳ್ಳುತ್ತಿದೆ. ಅದರೊಂದಿಗೆ ಆ ಚಿತ್ರದ ಮೂಲ ನಿರ್ದೇಶಕ ಪ್ರಶಾಂತ್ ಮಾಂಬಳ್ಳಿಯ ಅಸಮಾಧಾನವೂ ಭುಗಿದೇಳುತ್ತಿದೆ.

ಈ ಪ್ರಶಾಂತ್ ಈ ಮೊದಲೇ ಮಲಯಾಳಂನಲ್ಲಿ 'ಭಗವಾನ್' ಎಂಬ ಚಿತ್ರವನ್ನು ಹದಿನೆಂಟೇ ಗಂಟೆಗಳಲ್ಲಿ ನಿರ್ದೇಶಿಸಿ ದಾಖಲೆ ನಿರ್ಮಿಸಿದ್ದರು. ನಿರ್ಮಾಪಕ ಅಣಜಿ ನಾಗರಾಜ್ ಕೂಡ ಕನ್ನಡದಲ್ಲೂ ಇಂಥದ್ದೇ ಚಿತ್ರವೊಂದನ್ನು ನಿರ್ದೇಶಿಸಿ ಕೊಡಿ ಎಂದು ಕೇಳಿಕೊಂಡಿದ್ದರಿಂದ ಸುಮಾರು ಎಂಟು ತಿಂಗಳ ಕಾಲ ಕೂತು ಕಥೆ, ಚಿತ್ರಕಥೆ ಸಿದ್ಧಮಾಡಿ 10 ಜನ ನಿರ್ದೇಶಕರು ಮತ್ತು ಛಾಯಾಗ್ರಾಹಕರು ಸೇರಿ ಕೇವಲ ಹದಿನೆಂಟು ಗಂಟೆಗಳಲ್ಲಿ ಸಿನೆಮಾ ತಯಾರಿಸಿಕೊಡುವ ರೀತಿಯಲ್ಲಿ ಸಕಲ ಸಿದ್ಧತೆಯನ್ನೂ ಮಾಡಿದ್ದರು.

ಚಿತ್ರ ನಿರ್ಮಾಣವೂ ಆಯಿತು, ಈಗ ಬಿಡುಗಡೆಯೂ ಆಗಿದೆ. ಆದರೆ ಪತ್ರಿಕಾಗೋಷ್ಠಿಗಳಲ್ಲಿ ಈ ಚಿತ್ರಕ್ಕೆ ದುಡಿದ ತಂತ್ರಜ್ಞರೆಲ್ಲಾ ನಿರ್ಮಾಪಕ ಅಣಜಿ ನಾಗರಾಜ್‌ಗೇ ಉಘೇ ಎನ್ನುತ್ತಿದ್ದಾರೆಯೇ ವಿನಃ ಸೌಜನ್ಯಕ್ಕಾದರೂ ಪ್ರಶಾಂತ್ ಮಾಂಬಳ್ಳಿಗೆ ಕೃತಜ್ಞತೆ ಹೇಳುತ್ತಿಲ್ಲ, ಇದೆಲ್ಲ ಹೇಗಾದರೂ ಇರಲಿ ಎಂದು ಈತ ಸಾವರಿಸಿಕೊಂಡರೆ, ನಿರ್ಮಾಪಕ ಅಣಜಿ ಈತನಿಗೆ ನೀಡಬೇಕಿರುವ ಸಂಭಾವನೆಯಲ್ಲಿ ಅರ್ಧ ಕೊಟ್ಟು ಇನ್ನುಳಿದ ಮೊತ್ತಕ್ಕೆ 'ಈಗ ಆಗ' ಎಂದು ಟಕಾಯಿಸುತ್ತಿದ್ದಾರಂತೆ.

ಸದ್ಯ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗೆ ಏಕಕಾಲದಲ್ಲಿ ಸಿನೆಮಾ ಮಾಡಲು ಸಿದ್ಧತೆ ನಡೆಸುತ್ತಿರುವ ಪ್ರಶಾಂತ್ 'ಸುಗ್ರೀವ'ನ ಬಗೆಗಿನ ತಮ್ಮ ಅಸಮಾಧಾನವನ್ನು ತಮ್ಮ ಆಪ್ತ ವಲಯದಲ್ಲಿ ತೋಡಿಕೊಳ್ಳುತ್ತಿದ್ದಾರೆ.

ಕಮಲ್ ಪುತ್ರಿಯ ಕನ್ನಡ ಗಾನ!



ಬಾಲಿವುಡ್ ಚಿತ್ರಗಳಲ್ಲಿ ನಟಿಸುತ್ತಾ ಆಲ್ಬಂ ಸಾಂಗ್‌ಗಳಲ್ಲಿ ಹಾಡಿ ಕುಣಿಯುತ್ತಾ ಜೊತೆಗೆ ಸಂಗೀತ ನಿರ್ದೇಶನವನ್ನೂ ಮಾಡುತ್ತಾ ತನ್ನ ತಂದೆ ಕಮಲ್‌ಹಾಸನ್‌ರಂತೇ ಸದಾ ಬ್ಯುಸಿ ಇರುವ ಶೃತಿ ಹಾಸನ್ ಈಗ ಕನ್ನಡಕ್ಕೂ ಕಾಲಿಟ್ಟಿದ್ದಾಳೆ.

ಅದು ಹಾಡುಗಾರ್ತಿಯಾಗಿ.

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ 'ಪೃಥ್ವಿ' ಚಿತ್ರಕ್ಕೆ ಶೃತಿ ಹಾಸನ್ "ನೆನಪಿದು ನೆನಪಿದು ಕನಸಲು ಮರೆಯದ ನೆನಪಿದು ಮನಸಿನ ಮರೆಯಲಿ ಮಿನುಗುವ ಹೊಸಹೊಸ ನೆನಪಿದು" ಎಂಬ ಗೀತೆಯನ್ನು ಹಾಡಿದ್ದಾಳೆ.

ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನಕ್ಕೆ ಸ್ವರ ಸೇರಿಸಿರುವ ಶೃತಿಯ ಈ ಹಾಡು ನೆನಪಿನಲ್ಲಿ ಉಳಿಯುತ್ತಾ ಅನ್ನೋದು ಇಷ್ಟರಲ್ಲೇ ಗೊತ್ತಾಗಲಿದೆ.

'ಆಪ್ತರಕ್ಷಕ'ನಿಗೇ ಅನ್ಯಾಯ!



'ಆಪ್ತಮಿತ್ರ' ಚಿತ್ರ ತೆರೆಕಂಡ ನಂತರ ಏನಾಯಿತೋ ಅದೇ 'ಆಪ್ತರಕ್ಷಕ' ತೆರೆಕಂಡ ನಂತರವೂ ಆಗಿದೆ.

ನಿಮಗೆಲ್ಲಾ ಗೊತ್ತೇ ಇದೆ. 'ಆಪ್ತಮಿತ್ರ' ಬಾಕ್ಸಾಫೀಸ್‌ನಲ್ಲಿ ವಾರದಿಂದ ವಾರಕ್ಕೆ ಭರ್ಜರಿ ಯಶಸ್ಸು ಕಾಣಲಾರಂಭಿಸಿದಾಗ ಪ್ರೇಕ್ಷಕರೆಲ್ಲಾ ಮಾತನಾಡುತ್ತಿದ್ದುದು ಆಗಷ್ಟೇ ನಿಧನಹೊಂದಿದ್ದ ಸೌಂದರ್ಯಾಳ ಅದ್ಭುತ ಅಭಿನಯದ ಬಗ್ಗೆ. ಆದರೆ 'ಆಪ್ತಮಿತ್ರ' ಚಿತ್ರತಂಡ ಮಾತ್ರ ಸೌಂದರ್ಯಾಳ ಬಗ್ಗೆ ಅಪ್ಪಿತಪ್ಪಿಯೂ ಏನೂ ಮಾತನಾಡುತ್ತಿರಲಿಲ್ಲ, ನಿರ್ಮಾಪಕ ದ್ವಾರಕೀಶ್ ಅಂತೂ ಯಾವುದೇ ಕಾರಣಕ್ಕೆ ಸೌಂದರ್ಯಾಳೊಬ್ಬಳಿಗೆ ಕ್ರೆಡಿಟ್ ನೀಡಲು ಹಿಂಜರಿಯುತ್ತಿದ್ದರು.

ಮೊನ್ನೆ 'ಆಪ್ತರಕ್ಷಕ' ಚಿತ್ರದ ಸಂತೋಷಕೂಟ ರೇಸ್‌ಕೋರ್ಸ್ ಕ್ಲಬ್‌ನಲ್ಲಿ ನಡೆಯಿತು. ನಿರ್ದೇಶಕ ಪಿ.ವಾಸು ಈ ಸಂತೋಷ ಕೂಟದ ರೂವಾರಿಯಾಗಿದ್ದರು. ಹೀಗಾಗಿ ಸಹಜವಾಗಿಯೇ ಬಹುತೇಕ ಎಲ್ಲಾ ನಟನಟಿಯರು ಸಂತೋಷಕೂಟದಲ್ಲಿ ಹಾಜರಿದ್ದರು. ಕಲಾವಿದರಾದ ಶ್ರೀನಿವಾಸಮೂರ್ತಿ, ಕೋಮಲ್, ವಿನಯಾ ಪ್ರಸಾದ್, ಸಂಧ್ಯಾ, ಭಾವನಾ, ವೀಣಾಭಟ್, ರಮೇಶ್‌ಭಟ್... ಹೀಗೆ ಎಲ್ಲರೂ ಅಲ್ಲಿ ಜಮಾಯಿಸಿದ್ದರು. ನಿರ್ದೇಶಕ ಪಿ.ವಾಸು ವಿಷ್ಣು ಅವರ 200ನೇ ಚಿತ್ರ 200 ದಿನ ಓಡುವುದು ಗ್ಯಾರಂಟಿ ಎಂದು ಭರವಸೆ ನೀಡಿದರು.



ಆದರೆ ಇಡೀ ಸಮಾರಂಭದಲ್ಲಿ ವಿಷ್ಣು ಬಗ್ಗೆ ಯಾರೂ ಚಕಾರವೆತ್ತಲಿಲ್ಲ, ಕನಿಷ್ಠ ವಿಷ್ಣು ಭಾವಚಿತ್ರಕ್ಕೆ ಹಾರ ಹಾಕಿ ಒಂದು ಶ್ರದ್ಧಾಂಜಲಿಯನ್ನಾದರೂ ಅರ್ಪಿಸಬಹುದಿತ್ತು, ಅದನ್ನು ಕೂಡಾ ಈ ಜನ ಮಾಡಲಿಲ್ಲ, ಬಹುತೇಕ ಎಲ್ಲರೂ ಚಿತ್ರದ ಯಶಸ್ಸು ಮತ್ತು ಸಂಭ್ರಮವನ್ನು ಹಂಚಿಕೊಳ್ಳುವುದರಲ್ಲೇ ಮಗ್ನರಾಗಿದ್ದರು. ಇಷ್ಟು ಬೇಗ ಈ ಜನ ನಾಯಕ ವಿಷ್ಣುರವರನ್ನೇ ಮರೆತರೇ? ಹಾಗಿತ್ತು ಅಂದಿನ ವಾತಾವರಣ.

ದ್ವಾರಕೀಶ್ ಮತ್ತು ಪಿ.ವಾಸು ಹಾಗು ವಿಷ್ಣು ನಡುವಿನ ಸಂಬಂಧ ಹಳಸಿದ್ದು ಅಂದು 'ಆಪ್ತಮಿತ್ರ'ದ ಸಂತೋಷಕೂಟದಲ್ಲಿ ಕಾಣಿಸಿತ್ತು. ಈ ಬಾರಿಯೂ ಅದೇ ಚಿತ್ರಣ 'ಆಪ್ತರಕ್ಷಕ' ಸಂತೋಷಕೂಟದಲ್ಲಿ ಕಾಣಿಸಿತು. ನಿರ್ಮಾಪಕ ಕೃಷ್ಣ ಪ್ರಜ್ವಲ್ ಮತ್ತು ನಿರ್ದೇಶಕ ಪಿ.ವಾಸು ನಡುವಿನ ಸಂಬಂಧ ಹಳಸಿತ್ತು, ಅದೇ ರೀತಿ ಕೃಷ್ಣ ಪ್ರಜ್ವಲ್ ಮತ್ತು ವಿಷ್ಣು ಮನೆಯವರ ನಡುವಿನ ಸಂಬಂಧವೂ ಕೆಟ್ಟುಹೋಗಿದೆ ಎಂಬುದಲ್ಲಿ ಗೊತ್ತಾಯಿತು. ಹೀಗಾಗಿ ಭಾರತಿ ವಿಷ್ಣುವರ್ಧನ್ ಆಗಲಿ, ಅಥವಾ ವಿಷ್ಣು ಕುಟುಂಬದ ಸದಸ್ಯರಾಗಲೀ ಅಲ್ಲಿ ಹಾಜರಿರಲಿಲ್ಲ,

ಇವೆಲ್ಲಾ ವೈಮನಸ್ಸು ಮತ್ತು ಅಸೂಯೆಗಳು ಸಿನಿಮಾವೊಂದು ಯಶಸ್ಸು ಕಂಡಾಗ ಸರ್ವೇಸಾಮಾನ್ಯ, ಆದರೆ ನಮ್ಮ ಸಮಸ್ಯೆ ಅದಲ್ಲ, 'ಆಪ್ತರಕ್ಷಕ'ನ ಯಶಸ್ಸಿಗೆ ಕಾರಣರಾದ ನಾಯಕ ವಿಷ್ಣುರವರನ್ನು ಈ ತಂಡ ಅಷ್ಟುಬೇಗ ಮರೆತದ್ದು ಮಾತ್ರ ಕ್ಷಮಾರ್ಹವಲ್ಲ.....

ತೆಲುಗು ರಕ್ಷಕುಡು!



'ಆಪ್ತಮಿತ್ರ' ಕನ್ನಡದಲ್ಲಿ ಸೂಪರ್ ಹಿಟ್ ಆಗುತ್ತಿದ್ದಂತೆ ಅದೇ ಚಿತ್ರವನ್ನು ತಮಿಳಿನಲ್ಲಿ 'ಚಂದ್ರಮುಖಿ'ಯನ್ನಾಗಿಸಿ, ಅದರಲ್ಲಿ ಸೂಪರ್‌ಸ್ಟಾರ್ ರಜನಿಕಾಂತ್ ನಟಿಸಿದ್ದರು.

ಅದೇ ರೀತಿ ಈಗ 'ಆಪ್ತರಕ್ಷಕ' ಜಯಭೇರಿ ಬಾರಿಸಿರುವುದರಿಂದ ಈ ಚಿತ್ರ ಕೂಡಾ ಪರಭಾಷೆಗೆ ರಿಮೇಕ್‌ಗೊಳ್ಳುತ್ತಿದೆ. ಆದರೆ ಎರಡೇ ಎರಡು ವ್ಯತ್ಯಾಸವೆಂದರೆ, ಈ ಬಾರಿ 'ಆಪ್ತರಕ್ಷಕ'ನನ್ನು ತೆಲುಗಿನವರು ಕಡ ತೆಗೆದುಕೊಂಡಿದ್ದಾರೆ. ಮತ್ತೊಂದು ವಿಶೇಷವೆಂದರೆ, ವಿಷ್ಣು ನಿಭಾಯಿಸಿದ್ದ ಪಾತ್ರದಲ್ಲಿ ತೆಲುಗರ ಆರಾಧ್ಯದೈವ ಚಿರಂಜೀವಿ ನಟಿಸುವುದು ಖಾತ್ರಿಗೊಂಡಿದೆ.

ಇನ್ನು 'ರಕ್ಷಕ' ತಮಿಳು ಮತ್ತು ಹಿಂದಿಯಲ್ಲೂ ನಿರ್ಮಾಣವಾಗಲಿದ್ದು ಹಿಂದಿಯಲ್ಲಿ ಅಮಿತಾಬ್ ನಟಿಸುವ ಸಾಧ್ಯತೆಯಿದೆ. ಆದರೆ ಈ ಎಲ್ಲ ಭಾಷೆಗಳಲ್ಲೂ ಸ್ವತಃ ಪಿ.ವಾಸು ಅವರೇ ನಿರ್ದೇಶಿಸಲಿದ್ದಾರಂತೆ.

ಶಂಕರ್ ಬದುಕಿದ್ದರೆ 25 ರಂಗಶಂಕರ ಕಟ್ಟುತ್ತಿದ್ದನೋ ಏನೋ?



ಪದ್ಮಶ್ರೀ ಅರುಂಧತಿ ನಾಗ್‌ಗಾಗಿ ಎರಡು ಸನ್ಮಾನ ಕಾರ್ಯಕ್ರಮಗಳು ನಡೆದವು. ಮೊದಲನೆಯದನ್ನು ರಂಗಕರ್ಮಿಗಳು ಒಟ್ಟು ಸೇರಿ ಕಲಾಕ್ಷೇತ್ರದಲ್ಲಿ ಮಾಡಿದರೆ ಎರಡನೆಯದನ್ನು ಫಿಲ್ಮ್ ಚೇಂಬರ್‌ನವರು ನೆರವೇರಿಸಿದರು.

ಎರಡೂ ಸಮಾರಂಭಗಳಲ್ಲಿ ಅರುಂಧತಿ ಭಾವುಕರಾಗಿ ಮಾತನಾಡದೆ ವಾಸ್ತವ ನೆಲೆಗಟ್ಟಿನಲ್ಲಿ ಮಾತನಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕಲಾಕ್ಷೇತ್ರದಲ್ಲಿ ಅವರು "ರಂಗಶಂಕರ ನಿರ್ಮಿಸಿದ್ದಕ್ಕಾಗಿ, ಕೇಂದ್ರ ಸರ್ಕಾರ ಈ ಪ್ರಶಸ್ತಿಯನ್ನು ನೀಡಿರಬಹುದು. ಈ ಪ್ರಶಸ್ತಿ ದೊರೆತಿದ್ದು ನಿಮ್ಮಿಂದಾಗಿ, ಇದರ ಕೀರ್ತಿ ನಿಮಗೆ ಸಲ್ಲುತ್ತದೆ. ನಾನು ಹೋದಮೇಲೆ ಈ ರಂಗಶಂಕರ ನನ್ನ ಮಗಳಿಗೆ ಸಲ್ಲುವುದಿಲ್ಲ; ಇದು ನಿಮಗೆ ಸಲ್ಲುತ್ತದೆ" ಎಂದು ಹೇಳಿದಾಗ ಸಭೆ ಒಂದುಕ್ಷಣ ದಿಗ್ಭ್ರಾಂತಗೊಂಡಿದ್ದು ನಿಜ.

ಫಿಲ್ಮ್ ಚೇಂಬರ್‌ನಲ್ಲಿ ಅರುಂಧತಿ ನಾಗ್ ಇನ್ನೂ ರಿಯಲಿಸ್ಟಿಕಾಗಿ ಮಾತನಾಡಿದರು. "ಬಹುಶಃ ಶಂಕರ್‌ನಾಗ್ ಬದುಕಿದ್ದರೆ, ಕನಿಷ್ಠ 25 ರಂಗಶಂಕರ ಕಟ್ಟುತ್ತಿದ್ದನೋ ಏನೋ? ನಾನು ಕೇವಲ ಒಂದು ರಂಗಶಂಕರ ಕಟ್ಟಿದ್ದೇನೆ. ಅದಕ್ಕಾಗಿ ಈ ಪ್ರಶಸ್ತಿ ಲಭಿಸಿದೆ." ಸಾಧಾರಣವಾಗಿ ಅರುಂಧತಿ ಸಭೆ-ಸಮಾರಂಭ-ಸನ್ಮಾನಗಳಿಗೆ ಒಪ್ಪುವುದೇ ಇಲ್ಲ, ಒಂದು ಸಿನಿಮಾದವರಿಗಾಗಿ ಮತ್ತೊಂದು ನಾಟಕದವರಿಗಾಗಿ.. ಹೀಗ ಎರಡು ಸಮಾರಂಭಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಅದೇನೇ ಇರಲಿ, ಮುಂಬಯಿ[illegible]ಂದ ಕರ್ನಾಟಕಕ್ಕೆ ಬಂದು ಕರ್ನಾಟಕದ ಸೊಸೆಯಾಗಿ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಒತ್ತಿರುವ ಈ ಒಂಟಿ ಮಹಿಳೆಯ ಸಾಧನೆ ಕಡಿಮೆಯೇನಲ್ಲ, ಈ ಪದ್ಮಶ್ರೀ ಪ್ರಶಸ್ತಿ ಆಕೆಯಲ್ಲಿರುವ ಜೀವನೋತ್ಸಾಹ ಮತ್ತು ರಂಗೋತ್ಸಾಹಕ್ಕೆ ಟಾನಿಕ್ ಆಗಲಿ....

ಅಪಸ್ವರದ ಪಲ್ಲವಿ....



ಸಂಗೀತ ಕ್ಷೇತ್ರದಲ್ಲಿ ಅಪಸ್ವರದ ದೊಡ್ಡ ಅಲೆಯೆದ್ದಿದೆ.

ತೀರಾ ಇತ್ತೀಚೆಗಷ್ಟೇ ಯುವಗಾಯಕಿ ಎಂ.ಡಿ.ಪಲ್ಲವಿಯ ಮೇಲೆ ರತ್ನಮಾಲ ಪ್ರಕಾಶ ಮತ್ತು ಲಹರಿ ಕಂಪೆನಿಯ ವೇಲು ಟೀಕಾಸ್ತ್ರದ ಸುರಿಮಳೆಯನ್ನು ಖಾಸಗಿ ಟಿವಿ ಚಾನೆಲ್ ಒಂದರ ಕಾರ್ಯಕ್ರಮದಲ್ಲಿ ಸುರಿಸಿದ್ದರು. ಆದಾದ ನಾಲ್ಕೇ ದಿನಕ್ಕೆ "ರತ್ನಮಾಲಾ ಪ್ರಕಾಶ ಟೀಕಿಸಿದ್ದು ಸರಿ, ಅವರಿಗೆ ನನ್ನ ಬೆಂಬಲವಿದೆ" ಎಂದು ಹಿರಿಯ ಗಾಯಕ ಶಿವಮೊಗ್ಗ ಸುಬ್ಬಣ್ಣ ಘೋಷಿಸಿದರು. ಹೀಗೆ ಈಗ ಹಿರಿಯ ಗಾಯಕರೆಲ್ಲಾ ಒಂದು ದಡದಲ್ಲಿದ್ದರೆ, ಕಿರಿಯರೆಲ್ಲಾ ಮತ್ತೊಂದು ದಡದಲ್ಲಿದ್ದಾರೆ. ಸುಗಮ ಸಂಗೀತ ಲೋಕದಲ್ಲಿ ಹಿರಿಯ-ಕಿರಿಯ ಗಾಯಕರ ನಡುವಿನ ಅಂತರ ವೃದ್ಧಿಸುತ್ತಾ ಹೋಗುತ್ತಿದೆ.

ಇಷ್ಟಾದರೂ ಎಂ.ಡಿ.ಪಲ್ಲವಿ ಮಾಡಿದ ಘನಘೋರ ಅಪರಾಧವೇನು ಗೊತ್ತೇ? ಇತ್ತೀಚೆಗೆ ಆಕೆ ಹೊರತಂದ ಒಂದು ಆಲ್ಬಮ್‌ನಲ್ಲಿ ರತ್ನಮಾಲಾ ಪ್ರಕಾಶ ಬಹಳ ವರ್ಷಗಳಿಂದ ಹಾಡುತ್ತಿದ್ದ ಹಾಡೊಂದನ್ನು ಪಲ್ಲವಿ ಹಾಡಿದ್ದಾರೆ. ರತ್ನಮಾಲಾ ಅವರ ಆರೋಪವೇನೆಂದರೆ, "ಈ ಹಾಡನ್ನು ಈ ಮೊದಲು ನಾನು ಹಾಡುತ್ತಿದ್ದೆ ಎಂದು ಹೇಳಬಹುದಿತ್ತು" ಎಂಬುದಷ್ಟೇ ಅವರ ಆಕ್ಷೇಪ.

ಹಾಡುಗಳನ್ನು ಹಾಡುವಾಗ ಈ ಹಿಂದೆ ಯಾರ್ಯಾರು ಅದನ್ನು ಹಾಡುತ್ತಿದ್ದರು ಎಂದು ಹೊಸ ಗಾಯಕಿ ಹೇಳುವ ಅಗತ್ಯವಾದರೂ ಏನಿದೆ? ಸಾಧಾರನವಾಗಿ ಆ ಹಾಡಿಗೆ ರಾಗ ಸಂಯೋಜಿಸಿದ ಮತ್ತು ಅದನ್ನು ಬರೆದ ಗೀತರಚನಕಾರರ ಹೆಸರನ್ನು ಹೇಳುವುದು ರೂಢಿ. ಆದ್ದರಿಂದ ರತ್ನಮಾಲಾ ಅವರು ಇದನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಿ ಸುಮ್ಮನಿರಬಹುದಿತ್ತು, ಇದನ್ನು ಇಷ್ಟು ದೊಡ್ಡ ರಾಷ್ಟ್ರೀಯ ಸಮಸ್ಯೆಯ ತರಹ ಎಳೆಯಬಾರದಿತ್ತು, ಎಷ್ಟಾದರೂ ರತ್ನಮಾಲಾ ಹಿರಿಯ, ಜನಪ್ರಿಯ ಗಾಯಕಿ ತಾನೇ? ಅಂತಹ ಹಿರಿಯರು ಹೊಸಗಾಯಕರ ಬೆನ್ನು ತಟ್ಟಬೇಕೇ ವಿನಃ ಅವರ ಮೇಲೆ ಗೂಬೆ ಕೂರಿಸಬಾರದಿತ್ತು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44